ರಾಮಕೃಷ್ಣ ಮಹಾಸಂಘದ ಏಕೈಕ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ



ಗುರುತತ್ತ್ವ – ಪರಂಪರೆ

₹ 14

ಜುಲೈ–2014

TRAVEL PAGE

DUBAI - 5 Days




SINGAPORE MALAYSIA
THAILAND : 11 Days





SRILANKA - 5 Days

Mt. Kailash & Manasa Sarovar Yatra



Highlights

Doctor / Nurse will accompany	Experience of over a decade	Most percentage of satisfied customers	Vegetarian Food	Homa & Pooja facilities at Manasa Sarovar
	Avail Rs. 30,000/- subsidy from Karnataka Govt. (Karnataka Citizens only)	Briefing Session at Bangalore	Bangalore Staff will accompany	Assistance in availing Travel Insurance

Shri Hansaa Travels

Recognised by Department of Tourism, Govt. of Karnataka

640, 40th Cross, 8th Block, Jayanagar, Bangalore - 70

: 080-26543891 / 26643276 / 0-9341215612 / 9341415612

: hansaatravels@gmail.com : hansaatravels.com

ಜುಲೈ 2014 ಸಂಪುಟ 15 ಸಂಚಿಕೆ 07

ವಿವೇಕಪ್ರಭ

















ವ್ಯವಸ್ಥಾಪಕ ಸಂಪಾದಕರು
ಸ್ವಾಮಿ ಮುಕ್ತಿದಾನಂದ

ಸಂಪಾದಕರು
ಸ್ವಾಮಿ ಜ್ಞಾನಯೋಗಾನಂದ

ನೆರವು:
ಆರ್. ಎಸ್. ಪೂರ್ಣಾನಂದ
ಎನ್. ಎಸ್. ಶಾರದಾಪ್ರಸಾದ್
ಡಾ. ಕೆ. ಎಲ್. ಪ್ರಸನ್ನಾಕ್ಷಿ
ಡಾ. ಎಚ್. ಪಾಂಡುರಂಗ ವಿಠಲ
ನರಸಿಂಹಮೂರ್ತಿ

ಅಕ್ಷರ ಜೋಡಣೆ
ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ
ಮಯೂರ್ ಗ್ರಾಫಿಕ್ಸ್, ಬೆಂಗಳೂರು

E-mail:
vivekaprabha@hotmail.com
kannada.vivekaprabha@gmail.com
Website: vivekaprabha.net
ಫೋನ್ : 9481533505

ಮುಖಪುಟ:
ಶ್ರೀಗುರುವಿನ ಮೂರ್ತಸ್ವರೂಪ ತಳೆದ ಶ್ರೀದಕ್ಷಿಣಾಮೂರ್ತಿಯ ವಿಗ್ರಹ

ಈ ಪತ್ರಿಕೆಯ ಧ್ಯೇಯ

ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.
– ಸ್ವಾಮಿ ವಿವೇಕಾನಂದ

ಚಂದಾ ವಿವರ : ಬಿಡಿ ಪ್ರತಿ: ₹ 14; **ವಾರ್ಷಿಕ:** ₹ 140; **ಮೂರು ವರ್ಷ:** ₹ 375; **ಆಜೀವ (25 ವರ್ಷ):** ₹ 3,000; **ಪೋಷಕ ಸಹಾಯಧನ:** ₹ 5,000 ಅಥವಾ ಹೆಚ್ಚು. **ವಿದೇಶಗಳಿಗೆ:** (ಏರ್‌ಮೇಲ್): **ವಾರ್ಷಿಕ:** $20; **ಮೂರು ವರ್ಷ:** $60; **ಆಜೀವ (25 ವರ್ಷ):** $300; **ಪೋಷಕ ಸಹಾಯಧನ:** $600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳಲ್ಲಿನ ಅಭಿಪ್ರಾಯಗಳು ಲೇಖಕರವು. ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಜಾಹೀರಾತುಗಳಲ್ಲಿನ ಮಾಹಿತಿಗಳ ನಿಖರತೆಗೆ ಈ ಪತ್ರಿಕೆ ಜವಾಬ್ದಾರಿಯಲ್ಲ. ಈ ಪತ್ರಿಕೆಯಲ್ಲಿನ ಯಾವ ಭಾಗವನ್ನೂ ಪ್ರಕಾಶಕರ ಲಿಖಿತ ಅನುಮತಿ ಇಲ್ಲದೆ ಬೇರೆಡೆ ಪ್ರಕಟಿಸುವಂತಿಲ್ಲ.

Book early
Get Discount

ಪ್ರವಾಸದ ವಿಶೇಷತೆಗಳು

Orchid
Travel & Tours

ಬೆಂಗಳೂರಿನಿಂದ ಹೊರಟು ಬೆಂಗಳೂರು ತಲುಪುವವರೆಗೆ
ಕನ್ನಡ ಮತ್ತು ಇತರೇ ಭಾಷೆ ಮಾತನಾಡಬಲ್ಲ, ಪ್ರವಾಸಿ ಮಾರ್ಗದರ್ಶಕರು ಜೊತೆಯಲ್ಲಿ ಪ್ರಯಾಣಿಸುತ್ತಾರೆ
ವಿದೇಶದಲ್ಲಿ ಭಾರತೀಯ ಊಟೋಪಚಾರ ವ್ಯವಸ್ಥೆ ಇರುತ್ತದೆ.



15 ದಿನಗಳ ಗ್ರ್ಯಾಂಡ್ ಯುರೋಪ್ ಪ್ರವಾಸ

ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್
ಆಸ್ಟ್ರಿಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ, ವ್ಯಾಟಿಕನ್

ಹೊರಡುವ ತಿಂಗಳು : ಜುಲೈ 18, ಸೆಪ್ಟೆಂಬರ್ 4

ಸಂಪರ್ಕಿಸಿ
9900080794
9900080793/96



15 ದಿನಗಳ ಅಮೇರಿಕಾ ಪ್ರವಾಸ

ನ್ಯೂಯಾರ್ಕ್, ವಾಷಿಂಗ್‌ಟನ್, ಫಿಲಾಡಾಲ್‌ಫಿಯ, ಸ್ಯಾಂಡಿಯಾಗೋ
ಲಾಸ್‌ಏಂಜಲೀಸ್, ಲಾಸ್‌ವೇಗಾಸ್, ಸ್ಯಾನ್‌ಫ್ರಾನ್ಸಿಸ್‌ಕೋ, ನಯಾಗರಫಾಲ್ಸ್

ಹೊರಡುವ ತಿಂಗಳು : ಆಗಸ್ಟ್ 31


ಸಂಪರ್ಕಿಸಿ
9900080794
9900080790



20 ದಿನಗಳ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಪ್ರವಾಸ

ಆಸ್ಟ್ರೇಲಿಯಾದ 3 ಮಹಾನಗರಗಳು : ಸಿಡ್ನಿ, ಗೋಲ್ಡ್ ಕೋಸ್ಟ್, ಕೈರ್ನ್ಸ್
ನ್ಯೂಜಿಲ್ಯಾಂಡ್‌ನ 4 ಮಹಾನಗರಗಳು : ಆಕ್ಲೆಂಡ್, ರೊಟೂರಾ, ಕ್ವೀನ್ಸ್‌ಟೌನ್, ಕ್ರೈಸ್ಟ್‌ಚರ್ಚ್
ಹೊರಡುವ ತಿಂಗಳು : ಅಕ್ಟೋಬರ್ 30

ಸಂಪರ್ಕಿಸಿ
9900080793
9900080794



3 ದಿನಗಳ ಅಹೋಬಿಲಂ ನವನಾರಸಿಂಹ ಪ್ರವಾಸ

ಪ್ರವಾಸ ಸ್ಥಳಗಳು: ಜ್ವಾಲಾನರಸಿಂಹ, ಪಾವನನರಸಿಂಹ,
ವರಹಾನರಸಿಂಹ, ಕಾರಂಜಿನರಸಿಂಹ, ಮಾಲೋಲನರಸಿಂಹ,
ಯೋಗನರಸಿಂಹ, ಭಾರ್ಗವನರಸಿಂಹ, ಉಗ್ರನರಸಿಂಹ,
ಛತ್ರವಟನರಸಿಂಹ ಹಾಗೂ ಕೆಳಗಿನ ಲಕ್ಷ್ಮೀನರಸಿಂಹ
ಹೊರಡುವ ತಿಂಗಳು : ಜುಲೈ 25, ಆಗಸ್ಟ್ 15, 22

ಸಂಪರ್ಕಿಸಿ
9900080794
9900080792



13 ದಿನಗಳ ಕೈಲಾಸ ಮಾನಸ ಸರೋವರ ಯಾತ್ರೆ

ಬೆಂಗಳೂರಿನಿಂದ ಬೆಂಗಳೂರಿಗೆ ವಿಮಾನದಲ್ಲಿ
30,000 ರೂ. ಧನ ಸಹಾಯ ಕರ್ನಾಟಕ ಸರ್ಕಾರದ ವತಿಯಿಂದ
ಹೊರಡುವ ತಿಂಗಳು : ಆಗಸ್ಟ್ 6, 14

ಸಂಪರ್ಕಿಸಿ
9900080799/792
9900080793/794

Orchid Travel & Tours
98, 1st Floor, D.V.G. Road, Basavanagudi, Bangalore - 560 004.
www.orchidtours.net

Tel : 080-26670646
26621983, 26670647
26617178

ಪ್ರಾರ್ಥನೆ

'ವಿಶ್ವಸಾರತಂತ್ರ' ದಿಂದ

ಅಖಂಡಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಮ್ ।
ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥

ಅಖಂಡಮಂಡಲಾಕಾರವಾದ ಚರಾಚರ ಜಗತ್ತನ್ನು ವ್ಯಾಪಿಸಿರುವ ತತ್ತ್ವವು ಯಾರಿಂದ ತೋರಿಸಲ್ಪಟ್ಟಿತೋ ಅಂತಹ ಶ್ರೀಗುರುವಿಗೆ ನಮಸ್ಕಾರ.

ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥

ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾದವನ ಕಣ್ಣನ್ನು ಜ್ಞಾನವೆಂಬ ಅಂಜನಶಲಾಕೆಯಿಂದ ಬಿಡಿಸಿದ ಶ್ರೀಗುರುವಿಗೆ ನಮಸ್ಕಾರ.

ಚೈತನ್ಯಃ ಶಾಶ್ವತಃ ಶಾಂತೋ ವ್ಯೋಮಾತೀತೋ ನಿರಂಜನಃ ।
ಬಿಂದುನಾದಕಲಾತೀತಸ್ತಸ್ಮೈ ಶ್ರೀಗುರವೇ ನಮಃ ॥

ಚೈತನ್ಯನೂ, ಶಾಶ್ವತನೂ, ಶಾಂತನೂ, ವ್ಯೋಮಾತೀತನೂ, ನಿರಂಜನನೂ, ಬಿಂದು-ನಾದ-ಕಲೆಗಳಿಗೆ ಅತೀತನೂ ಆದ ಶ್ರೀಗುರುವಿಗೆ ನಮಸ್ಕಾರ.

ಅನೇಕಜನ್ಮಸಂಪ್ರಾಪ್ತ ಕರ್ಮೇಂಧನವಿದಾಹಿನೇ ।
ಆತ್ಮಜ್ಞಾನಾಗ್ನಿದಾನೇನ ತಸ್ಮೈ ಶ್ರೀಗುರವೇ ನಮಃ ॥

ಜನ್ಮಜನ್ಮಾಂತರಗಳಿಂದ ಬಂದ ಕರ್ಮವೆಂಬ ಕಾಷ್ಠವನ್ನು ಆತ್ಮಜ್ಞಾನವೆಂಬ ಅಗ್ನಿಯಿಂದ ಸುಟ್ಟು ಭಸ್ಮಮಾಡಬಲ್ಲ ಶ್ರೀಗುರುವಿಗೆ ನಮಸ್ಕಾರ.

ಸೂಕ್ತಿಪ್ರಭ

ಗುರುಮಹಿಮೆ

ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್॥

ಪಾರಮಾರ್ಥಿಕ ಸತ್ಯವನ್ನು ತಿಳಿಯುವುದಕ್ಕಾಗಿ ಶಿಷ್ಯನು ಸಮಿತ್ತುಗಳ ಕಂತೆಯನ್ನು ಕೈಯಲ್ಲಿ ಹಿಡಿದುಕೊಂಡು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವನ್ನೇ ಹೊಂದಬೇಕು.

-ಮುಂಡಕೋಪನಿಷತ್, ೧.೨.೧೨

ನ ನರೇಣಾವರೇಣ ಪ್ರೋಕ್ತ ಏಷ
ಸುವಿಜ್ಞೇಯೋ ಬಹುಧಾ ಚಿಂತ್ಯಮಾನಃ ।
ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ
ಅಣೀಯಾನ್ ಹ್ಯತರ್ಕ್ಯಮಣುಪ್ರಮಾಣಾತ್ ॥

ಹೀನ ಮನುಷ್ಯನಿಂದ ಹೇಳಲ್ಪಟ್ಟರೆ ಈ ಆತ್ಮನನ್ನು ಚೆನ್ನಾಗಿ ಅರಿತುಕೊಳ್ಳಲು ಆಗುವುದಿಲ್ಲ. ಏಕೆಂದರೆ ಅನೇಕರು ಅನೇಕ ಪ್ರಕಾರವಾಗಿ ಇವನನ್ನು ಕುರಿತು ಚಿಂತಿಸುತ್ತಾರೆ. ಅನನ್ಯನಾದ ಆಚಾರ್ಯ ಅಥವಾ ಗುರುವಿನಿಂದ ಹೇಳಲ್ಪಟ್ಟರೆ ಈ ಆತ್ಮನ ವಿಷಯದಲ್ಲಿ ಬೇರೆ ಏನನ್ನೂ ತಿಳಿಯಬೇಕಾಗಿಲ್ಲ. ಏಕೆಂದರೆ ಅಣುಪ್ರಮಾಣಕ್ಕಿಂತಲೂ ಸೂಕ್ಷ್ಮನಾಗಿರುವ ಆತ್ಮನು ಅತರ್ಕ್ಯನು.

ನೈಷಾ ತರ್ಕೇಣ ಮತಿರಾಪನೇಯಾ
ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ ।

ಈ ಆತ್ಮಜ್ಞಾನವು ತರ್ಕದಿಂದ ಪಡೆಯತಕ್ಕದ್ದಲ್ಲ; ಬೇರೆಯವನಿಂದಲೇ (ಸತ್ಯವನ್ನು ಅರಿತ ಗುರುವಿನಿಂದಲೇ) ಹೇಳಲ್ಪಟ್ಟರೆ ಸುಜ್ಞಾನವುಂಟಾಗುವುದು.

-ಕಠೋಪನಿಷತ್, ೧.೨.೮-೯

ಗುರುವಿನ ಮೇಲೆ ಶ್ರದ್ಧೆ, ಭಕ್ತಿ, ಗೌರವಗಳಿಲ್ಲದೆ ಇದ್ದರೆ ಯಾವ ಆಧ್ಯಾತ್ಮಿಕ ವಿಕಾಸವೂ ಶಿಷ್ಯನಲ್ಲಿ ಆಗುವುದಿಲ್ಲ. ಎಲ್ಲಿ ಗುರು ಶಿಷ್ಯರ ಇಂತಹ ಸಂಬಂಧವಿದೆಯೊ ಅಲ್ಲಿ ಮಾತ್ರ ಪ್ರಚಂಡ ಆಧ್ಯಾತ್ಮಿಕ ಜೀವಿಗಳು ವಿಕಾಸವಾಗುವರು.

-ಸ್ವಾಮಿ ವಿವೇಕಾನಂದ

ಗುರುಶಿಷ್ಯ ಸಂಬಂಧವನರಸಲೆಂದು ಹೋದರೆ
ತಾನೆ ಗುರುವಾದ, ತಾನೆ ಶಿಷ್ಯನಾದ, ತಾನೆ ಲಿಂಗವಾದ.
ಗುಹೇಶ್ವರಾ, ನಿಮ್ಮ ಶರಣನ ಕಾಯದ ಕೈಯಲ್ಲಿ ಲಿಂಗವ
ಕೊಟ್ಟರೆ ಭಾವ ಬತ್ತಲೆಯಾಯಿತ್ತು.

-ಅಲ್ಲಮ ಪ್ರಭು

ಒಬ್ಬನಿಗೆ ನಿಜವಾಗಿಯೂ ದೇವರ ಮೇಲೆ ಭಕ್ತಿ ಹುಟ್ಟಿ, ಪೂಜೆ ಜಪ ಧ್ಯಾನಗಳನ್ನು ಮಾಡಬೇಕೆಂಬ ಆಸೆಯಿದ್ದರೆ ದೇವರು ಅವನಿಗೆ ಬೇಕಾದ ಗುರುವನ್ನು ನಿಜವಾಗಿ ಒದಗಿಸಿಯೇ ಒದಗಿಸುವನು. ಈ ವಿಚಾರದಲ್ಲಿ ಯಾವ ಚಿಂತೆಯನ್ನೂ ಮಾಡಬೇಕಾಗಿಲ್ಲ.

-ಶ್ರೀರಾಮಕೃಷ್ಣ ಪರಮಹಂಸರು

ಏಕಾಂತಿಕ ಭಕ್ತಿಯಿಂದ ನಿಜವಾದ ಗುರುವಿನ ಸೇವೆ ಮಾಡಿ. ಗುರುವೇ ಪರಮ ಪವಿತ್ರನೆಂದು ತಿಳಿಯಿರಿ. ಅವನೇ ನಿಮ್ಮ ಮನಸ್ಸಿನ ಎಲ್ಲ ಆಸೆಗಳನ್ನು ಪೂರ್ತಿಗೊಳಿಸುವನು.

-ಗುರುನಾನಕ್

ಗುರುವನ್ನು ಭೂಮಿಯ ಮೇಲೆ ಇರುವ ಭಗವಂತನ ಅವತಾರವೆಂದು ಶಿಷ್ಯನು ಭಾವಿಸಬೇಕು. ಅನವರತ ಗುರು ಧ್ಯಾನದಿಂದ ಶಿಷ್ಯನ ಮನಸ್ಸು, ದೇಹ ಶುದ್ಧವಾಗುವುದು.

-ಸ್ವಾಮಿ ಬ್ರಹ್ಮಾನಂದ


Long Anticipated Book!

"A Concise Encyclopaedia of Hinduism"

Volume - 4

(Supplement A-Z)

by Swami Harshananda



FEATURES

- ★ Covers all aspects of Hindu Religion, Philosophy and Culture
- ★ Printed on natural shade, super quality maplitho paper
- ★ Binding in full calico with multi-colour cover
- ★ Size: Crown quarto (24 x 18 cm)
- ★ Total number of pages: 192
- ★ Contains 37 photographs
- ★ Weight: 765gms

Price
₹ 300

Postage and packing charges extra

Note:-
"A Concise Encyclopaedia of Hindusim" a set of 3 volumes is also available for ₹ 2000/- (Postage charges extra)

Published by:
Ramakrishna Math
Bull Temple Road
Bangalore - 560 019

RAMAKRISHNA MATH

Phone
Bookstall:080-26616161
Office:080-26613149

Email
bookstall@rkmathbangalore.org
rkmfive@gmail.com

ತಸ್ಮೈ ಶ್ರೀಗುರವೇ ನಮಃ

ಪ್ರಾತಃಕಾಲ. ಇನ್ನೂ ಎಳೆಬಿಸಿಲು ಆಶ್ರಮದ ಗುಡಿಸಲುಗಳ ಮೇಲೆ ಬಿದ್ದಿಲ್ಲ. ಕಾಡಿನ ತುಂಬೆಲ್ಲ ಹಕ್ಕಿಗಳ ನಿನಾದ. ಪಕ್ಕದಲ್ಲಿ ಹರಿಯುತ್ತಿದ್ದ ನದಿಯ ಮಂಜುಳ ನಿನಾದ ಹಿತಕರವಾಗಿ ಕೇಳಿಬರುತ್ತಿದೆ. ಕಿಶೋರ ಬಾಲಕನೊಬ್ಬ ಹಿಂಜರಿಯುತ್ತಲೇ ಅಂಗಳಕ್ಕೆ ಕಾಲಿಟ್ಟ. ಶುಭ್ರ ಬಿಳಿಯ ವಸ್ತ್ರ; ತಲೆಯ ಮೇಲೆ ಕಟ್ಟಿದ ಜಟೆ; ತೇಜಸ್ವೀ ಮುಖ. ಇನ್ನೂ ಎಳೆಯ ವಯಸ್ಸು. ಅವನನ್ನು ನೋಡಿ ಗುಡಿಸಿಲಿನಿಂದ ಹೊರಬಂದ ಋಷಿಯೊಬ್ಬ ಕೇಳಿದ, "ಯಾರಪ್ಪಾ ನೀನು? ಎಲ್ಲಿಂದ ಬಂದೆ?" ಅದಕ್ಕೆ ಉತ್ತರವಾಗಿ ಹುಡುಗ ಕೈಯಲ್ಲಿದ್ದ ಸಮಿತ್ತುಗಳ ಹೊರೆಯನ್ನು ಗುರುಗಳ ಪಾದಗಳ ಬಳಿ ಇರಿಸಿ, ಸಾಷ್ಟಾಂಗ ನಮಸ್ಕರಿಸಿದ. "ಏಳು ಮಗೂ, ಎದ್ದೇಳು. ಇತ್ತ ಬಾ..." ಎಂದು ಗುರು ಅವನನ್ನು ಗುಡಿಸಲಿನ ಒಳಕ್ಕೆ ಕರೆದೊಯ್ದ. ಶಿಷ್ಯನಿಗೆ ಗುರು ಸಿಕ್ಕಿದ; ಗುರುವಿಗೂ ಶಿಷ್ಯನೊಬ್ಬ ಸಿಕ್ಕಿದ. ಹಳೆಯ ಕಾಲದಲ್ಲಿ ಶಿಷ್ಯ ಗುರುವಿನ ಬಳಿಗೆ ಹೋಗುತ್ತಿದ್ದದು ಹೀಗೆ.

ಭಾರತೀಯ ಪರಂಪರೆಯಲ್ಲಿ ಗುರು-ಶಿಷ್ಯರ ನಡುವಿನ ಸಂಬಂಧ ವಿಶೇಷ ಬಗೆಯದು. ಶಿಷ್ಯನಿಗೆ ಗುರುವೇ ಸರ್ವಸ್ವ. ಅವನೇ ತಾಯಿ, ತಂದೆ, ದೇವರು. ಒಂದು ಪ್ರಸಿದ್ಧ ಗುರು ಸ್ತೋತ್ರದಲ್ಲಿ, **"ಗುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ । ಗುರುಃ ಸಾಕ್ಷಾತ್ ಪರಬ್ರಹ್ಮಃ ತಸ್ಮೈ ಶ್ರೀಗುರವೇ ನಮಃ ॥"** ಎಂದು ಸ್ತುತಿಸಲಾಗಿದೆ. ಬ್ರಹ್ಮ, ವಿಷ್ಣು, ಮಹೇಶ್ವರ ಎಲ್ಲವೂ ಗುರುವೇ; ಸಾಕ್ಷಾತ್ ಪರಬ್ರಹ್ಮವೂ ಗುರುವೇ-ಎನ್ನುವಲ್ಲಿ ಗುರುವೇ ತನ್ನ ಪರಮಗಮ್ಯವಾದ ತತ್ತ್ವ. ಅವನೇ ತನ್ನ ಅಂತಿಮ ಗುರಿ; ಅವನನ್ನು ಬಿಟ್ಟು ಬೇರೇನೂ ಇಲ್ಲ ಎಂಬ ಭಾವನೆಯಿದೆ. ಇದು ಕೇವಲ ಭಾವನೆಯಲ್ಲ; ಉತ್ಪ್ರೇಕ್ಷೆಯಂತೂ ಅಲ್ಲವೇ ಅಲ್ಲ. ಆಧ್ಯಾತ್ಮಿಕವಾಗಿ ಶಿಷ್ಯನು ಗುರುವನ್ನು ಸಾಕ್ಷಾತ್ ದೇವರೆಂದೇ ಕಾಣುತ್ತಾನೆ.

ಗುರುವಿಗೆ ಇಷ್ಟು ಉನ್ನತವಾದ ಸ್ಥಾನವನ್ನು ನೀಡಿ, ಅವನ ಮೇಲೆ ಅಸಾಧಾರಣ ಭಕ್ತಿ, ಗೌರವಗಳನ್ನು ಸಲ್ಲಿಸುವ ಈ ಸಂಪ್ರದಾಯ ನಮ್ಮಲ್ಲಿ ಬೆಳೆದು ಬಂದದ್ದಾದರೂ ಹೇಗೆ? ಅದಕ್ಕೇನಾದರೂ ಕಾರಣವಿದೆಯೆ? ಆಚರಣೆಯ ಮೂಲಕ ಹರಿದು ಬಂದಿರುವ ಈ ಪರಂಪರೆಯ ಮೂಲವನ್ನು ಅರಸಬೇಕಾದರೆ, ಈ ಗುರುಪರಂಪರೆಯ ತಾತ್ತ್ವಿಕ ಹಿನ್ನೆಲೆಯನ್ನು ನಾವು ಗಮನಿಸಬೇಕು.

ಗುರುತತ್ತ್ವ : "ಸಚ್ಚಿದಾನಂದನೇ ಗುರು" ಎನ್ನುತ್ತಿದ್ದರು ಶ್ರೀರಾಮಕೃಷ್ಣರು. *(ಶ್ರೀರಾಮಕೃಷ್ಣ ವಚನವೇದ ಭಾಗ ೧, ಪು. ೧೩೭)* ಪರಬ್ರಹ್ಮವಸ್ತು ತನ್ನ ನೈಜಸ್ವರೂಪದಲ್ಲಿ ನಿರ್ಗುಣ-ನಿರಾಕಾರ ಹಾಗೂ ಅವ್ಯಕ್ತವಾದದ್ದು; ಅದನ್ನು ಇಂದ್ರಿಯ, ಮನಸ್ಸು, ಬುದ್ಧಿಗಳು ಗ್ರಹಿಸಲಾರವು; ಮಾತು ವಿವರಿಸಲಾರದು-ಹೀಗೆನ್ನುತ್ತದೆ ವೇದಾಂತ. ಅವ್ಯಕ್ತವಾದ, ಅನಿರ್ವಚನೀಯವಾದ ಬ್ರಹ್ಮವನ್ನು ಕಂಡುಕೊಳ್ಳುವುದಾದರೂ ಹೇಗೆ? ಎಲ್ಲಿ ಮಾತು, ಮನಸ್ಸುಗಳು ಹಿಂದಿರುಗುವವೋ (**"ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ"** -*ತೈತ್ತಿರೀಯ ಉಪನಿಷತ್ತು, ೨.೯)* ಅಂಥ ಅಗೋಚರ ಸತ್ಯವನ್ನು ತಿಳಿಯುವ ಉಪಾಯವೇನು?

ಇದಕ್ಕೆ ಉಪನಿಷತ್ತುಗಳಲ್ಲಿ ಉತ್ತರವಿದೆ- "ಯಾವ ತತ್ತ್ವವು ತಾನಾಗಿಯೇ ಒಬ್ಬನಿಗೆ ತನ್ನ ಸತ್ಯವನ್ನು ತಿಳಿಸಿಕೊಡುವುದೋ, ಅದು ಅಂಥವನಿಗೆ ಮಾತ್ರ ಲಭ್ಯವಾಗುವುದು". (**'ಯಮೇವೈಷ ವೃಣುತೇ ತೇನ ಲಭ್ಯ'** -*ಕಠೋಪನಿಷತ್, ೧.೨.೨೩*) ಇದರರ್ಥ, ಸ್ವತಃ ಪರಮಾತ್ಮನೇ ತನ್ನ ಸತ್ಯವನ್ನು ತಿಳಿಸಿಕೊಟ್ಟಲ್ಲದೆ ಭಗವಂತನ ಸ್ವರೂಪವು ಮನುಷ್ಯನಿಗೆ ತಿಳಿಯಲಾಗದು. ಹಲವು ಪೌರಾಣಿಕ, ವೈದಿಕ ಕಥೆಗಳಲ್ಲಿ ಕಂಡುಬರುವ ಮಹಾಪುರುಷರು ಭಗವಂತನ ಅವಿರ್ಭಾವವೆಂದೇ ಪರಿ ಗಣಿಸಲ್ಪಟ್ಟಿದ್ದಾರೆ. ಅಂಥಹವರನ್ನು ಋಷಿ, ಯೋಗಿ, ಅವತಾರ ಎಂದೆಲ್ಲ ಹೇಳಲಾಗಿದೆ. ಇವರ ಉದ್ದೇಶವೇ ಭಗವಂತನ ತತ್ತ್ವವನ್ನು ಜೀವರುಗಳಿಗೆ ತಿಳಿಸಿಕೊಡುವುದು. ಇವರನ್ನೇ ಗುರುವೆಂದು ಸಂಬೋಧಿಸಲಾಗಿದೆ. ಯಾವ ಕಾರಣದಿಂದಲೂ ಗಳಿಸಿಕೊಳ್ಳಲಾಗದ ಆತ್ಯಂತಿಕ ಸತ್ಯವನ್ನು ತಿಳಿಸಿಕೊಡುವುದರಿಂದ, ಆ ಮೂಲಕ ಆಧ್ಯಾತ್ಮಿಕ ರಹಸ್ಯವನ್ನು ಶಿಷ್ಯನಿಗೆ ಬೋಧಿಸುವುದರಿಂದ ಗುರುವನ್ನು ಶಿಷ್ಯನು, **"ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ"** ('ಕಣ್ಣನ್ನು ತೆರೆಸಿದಂತಹ ಗುರುವಿಗೆ ನಮಸ್ಕಾರ') ಎಂದು ಸ್ತುತಿಸುತ್ತಾನೆ. ಅಜ್ಞಾನದ ತೆರೆಯನ್ನು ಸರಿಸಲು ಗುರುವಿನ ಅನುಗ್ರಹವಿಲ್ಲದೆ ಬೇರೆ ಉಪಾಯವಿಲ್ಲ ಎನ್ನುವ ಕಾರಣದಿಂದಾಗಿ ಶಿಷ್ಯನಿಗೆ ಗುರು ಎಲ್ಲಕ್ಕಿಂತಲೂ ಮಿಗಿಲು; ಎಂದೆಂದಿಗೂ ಪೂಜ್ಯನು. ಆದ್ದರಿಂದ ಅವನು ತನ್ನೆಲ್ಲವನ್ನೂ ಗುರುವಿನ ಪಾದಗಳಲ್ಲಿ ಸಮರ್ಪಿಸುತ್ತಾನೆ. ಹೀಗೆ ಇಲ್ಲಿ ಕಂಡುಬರುವ ಎಲ್ಲ ಗೌರವ, ಭಕ್ತಿಗಳ ಮೂಲ ಆಧ್ಯಾತ್ಮಿಕ ತತ್ತ್ವದಲ್ಲೇ ಅಡಗಿದೆ.

ವಿನಯ-ಮೊದಲ ಅರ್ಹತೆ : ಶಿಷ್ಯನು ಗುರುವನ್ನರಸಿ ಹೋಗುವಾಗ, ಯಜ್ಞಕ್ಕೆ ಬೇಕಾದ ಸಮಿತ್ತನ್ನು ತೆಗೆದುಕೊಂಡು ಹೋಗಿ, ಗುರುವಿಗೆ ಅರ್ಪಿಸಬೇಕೆಂಬುದು ಸಂಪ್ರದಾಯ. ಅದು ಸಮರ್ಪಣೆಯ ಸಂಕೇತ. ತಾನು ಗುರುಸೇವೆ ಮಾಡುತ್ತ ಅವರಿಗೆ ವಿಧೇಯನಾಗಿದ್ದುಕೊಂಡು ವಿದ್ಯಾರ್ಜನೆ ಮಾಡುತ್ತೇನೆ ಎಂಬ ಭಾವ ಅದರ ಹಿಂದೆ ಅಡಗಿದೆ. ಈ ರೀತಿ ಶಿಷ್ಯನು ತನ್ನ ಎಲ್ಲ ಅಹಂಕಾರ, ಜಂಭ, ಅಭಿಮಾನಗಳನ್ನು ಇಲ್ಲದಾಗಿಸಿ, ವಿನಯದಿಂದ ಗುರುವಿನ ಬಳಿಸಾರಬೇಕು ಎಂದು ಸಂಪ್ರದಾಯ ವಿಧಿಸುತ್ತದೆ. **'ತದ್ವಿದ್ಧಿ ಪ್ರಣಿಪಾತೇನ, ಪರಿಪ್ರಶ್ನೇನ ಸೇವಯಾ'** ('ಈ ಆತ್ಮ ವಿದ್ಯೆಯನ್ನು ಗುರುವಿಗೆ ಶರಣಾಗತನಾಗುವ, ವಿನಯದಿಂದ ಪ್ರಶ್ನಿಸುವ ಹಾಗೂ ಗುರುಸೇವೆ ಮಾಡುವ ಮೂಲಕ ಪಡೆದುಕೊಳ್ಳಬೇಕು') ಎಂದು *ಭಗವದ್ಗೀತೆ*ಯೂ,

'ತಮಾರಾಧ್ಯ ಗುರುಂ ಭಕ್ತ್ಯಾ ಪ್ರಹ್ವ-ಪ್ರಶ್ರಮ-ಸೇವನೈಃ । ಪ್ರಸನ್ನೇ ತಮನುಪ್ರಾಪ್ಯ ಪೃಚ್ಛೇಜ್ಞಾತವ್ಯಮಾತ್ಮನಃ' ('ಅಂಥ ಗುರುವನ್ನು ಭಕ್ತಿಯಿಂದ ಆರಾಧಿಸಿ, ನಮ್ರತೆ, ವಿನಯ, ಸೇವೆ ಇವುಗಳಿಂದ ಪ್ರಸನ್ನನಾದ ಅವನ ಬಳಿ ತಾನು ತಿಳಿಯಬೇಕೆಂದಿರುವುದನ್ನು ಕುರಿತು ಪ್ರಶ್ನಿಸಬೇಕು') ಎಂದು *ವಿವೇಕಚೂಡಾಮಣಿಯೂ* (ಶ್ಲೋ.೩೪) ಹೇಳುತ್ತದೆ. ಯಾವುದೇ ಜ್ಞಾನವನ್ನು ಪಡೆಯುವಲ್ಲಿ ಅಹಂಕಾರ, ದರ್ಪ, ಅಭಿಮಾನಗಳು ಅಡ್ಡಿಯಾಗುತ್ತವೆ. ಯಾರು ತನ್ನ ಹೃದಯವನ್ನು ತೆರೆದು ವಿದ್ಯೆಯನ್ನು ಆದರಿಸು ತ್ತಾನೋ, ಯಾವುದೇ ಹೊಸ ವಿಚಾರವನ್ನು ಸ್ವೀಕರಿಸಲು ಮುಕ್ತ ಮನಸ್ಸನ್ನು ಹೊಂದಿರುತ್ತಾನೋ ಅವನು ಮಾತ್ರ ವಿದ್ಯೆಗೆ ಅಧಿಕಾರಿ; ಅವನಿಗೆ ಗುರು ಎಲ್ಲವನ್ನೂ ಕಲಿಸುತ್ತಾನೆ. ಈ ಸತ್ಯ ನಮ್ಮ ದೇಶದ ಮಹಾನ್ ಗುರುಗಳಿಗೆ ಚೆನ್ನಾಗಿ ತಿಳಿದಿತ್ತು. ಲೌಕಿಕ ವಿದ್ಯೆಯನ್ನು **ನೋಡಿ** ಕಲಿಯಬಹುದು, **ಕೇಳಿ** ಕಲಿಯ ಬಹುದು; ಅನೇಕ ಸಲ ಸ್ವಪ್ರಯತ್ನದಿಂದ ಕಲಿಯಬಹುದು. ಆದರೆ ಆಧ್ಯಾತ್ಮಿಕ ವಿದ್ಯೆ ಹಾಗಲ್ಲ - ಪೂರ್ಣಜ್ಞಾನ ಪಡೆದ ಗುರುವಿನಿಂದ ಕಲಿತಲ್ಲದೆ ಅದನ್ನು ಪಡೆಯಲಾಗದು. ಆದ್ದರಿಂದ ಕಲಿಸುವ ಗುರು ಇಲ್ಲಿ ಅತ್ಯಂತ ಮುಖ್ಯ. ಅವನನ್ನು ಒಲಿಸದೆ ವಿದ್ಯೆಯನ್ನು ಪಡೆಯುವುದು ಅಸಾಧ್ಯ; ಆಧ್ಯಾತ್ಮಿಕ ಶಿಕ್ಷಣವು ವಿನಯ, ಅಹಂಕಾರಶೂನ್ಯತೆ, ಸೇವಾ ಮನೋಭಾವ, ಆತ್ಮ ಸಮರ್ಪಣೆ ಈ ಗುಣಗಳನ್ನೆಲ್ಲ ಪೂರ್ವಭಾವಿ ಸಿದ್ಧತೆ ಎಂದೇ ಭಾವಿಸುತ್ತದೆ. ಭಾರತದಲ್ಲಿ ಎಲ್ಲ ವಿದ್ಯೆಗಳೂ ಆಧ್ಯಾತ್ಮ ವಿದ್ಯೆ ಯನ್ನು ಅನುಸರಿಸಿ ಬೆಳೆದು ಬಂದವು. ಆದ್ದರಿಂದ ಅದೇ ಪ್ರಕಾರ ಆ ಎಲ್ಲ ಕ್ಷೇತ್ರಗಳಲ್ಲೂ ಗುರುಪರಂಪರೆ ಬೆಳೆದು ಬಂದಿರುವುದು ಅತ್ಯಂತ ಸಹಜವಾಗಿದೆ.

ಗುರು-ಶಿಷ್ಯರ ನಡುವಿನ ದಿವ್ಯ ಸಂಬಂಧ : **'ಆಶ್ಚರ್ಯೋ ವಕ್ತಾ ಕುಶಲೋऽಸ್ಯ ಲಬ್ಧಾ'** ಎಂದು ಉಪನಿಷತ್ತು ಗುರು-ಶಿಷ್ಯರ ವೈಶಿಷ್ಟ್ಯವನ್ನು ಹೊಗಳುತ್ತದೆ *(ಕಠ, ೧.೨.೭)*. **ವಕ್ತಾ**, ಎಂದರೆ ವಿದ್ಯೆ ಕಲಿಸುವ ಗುರು ಆಶ್ಚರ್ಯಜನಕವೆಂಬಂತೆ ಸಮರ್ಥ ನಾದವನು; ಸರ್ವವಿದ್ಯಾಪಾರಂಗತನೂ ಪ್ರವೀಣನೂ ಆದ ವನು. ಶಿಷ್ಯನೂ ಅಷ್ಟೇ ಸಮರ್ಥನಿರಬೇಕು. ಗುರುವನ್ನೇ ಮೀರಿಸುವ ಪ್ರಚಂಡ ಬುದ್ಧಿಶಕ್ತಿ ಅವನಲ್ಲಿರಬೇಕು. ಅಂಥವನೇ **'ಕುಶಲ'** ಎನಿಸಿಕೊಳ್ಳುತ್ತಾನೆ. ಇಂಥ ಗುರು-ಶಿಷ್ಯರ ನಡುವಿನ ಸಂಬಂಧ ಹೇಗಿರುತ್ತದೆ? ಅದು ಅಲೌಕಿಕವೂ, ಜನ್ಮಜನ್ಮಾಂತರ ಗಳ ಸಂಬಂಧವೂ ಆಗಿರುತ್ತದೆ. ಶಿಷ್ಯನ ಬರವಿಗಾಗಿ ಗುರು ಕಾದಿರುತ್ತಾನೆ. ಯೋಗ್ಯ ಗುರುವಿಗಾಗಿ ಎಲ್ಲೆಲ್ಲೋ ಅರಸಿ, ಬಳಲಿ ಬೆಂಡಾದ ಶಿಷ್ಯನು ಕೊನೆಗೂ ತನ್ನ ಗುರುವನ್ನು ಕಂಡುಕೊಳ್ಳುತ್ತಾನೆ. 'ಲೋಕಹಿತವನ್ನೇ ಬಯಸುವ ವಸಂತ ಋತುವಿನಂತೆ ಸಂತರೂ ಮಹಾಂತರೂ' *(ವಿವೇಕಚೂಡಾಮಣಿ*, ಶ್ಲೋ.೩೭) ಆದ ಗುರುಗಳು ಶಿಷ್ಯನನ್ನು ಬರಮಾಡಿಕೊಳ್ಳುತ್ತಾರೆ. ಇದು ಸಹಸ್ರಾರು ವರ್ಷಗಳಿಂದ ನಮ್ಮಲ್ಲಿ ಬೆಳೆದು ಬಂದ ಗುರು-ಶಿಷ್ಯರ ಪರಂಪರೆಯ ರೀತಿ.

ಇದಕ್ಕೆ ಇತ್ತೀಚಿನ ಅತ್ಯುತ್ತಮ ಉದಾಹರಣೆ ಶ್ರೀ ರಾಮಕೃಷ್ಣ ಪರಮಹಂಸರು ಹಾಗೂ ಸ್ವಾಮಿ ವಿವೇಕಾನಂದರು. ಇವರಿಬ್ಬರ ನಡುವಿನ ಅಸಾಧಾರಣ, ಅಲೌಕಿಕ ಗುರು-ಶಿಷ್ಯ ಸಂಬಂಧದ ಕಥೆ ಜಗತ್ಪ್ರಸಿದ್ಧವಾದುದು. ಭಗವಂತನ ಸಾಕ್ಷಾತ್ಕಾರದ ಹಂಬಲದಿಂದ ನಾನಾ ವ್ಯಕ್ತಿಗಳನ್ನು ಕಂಡು, ನಾನಾ ಸ್ಥಳಗಳ ಲೆಲ್ಲ ಅಲೆದಾಡಿ, ಕೊನೆಗೂ ಶ್ರೀರಾಮಕೃಷ್ಣರ ಬಳಿಗೆ ಬಂದ ನರೇಂದ್ರ. "ಸ್ವಾಮಿ, ನೀವು ದೇವರನ್ನು ಕಂಡಿದ್ದೀರಾ?" ಎಂಬುದು ನರೇಂದ್ರನ ನೇರ ಪ್ರಶ್ನೆ. ದೇವರನ್ನು ಕಾಣದ ವ್ಯಕ್ತಿಯಿಂದ ತಾನು ಏನನ್ನೂ ಕಲಿಯಲಾಗದು ಎಂಬುದು ಅವನ ವೈಜ್ಞಾನಿಕ ದೃಷ್ಟಿಕೋನ. ಆದರೆ ಶ್ರೀರಾಮಕೃಷ್ಣರ ಉತ್ತರವೂ ಅಷ್ಟೇ ಅದ್ಭುತ. "ಹೌದು, ಕಂಡಿದ್ದೇನೆ. ನಿನ್ನನ್ನು ಕಾಣುವುದಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ ಕಂಡಿದ್ದೇನೆ" ಎಂದರು ಶ್ರೀರಾಮಕೃಷ್ಣರು. ಎಂಥ ಗುರು, ಎಂಥ ಶಿಷ್ಯ! ವಿವೇಕಾನಂದರ ಆಗಮನಕ್ಕಾಗಿ ಬಹುಕಾಲದಿಂದ ಕಾದಿದ್ದ ಶ್ರೀರಾಮಕೃಷ್ಣರಿಗೆ ತನ್ನ ಪ್ರಿಯಶಿಷ್ಯ ಬಂದೊಡನೆ ಅತ್ಯಾನಂದವಾಯಿತಂತೆ. ದೈವೀಸಂಕಲ್ಪದಂತೆ ತನ್ನ ಕಾರ್ಯವನ್ನು ಮಾಡಲು ಸಪ್ತರ್ಷಿ ಮಂಡಲದಿಂದ ಬಂದ ಹುಡುಗನು ಇವನೇ ಎಂದವರು ಗುರುತಿಸಿದರು. ಆದರೆ ನರೇಂದ್ರನಿಗೆ ಶ್ರೀರಾಮಕೃಷ್ಣರೇ ತನ್ನ ಗುರುವೆಂದು ಸ್ವೀಕರಿಸಲು ತುಂಬಾ ಸಮಯ ಹಿಡಿಯಿತು. ಅನೇಕ ಪರೀಕ್ಷೆಗಳ ಮೂಲಕ ಅವನು ಶ್ರೀರಾಮಕೃಷ್ಣರೇ ತನ್ನ ಗುರುವೆಂಬುದನ್ನು ಕಂಡುಕೊಂಡ. ಇಂಥ ಅಪೂರ್ವ ಸಂಬಂಧ, ಅಪ್ರತಿಮ ಗುರು-ಶಿಷ್ಯರ ಸಮಾಗಮ ನಮ್ಮ ಪುರಾಣ, ಇತಿಹಾಸಗಳಲ್ಲೂ, ಚರಿತ್ರೆಯ ಪುಟಗಳಲ್ಲೂ ಅನೇಕ ಕಡೆ ಕಂಡು ಬರುತ್ತದೆ.

ಆಧ್ಯಾತ್ಮಿಕ ಅನುಭವ ಮತ್ತು ಧನ್ಯತಾಭಾವ : ಗುರುವನ್ನು ಕುರಿತು ಬರೆದಿರುವ ಸ್ತೋತ್ರ, ಸ್ತುತಿಗಳಲೆಲ್ಲ ಕಂಡುಬರುವ ಇನ್ನೊಂದು ಭಾವವೆಂದರೆ, ಆಧ್ಯಾತ್ಮಿಕ ಅನುಭೂತಿಯಿಂದ ಹೊರಹೊಮ್ಮುವ ಧನ್ಯತಾಭಾವ. ಅಜ್ಞಾನದ ಅಂಧಕಾರದಲ್ಲಿ ತೊಳಲಾಡುತ್ತಿದ್ದಷ್ಟು ಕಾಲವೂ ಶಿಷ್ಯನಿಗೆ ಜ್ಞಾನದ, ಸಾಕ್ಷಾತ್ಕಾರದ ಅತೀತ ಕಲ್ಪನೆ ಇರುವುದಿಲ್ಲ; ಅಂಥ ಅನುಭವವಾದೊಡನೆ ಅವನಿಗೆ ಪ್ರಪಂಚ ಅಲ್ಪವಾಗಿ ಗೋಚರಿಸುವುದು. ಭೌಮಾನುಭವದ ಮುಂದೆ ತನ್ನಲ್ಲಿದ್ದ ಅಜ್ಞಾನ ಎಷ್ಟೊಂದು ಕ್ಷುದ್ರವಾಗಿತ್ತೆಂದು ಹೋಲಿಸಿ ನೋಡಿ, ಗುರುವಿನ ಪರಮಕಾರುಣ್ಯದ ಮುಂದೆ ತನ್ನ ವ್ಯಕ್ತಿತ್ವ ಕುಬ್ಜವಾಗಿ ತೋರುವುದು. ಇದರಿಂದ ಕರಗಿ ಹೋಗುವ ಶಿಷ್ಯನ ಧನ್ಯತಾಭಾವ ಮೇರೆ ಮೀರಿದ್ದು; ಅವನ ವ್ಯಕ್ತಿತ್ವವನ್ನೆಲ್ಲ ತುಂಬಿ ತುಳುಕುವಂತಹುದು. ಈ ರೀತಿಯ ಭಾವದಿಂದ ಹೊರ ಹೊಮ್ಮಿದ ಶಿಷ್ಯನು ತನ್ನೆಲ್ಲವನ್ನೂ ಗುರುವಿಗೆ ಸಮರ್ಪಿಸಿ ಕೊಳ್ಳುತ್ತಾನೆ. **'ಗುರೋರಂಘ್ರಿಪದ್ಮೇ ಮನಶ್ಚೇನ್ನ ಲಗ್ನಂ ತತಃ ಕಿಂ, ತತಃ ಕಿಂ?'** (ಸದ್ಗುರುವಿನ ಪಾದಕಮಲಗಳಲ್ಲಿ ಮನಸ್ಸು ನಿಲ್ಲದೆ ಹೋದರೆ ಫಲವೇನು? ಫಲವೇನು?) ಎಂದು ಅವನು ಗುರುವಿನ ಪಾದಕ್ಕೆರಗಿ ಧನ್ಯನಾಗುತ್ತಾನೆ.

ಇಷ್ಟದೇವತೆ-ಗುರು : ಶ್ರೀರಾಮಕೃಷ್ಣರು ಗುರುವಿನ ಬಗ್ಗೆ ಹೇಳುತ್ತ ಹೀಗೆನ್ನುತ್ತಾರೆ: "ಇನ್ನೇನು, ಇಷ್ಟದೇವತೆಯ ದರ್ಶನ ವಾಗುತ್ತದೆ ಎನ್ನುವಾಗ ಗುರು ಕಾಣಿಸಿಕೊಂಡು ಸಾಧಕನಿಗೆ ಹೇಳುತ್ತಾನೆ, 'ನೋಡಲ್ಲಿ! ನಿನ್ನ ಇಷ್ಟದೇವರನ್ನು ನೋಡಲ್ಲಿ.' ಬಳಿಕ ಗುರು ಇಷ್ಟದೇವನಲ್ಲಿ ಲೀನನಾಗಿ ಬಿಡುತ್ತಾನೆ. ಯಾರು

ಗುರುವೋ ಅವನೇ ಇಷ್ಟದೇವ. ಗುರುವು ಭಗವಂತನೆಡೆಗೆ ಕೊಂಡೊಯ್ಯುವ ದಾರ" (*ವಚನವೇದ*, ಭಾಗ ೧, ಪು. ೧೩೭)

ಇದರರ್ಥ, ನಿಜವಾದ ಗುರುವೆಂದರೆ ಇಷ್ಟದೇವತೆಯ ಆವಿರ್ಭಾವವೆಂದೇ ನಾವು ತಿಳಿದುಕೊಳ್ಳಬೇಕು. ಭಗವಂತನ ಅನುಗ್ರಹದಿಂದಲೇ ಗುರು ದೊರಕುತ್ತಾನೆ. ಯಾವಾಗ ಇಷ್ಟ ದೇವತೆಯ ದರ್ಶನವಾಗುವುದೋ ಆಗ ತಿಳಿದು ಬರುವುದು, ತನ್ನ ಗುರು ಆತನೇ ಆಗಿದ್ದಾನೆ ಎಂದು. ಎಲ್ಲಿ ಗುರು ಮತ್ತು ಭಗವಂತ ಒಂದಾಗುವರೋ, ಆಗ ಶಿಷ್ಯನಿಗೆ ಅರ್ಥವಾಗುವುದು, ಭಗವಂತನ ಕೃಪೆ ತನಗೆ ಹರಿದು ಬರುವುದು ಗುರುವಿನ ಮೂಲಕ ಎಂದು. ತನ್ನ ಗುರು ಎಂಥವನೇ ಆಗಿರಲಿ, ಅದೆಂಥ ಪಾಪಕೃತ್ಯವನ್ನೇ ಮಾಡಿರಲಿ, ತನ್ನ ಪಾಲಿಗೆ ಅವನೇ ಪರದೈವ ವೆಂಬ ಭಾವನೆ ಸರ್ವದಾ ಇರಬೇಕು. ಇಂತಹ ಗುರುಭಕ್ತಿ, ನಿಷ್ಠೆಗಳಿಲ್ಲದೆ ಆಧ್ಯಾತ್ಮಿಕ ಪ್ರಗತಿ ಸಾಧ್ಯವಿಲ್ಲವೆಂದು ಶ್ರೀರಾಮ ಕೃಷ್ಣರು ಸ್ಪಷ್ಟವಾಗಿ ಹೇಳುತ್ತಾರೆ.

ಗುರುವಿನ ಪಾರಮ್ಯ : ಶ್ರೀಮಾತೆ ಶಾರದಾದೇವಿಯವರ ಸೇವಕ ನಾಗಿದ್ದ ಬ್ರಹ್ಮಚಾರಿ ರಾಸಬಿಹಾರಿ ಅವರಿಗೆ ಒಂದು ಪ್ರಶ್ನೆ ಕೇಳುತ್ತಾರೆ, "ಅಮ್ಮಾ, ನಾಮರೂಪದ ಹೊರತಾಗಿ ಬೇರೇನೂ ಇಲ್ಲ. ಆದ್ದರಿಂದ ಅಂತಿಮವಾಗಿ ಈಶ್ವರ ಅಂತೇನೂ ಇಲ್ಲ ಎನ್ನುತ್ತಾರೆ". (ಅವರ ಭಾವನೆ ಏನಾಗಿತ್ತೆಂದರೆ, ಅಂತಿಮವಾಗಿ ಶ್ರೀರಾಮಕೃಷ್ಣರು, ಶ್ರೀಮಾತೆ ಇವೆಲ್ಲವೂ ಮಿಥ್ಯೆಯೇ ಎಂದು.) ಅದಕ್ಕೆ ಶ್ರೀಮಾತೆ ಉತ್ತರಿಸುತ್ತಾರೆ, "ನರೇನ್ (ಸ್ವಾಮಿ ವಿವೇಕಾ ನಂದರು) ಹೇಳುತ್ತಿದ್ದ, 'ಅಮ್ಮಾ, ಯಾವ ಜ್ಞಾನ ಗುರುವಿನ ಪಾದಪದ್ಮಗಳಿಂದ ನಮ್ಮನ್ನು ವಿಮುಖಗೊಳಿಸುವುದೋ ಅದು ಅಜ್ಞಾನ. ಗುರುವಿನ ಪಾದಪದ್ಮಗಳಿಂದ ದೂರ ಹೋದರೆ ಜ್ಞಾನಕ್ಕೆ ನೆಲೆಯೆಲ್ಲಿ?' ಅಂತ. ನೀನು ಈ ಅಜ್ಞಾನದ ಕಲಸು ಮೇಲೋಗರವನ್ನು ಬಿಟ್ಟುಬಿಡು. ಭಗವಂತನನ್ನು ಯಾರು ತಿಳಿದುಕೊಳ್ಳಬಲ್ಲರು?" ಇದು ಗುರುವಿನ ವಿಚಾರದಲ್ಲಿ ಅಂತಿಮವಾದ ಮಾತು. ಯಾರು ಗುರುವಿನ ಪಾದಗಳಲ್ಲಿ ತನ್ನನ್ನು ಸಮರ್ಪಿಸಿಕೊಂಡಿರುವನೋ, ಅವನ ಸಮಸ್ತ ಜವಾಬ್ದಾರಿಯನ್ನು ಗುರು ಹೊತ್ತುಕೊಳ್ಳುವನು. ಶಿಷ್ಯಂದಿರನ್ನೆಲ್ಲ ಮುಕ್ತರನ್ನಾಗಿಸದೆ ಗುರುವಿಗೂ ಮುಕ್ತಿಯಿಲ್ಲ. ಅವರೆಲ್ಲರ ಬಂಧ, ಮುಕ್ತಿಗಳಿಗೆ ಗುರುವೇ ಜವಾಬ್ದಾರ. ಅವನು ಶಿಷ್ಯನ ಮುಕ್ತಿಗೆ ಸಕಲ ಪ್ರಯತ್ನವನ್ನೂ ಮಾಡುವನು ಎನ್ನುತ್ತಾರೆ. ಮಂತ್ರದೀಕ್ಷೆ ನೀಡುವ ಮೂಲಕ ಗುರು ತನ್ನ ಶಿಷ್ಯನ ಸರ್ವಸ್ವವನ್ನೂ ಸ್ವೀಕರಿಸುತ್ತಾನೆ; ಶಿಷ್ಯನು ತನ್ನ ಸರ್ವಸ್ವವನ್ನೂ ಗುರುವಿನ ಪಾದಗಳಿಗೆ ಒಪ್ಪಿಸುತ್ತಾನೆ. ಈ ವಿಚಾರವನ್ನು ಸ್ಪಷ್ಟೀಕರಿಸುವ ಕೆಲವು ನಿದರ್ಶನಗಳು ಇಲ್ಲಿವೆ:

ಸ್ವಾಮಿ ವಿವೇಕಾನಂದರ ಶಿಷ್ಯರಾದ ಸ್ವಾಮಿ ಸದಾನಂದರಿಗೆ ಒಂದು ಘಟನೆ ನೆನಪಾಯಿತು: ಸ್ವಾಮೀಜಿ ತಮ್ಮ ಶಿಷ್ಯಂದಿರ ಮುಂದೆ ಸ್ವಾಮಿ ಪ್ರೇಮಾನಂದರಿಗೆ ಹೇಳಿದರಂತೆ– 'ಬಾಬು ರಾಮ್, ಒಂದು ವೇಳೆ ನನ್ನ ಶಿಷ್ಯಂದಿರು ಸಾವಿರ ಸಲ ನರಕಕ್ಕೆ ಹೋದರೆ, ನಾನೂ ಸಾವಿರ ಬಾರಿ ಅವರ ಕೈಹಿಡಿದು ಅಲ್ಲಿಂದ ಮೇಲಕ್ಕೆತ್ತುವೆ. ಇದು ಸತ್ಯವಲ್ಲದೆ ಹೋದರೆ, ಶ್ರೀರಾಮಕೃಷ್ಣರೇ ಮೊದಲಾದವರೂ ಅಸತ್ಯವೆಂದು ತಿಳಿ' ಎಂದರಂತೆ ಸ್ವಾಮೀಜಿ.


ಇನ್ನೊಂದು ಸಂದರ್ಭದಲ್ಲಿ ಶ್ರೀಮಾತೆಯವರಿಂದ ದೀಕ್ಷೆ ಪಡೆದಿದ್ದ ವೈಕುಂಠನೆಂಬ ಶಿಷ್ಯನೊಬ್ಬನು ಅವರ ಮುಂದೆ ತನ್ನ ಅಸಹಾಯಕತೆಯನ್ನು ಹೇಳಿಕೊಂಡ. ಮಂತ್ರಜಪ ಮಾಡಲು ತನ್ನಿಂದ ಸಾಧ್ಯವಾಗುತ್ತಿಲ್ಲ; ಶಿಷ್ಯ ಮಂತ್ರಜಪ ಮಾಡದಿದ್ದರೆ ಗುರು ಕಷ್ಟವನ್ನು ಅನುಭವಿಸಬೇಕು ಅನ್ನುತ್ತಾರೆ. ಆದ್ದರಿಂದ ಮಂತ್ರವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಶ್ರೀಮಾತೆಯವರನ್ನು ಕೇಳಿಕೊಂಡ. ಆಗ ಶ್ರೀಮಾತೆ ಕಣ್ಣೀರಿಳಿಸುತ್ತಾ, "ನೀನಿನ್ನು ಮಂತ್ರಜಪ ಮಾಡಬೇಕಿಲ್ಲ. ಶ್ರೀರಾಮಕೃಷ್ಣರು ಎಂದೋ ನಿನ್ನ ಮೇಲೆ ದಯೆ ತೋರಿಸಿದ್ದಾರೆ" ಎಂದರು. ಅವರ ಮಾತಿನ ಅರ್ಥವನ್ನರಿಯದೆ, ಅವರು ಮಂತ್ರವನ್ನು ಹಿಂದಕ್ಕೆ ಪಡೆದರು ಎಂದೇ ತಿಳಿದುಕೊಂಡ ವೈಕುಂಠ, ಶ್ರೀಮಾತೆಯವರೊಂದಿಗೆ ತನ್ನ ಸಂಬಂಧವೆಲ್ಲವೂ ಕಡಿದುಹೋಯಿತೆಂದೇ ಭಾವಿಸಿದ. ಭಯ, ಆತಂಕಗಳಿಂದ ಅವನ ತಲೆ ತಿರುಗಲಾರಂಭಿಸಿತು. ಅವನು, "ಅಮ್ಮ, ಹಾಗಾದರೆ ನನ್ನ ಸರ್ವಸ್ವವನ್ನೂ ಕಸಿದು ಕೊಂಡಿರಾ? ನಾನೇನು ಮಾಡಲಿ? ಹಾಗಾದರೆ ನಾನು ರಸಾ ತಳಕ್ಕೆ ಇಳಿದುಹೋದೆನೇ, ಅಮ್ಮಾ?" ಎಂದು ಪ್ರಲಾಪಿಸಿದ.

ಅದನ್ನು ಕೇಳಿದ ಶ್ರೀಮಾತೆ ದೃಢಸ್ವರದಿಂದ, "ಏನು? ನನ್ನ ಮಗನಾಗಿ ನೀನು ರಸಾತಳಕ್ಕೆ ಇಳಿದು ಹೋಗುತ್ತೀಯಾ? ಇಲ್ಲಿಗೆ ಯಾರು ಬಂದಿದ್ದಾರೋ, ಯಾರು ನನ್ನ ಮಕ್ಕಳೋ, ಅವರಿಗೆ ಮುಕ್ತಿ ಲಭಿಸಿಯೇಬಿಟ್ಟಿದೆ! ನನ್ನ ಮಕ್ಕಳನ್ನು ರಸಾತಳಕ್ಕೆ ಎಸೆಯಲು ಬ್ರಹ್ಮನಿಗೂ ಸಾಧ್ಯವಿಲ್ಲ!" ಎಂದರು. ಅವರ ಮಾತುಗಳನ್ನು ಕೇಳಿದ ವೈಕುಂಠ ನಿಶ್ಚಿಂತನಾದ.

ಸಾಕ್ಷಾತ್ ಜಗನ್ಮಾತೆ ನೀಡಿದ ಭರವಸೆ ಇದು. ಭಗವಂತನಲ್ಲಿ ಶರಣಾದವನ ವಿಧಿಬರಹವೇ ಅಳಿಸಲ್ಪಡುತ್ತದೆ ಎಂದು ಶ್ರೀಮಾತೆಯವರು ಹೇಳಿದ್ದರು. ನಿಜವಾದ ಗುರು ಶಿಷ್ಯನ ಜವಾಬ್ದಾರಿಯನ್ನು ಹೊತ್ತುಕೊಂಡರೆ, ಶಿಷ್ಯನ ಸಾಕ್ಷಾತ್ಕಾರ ವಾಗುವ ತನಕವೂ ಅವನ ರಕ್ಷಣೆಯ ಹೊಣೆಯನ್ನು ಹೊತ್ತು ಕೊಳ್ಳುವನು. ಇದೇ ಅತ್ಯುನ್ನತ ಸ್ತರದ ಗುರು–ಶಿಷ್ಯ ಸಂಬಂಧ. ಈ ಹಿನ್ನೆಲೆಯಲ್ಲಿ ಎಷ್ಟೇ ಸ್ತುತಿ, ಸ್ತೋತ್ರ, ಪೂಜೆ, ಆರಾಧನೆಗಳಿಂದ ಶಿಷ್ಯನು ಗುರುವನ್ನು ಸ್ತುತಿಸಲಿ, ಗುರುವಿಗೆ ತನ್ನ ಋಣವನ್ನು ತೀರಿಸುವುದಂತೂ ಸಾಧ್ಯವಿಲ್ಲ; ಸಂಪೂರ್ಣವಾಗಿ ಗುರುವಿಗೆ ತನ್ನನ್ನು ಸಮರ್ಪಿಸಿಕೊಳ್ಳುವುದೊಂದೇ ಅವನು ಗುರುವಿಗೆ ನೀಡಬಹುದಾದ ಕಾಣಿಕೆ. ಅಷ್ಟಾಗಿಯೂ ಗುರು ತನ್ನ ಶಿಷ್ಯ ನಿಂದ ಏನನ್ನೂ ನಿರೀಕ್ಷಿಸುವುದಿಲ್ಲ. ಏಕೆಂದರೆ ನಿರ್ವ್ಯಾಜ ಕರುಣೆಯೇ ಶ್ರೇಷ್ಠ ಗುರುವಿನ ಆದರ್ಶ. ಈ ಎಲ್ಲ ಭಾವನೆ ಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಆಚರಿಸುವ ಗುರುಪೂರ್ಣಿ ಮೆಯು ಎಲ್ಲ ಅರ್ಥಗಳಲ್ಲಿ, ಎಲ್ಲ ಹಂತಗಳಲ್ಲಿ ಗುರುವನ್ನು ಪೂಜಿಸುವ ಒಂದು ಪವಿತ್ರಕಾರ್ಯವೆನಿಸುವುದು. ಈ ಪವಿತ್ರ ದಿನ, ಗುರುಶಕ್ತಿಯ ಕೃಪಾಪ್ರವಾಹ ನಮ್ಮೆಡೆಗೆ ಹರಿದುಬರುವ ಶುಭಸಂದರ್ಭವಾಗಲಿ ಎಂದು ಪ್ರಾರ್ಥಿಸೋಣ. *



ಶ್ರೀದಕ್ಷಿಣಾಮೂರ್ತಿ ಸ್ತೋತ್ರಮ್



ಶ್ರೀ ಶಂಕರಾಚಾರ್ಯ

ಸಂಸ್ಕೃತ ಸ್ತೋತ್ರಸಾಹಿತ್ಯದಲ್ಲಿ ಶ್ರೀಶಂಕರಾಚಾರ್ಯರು ರಚಿಸಿದ 'ಶ್ರೀದಕ್ಷಿಣಾಮೂರ್ತಿ ಸ್ತೋತ್ರ'ಕ್ಕೆ ವಿಶಿಷ್ಟ ಸ್ಥಾನವಿದೆ. ಅದ್ವೈತವೇದಾಂತದ ಉನ್ನತ ತತ್ತ್ವಗಳನ್ನೂ, ಕಾವ್ಯಸೌಂದರ್ಯವನ್ನೂ, ಭಗವಂತನ ಸ್ತುತಿಯನ್ನೂ ಸುಂದರವಾಗಿ ಮೇಳೈಸಿ ರಚಿಸಿದ ಈ ಕೃತಿಯು ಸ್ತೋತ್ರಕೃತಿಗಳ ಸರಳ ಶೈಲಿಯಲ್ಲಿಲ್ಲ; ತತ್ತ್ವವಿಚಾರಗಳನ್ನು ಗರ್ಭೀಕರಿಸಿಕೊಂಡಿರುವ ಗಂಭೀರ ಶೈಲಿಯಲ್ಲಿದೆ.

ಶಿವನ ಒಂದು ರೂಪವಾಗಿರುವ ದಕ್ಷಿಣಾಮೂರ್ತಿಯು ವಟವೃಕ್ಷದ ಅಡಿಯಲ್ಲಿ ಯೋಗಿಭಂಗಿಯಲ್ಲಿ ಕುಳಿತಿರುವಂತೆ ಇಲ್ಲಿ ಕಲ್ಪಿಸಲಾಗಿದೆ. ಜ್ಞಾನಕ್ಕೆ ಸಂಕೇತವಾಗಿರುವ ಚಿನ್ಮುದ್ರೆಯಿಂದ ಕೂಡಿ, ದಕ್ಷಿಣ ದಿಕ್ಕಿಗೆ ಅಭಿಮುಖವಾಗಿ ಕುಳಿತ ದಕ್ಷಿಣಾಮೂರ್ತಿಯು ಪಾರಮಾರ್ಥಿಕ ಜ್ಞಾನದ ಮೂರ್ತರೂಪನೂ, ಗುರುವಿನ ರೂಪವನ್ನು ತಳೆದ ಪರಮಾತ್ಮನೂ ಆಗಿದ್ದಾನೆ. ಮಾನವ ಗುರುಗಳ ಮೂಲಕ ಅಧ್ಯಾತ್ಮವಿದ್ಯೆಯನ್ನು ಜನರಿಗೆ ನೀಡುವ ಆದಿಗುರುವು ಭಗವಂತನೇ ಆಗಿರುವುದರಿಂದ, ಅವನನ್ನು ಅಧ್ಯಾತ್ಮ ಸಾಧಕರು ಗುರುರೂಪದಲ್ಲಿ ಕಾಣುತ್ತಾರೆ.

ಶ್ರೀಶಂಕರರ ಶಿಷ್ಯರಾದ ಸುರೇಶ್ವರರು ದಕ್ಷಿಣಾಮೂರ್ತಿಸ್ತೋತ್ರಕ್ಕೆ 'ಮಾನಸೋಲ್ಲಾಸ'ವೆಂಬ ವಾರ್ತಿಕವನ್ನು ರಚಿಸಿದ್ದಾರೆ. ವಾರ್ತಿಕವೆಂದರೆ ಕೃತಿಯಲ್ಲಿ ಹೇಳಿರುವ, ಹೇಳದ (ಅಂದರೆ ಸೂಚ್ಯವಾದ) ಮತ್ತು ತಪ್ಪಾದ ಅರ್ಥಗಳನ್ನು ಕುರಿತು ವಿಶ್ಲೇಷಿಸಿ ಬರೆದಿರುವ ವಿವರಣೆ. 'ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ' ಎಂದು ಕೊನೆಗೊಳ್ಳುವ ಹತ್ತು ಶ್ಲೋಕಗಳನ್ನು 'ದಕ್ಷಿಣಾಮೂರ್ತಿಸ್ತೋತ್ರ'ವೆಂದು ಕರೆಯುವುದು ವಾಡಿಕೆಯಾದರೂ, ಇದರೊಂದಿಗೆ ಇನ್ನೂ ಹೆಚ್ಚಿನ ಆರು ಶ್ಲೋಕಗಳನ್ನು ಸೇರಿಸಿಕೊಂಡು ಈ ಸ್ತೋತ್ರವನ್ನು ಹಾಡುವ, ವಾಚಿಸುವ ಪದ್ಧತಿ ಕಂಡುಬರುತ್ತದೆ. ದಕ್ಷಿಣಾಮೂರ್ತಿಯ, ಗುರುರೂಪೀ ಭಗವಂತನ ಮಹಿಮೆಯನ್ನು ಕೊಂಡಾಡುವ ಈ ಶ್ಲೋಕಗಳು ಮೂಲಸ್ತೋತ್ರದ ಘನತೆಯನ್ನು ಇನ್ನಷ್ಟು ಹೆಚ್ಚಿಸುತ್ತವೆ. ಶ್ರೀದಕ್ಷಿಣಾಮೂರ್ತಿ ಸ್ತೋತ್ರವನ್ನು ಅದರ ಸರಳ ಅನುವಾದದೊಂದಿಗೆ ಇಲ್ಲಿ ನೀಡುತ್ತಿದ್ದೇವೆ.

ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ
ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಯಥಾ ನಿದ್ರಯಾ।
ಯಸ್ಸಾಕ್ಷಾತ್ಕುರುತೇ ಪ್ರಬೋಧಸಮಯೇ ಸ್ವಾತ್ಮಾನಮೇವಾದ್ವಯಂ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ
॥೧॥

ಸ್ವಪ್ನದ ದೆಶೆಯಿಂದ ಆಂತರಿಕ ವಸ್ತುವು ಹೊರಗಡೆ ಕಾಣುವಂತೆ ಮಾಯೆಯ ಮುಖಾಂತರ ಎಲ್ಲವೂ ಹೊರಗಡೆ ವ್ಯಕ್ತವಾಗುವಂತೆ ಕಾಣಲ್ಪಟ್ಟರೂ, ತನ್ನಲ್ಲಿಯೇ ಅಂತರ್ಗತವಾದ ವಿಶ್ವವನ್ನು ಯಾವನು ಕನ್ನಡಿಯಲ್ಲಿ ಕಾಣುವ ನಗರದಂತೆ ತನ್ನಲ್ಲಿಯೇ ನೋಡುವನೋ, ಮತ್ತು ಪ್ರಬೋಧಕಾಲದಲ್ಲಿ ತನ್ನ ಅದ್ವಯವಾದ ಸ್ವರೂಪವನ್ನು ಯಾವನು ಸಾಕ್ಷಾತ್ತಾಗಿ ತಿಳಿಯುವನೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ಬೀಜಸ್ಯಾಂತರಿವಾಂಕುರೋ ಜಗದಿದಂ ಪ್ರಾಙ್ನಿರ್ವಿಕಲ್ಪಂ ಪುನ-
ರ್ಮಾಯಾಕಲ್ಪಿತದೇಶಕಾಲಕಲನಾವೈಚಿತ್ರ್ಯಚಿತ್ರೀಕೃತಮ್ ।
ಮಾಯಾವೀವ ವಿಜೃಂಭಯತ್ಯಪಿ ಮಹಾಯೋಗೀವ ಯಃ ಸ್ವೇಚ್ಛಯಾ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ
॥ ೨ ॥

ಬೀಜದಲ್ಲಿ ಮೊಳಕೆ (ಅವ್ಯಕ್ತವಾಗಿ) ಇರುವ ಹಾಗೆ (ಸೃಷ್ಟಿಗೆ) ಪೂರ್ವದಲ್ಲಿ (ನಾಮರೂಪಗಳಿಲ್ಲದೆ) ನಿರ್ವಿಕಲ್ಪವಾಗಿದ್ದು ಪುನಃ (ಸೃಷ್ಟಿಕಾಲದಲ್ಲಿ) ಮಾಯೆಯಿಂದ ಕಲ್ಪಿತವಾದ ದೇಶ ಕಾಲಗಳ ಕಲ್ಪನೆಯಿಂದ ಚಿತ್ರವಿಚಿತ್ರವಾದ ಈ ಜಗತ್ತನ್ನು ಯಾವನು ತನ್ನ ಇಚ್ಛೆಗನುಗುಣವಾಗಿ ಮಾಯಾವಿಯ ಹಾಗೆ ಅಥವಾ ಮಹಾ ಯೋಗಿಯ ಹಾಗೆ ಕಾಣುವಂತೆ ಮಾಡುವನೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ಯಸ್ಯೈವ ಸ್ಫುರಣಂ ಸದಾತ್ಮಕಮಸತ್ಕಲ್ಪಾರ್ಥಕಂ ಭಾಸತೇ
ಸಾಕ್ಷಾತ್ತತ್ತ್ವಮಸೀತಿ ವೇದವಚಸಾ ಯೋ ಬೋಧಯತ್ಯಾಶ್ರಿತಾನ್।
ಯತ್ಸಾಕ್ಷಾತ್ಕರಣಾದ್ಭವೇನ್ನ ಪುನರಾವೃತ್ತಿರ್ಭವಾಂಭೋನಿಧೌ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ
॥ ೩ ॥

ಯಾರ ಪ್ರಕಾಶವು ಸತ್ತ್ವರೂಪವಾಗಿದ್ದರೂ ಮಿಥ್ಯಾವಸ್ತುಗಳನ್ನು ಬೆಳಗಿಸುತ್ತದೆಯೋ, ಯಾರು 'ತತ್ತ್ವಮಸಿ' ಎಂಬ ಉಪನಿಷದ್ವಾಕ್ಯದ ಮೂಲಕ ಆಶ್ರಿತರಿಗೆ ಸಾಕ್ಷಾತ್ತಾಗಿ ಬೋಧಿಸುತ್ತಾನೆಯೊ, ಯಾರ ಸಾಕ್ಷಾತ್ಕಾರದಿಂದ ಸಂಸಾರಸಾಗರಕ್ಕೆ ಪುನಃ ಆಗಮನವಿಲ್ಲವೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ನಾನಾಛಿದ್ರಘಟೋದರಸ್ಥಿತಮಹಾದೀಪಪ್ರಭಾಭಾಸ್ವರಂ
ಜ್ಞಾನಂ ಯಸ್ಯ ತು ಚಕ್ಷುರಾದಿಕರಣದ್ವಾರಾ ಬಹಿಃ ಸ್ಪಂದತೇ ।
ಜಾನಾಮೀತಿ ತಮೇವ ಭಾಂತಮನುಭಾತ್ಯೇತತ್ಸಮಸ್ತಂ ಜಗತ್

ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೪ ॥

ಅನೇಕ ಕಂಡಿಗಳುಳ್ಳ ಪಾತ್ರೆಯ ಮಧ್ಯದಲ್ಲಿ ಇಟ್ಟಿರುವ ಉಜ್ವಲವಾದ ದೀಪದ ಪ್ರಭೆಯು ಎಲ್ಲೆಡೆ ಪ್ರಕಾಶಿಸುವ ಹಾಗೆ ಯಾರ ಜ್ಞಾನವು ಕಣ್ಣು ಮೊದಲಾದ ಇಂದ್ರಿಯಗಳ ಮುಖಾಂತರ ಹೊರಗಡೆ ಸ್ಪಂದಿಸುತ್ತದೆಯೋ, ಪ್ರಕಾಶಿಸುತ್ತಿರುವ ಯಾವನನ್ನು ಅನುಸರಿಸಿ ಈ ಸಮಸ್ತ ಜಗತ್ತೂ 'ನಾನು ತಿಳಿಯುತ್ತೇನೆ' ಎಂಬ ಜ್ಞಾನದಿಂದ ಬೆಳಗುತ್ತದೆಯೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ದೇಹಂ ಪ್ರಾಣಮಪೀಂದ್ರಿಯಾಣ್ಯಪಿ ಚಲಾಂ
ಬುದ್ಧಿಂ ಚ ಶೂನ್ಯಂ ವಿದುಃ
ಸ್ತ್ರೀಬಾಲಾಂಧಜಡೋಪಮಾಸ್ತ್ವಹಮಿತಿ
ಭ್ರಾಂತ್ಯಾ ಭೃಶಂ ವಾದಿನಃ ।
ಮಾಯಾಶಕ್ತಿವಿಲಾಸಕಲ್ಪಿತಮಹಾ–
ವ್ಯಾಮೋಹಸಂಹಾರಿಣೇ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ
ಶ್ರೀದಕ್ಷಿಣಾಮೂರ್ತಯೇ ॥ ೫ ॥

'ನಾನೇ ದೇಹ, ನಾನೇ ಪ್ರಾಣ, ನಾನೇ ಇಂದ್ರಿಯಗಳು, ನಾನೇ ಚಂಚಲವಾದ ಮನಸ್ಸು ಅಥವಾ ನಾನೇ ಶೂನ್ಯ' ಎಂದು ಯಾರು ತಿಳಿದುಕೊಂಡಿರುವರೋ ಅವರು ಸ್ತ್ರೀಯರಿಗೆ, ಮಕ್ಕಳಿಗೆ, ಕುರುಡರಿಗೆ, ಜಡರಿಗೆ ಸಮಾನರಾಗಿರುವರು; ಅವರು ಭ್ರಾಂತರೇ ಸರಿ. ಮಾಯಾಶಕ್ತಿಯ ವಿಲಾಸದಿಂದ ಕಲ್ಪಿತವಾದ ಇಂತಹ ಮಹಾವ್ಯಾಮೋಹವನ್ನು ನಾಶಮಾಡುವ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ರಾಹುಗ್ರಸ್ತದಿವಾಕರೇಂದುಸದೃಶೋ ಮಾಯಾಸಮಾಚ್ಛಾದನಾತ್
ಸನ್ಮಾತ್ರಃ ಕರುಣೋಪಸಂಹರಣತೋ ಯೋಽಭೂತ್
ಸುಷುಪ್ತಃ ಪುಮಾನ್ ।
ಪ್ರಾಗಸ್ವಾಪ್ಸಮಿತಿ ಪ್ರಬೋಧಸಮಯೇ ಯಃ ಪ್ರತ್ಯಭಿಜ್ಞಾಯತೇ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೬ ॥

ರಾಹುಗ್ರಸ್ತನಾದ ಸೂರ್ಯನಂತೆ ಅಥವಾ ಚಂದ್ರನಂತೆ ಯಾವನು ಮಾಯೆಯಿಂದ ಆಚ್ಛಾದಿತನಾಗಿ ಇಂದ್ರಿಯಸಮೂಹಗಳನ್ನು ಒಳಕ್ಕೆ ಎಳೆದುಕೊಂಡ ನಂತರ ಗಾಢನಿದ್ರೆಯನ್ನು ಹೊಂದಿ ಸನ್ಮಾತ್ರರೂಪದಲ್ಲಿ ನೆಲೆಸುವನೋ, ಯಾವನು ಎಚ್ಚರವಾದ ಮೇಲೆ 'ನಾನೇ ಹಿಂದೆ ಮಲಗಿದ್ದೆನು' ಎಂದು ಜ್ಞಾಪಿಸಿಕೊಳ್ಳುವನೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ
ವ್ಯಾವೃತ್ತಾಸ್ವನುವರ್ತಮಾನಮಹಮಿತ್ಯಂತಃಸ್ಫುರಂತಂ ಸದಾ ।
ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ ಯೋ ಮುದ್ರಯಾ ಭದ್ರಯಾ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೭ ॥

ಬಾಲ್ಯ–ಯೌವನ–ಮುಪ್ಪುಗಳು, ಜಾಗೃತ್–ಸ್ವಪ್ನ–ನಿದ್ರಾದಿಗಳು ಮತ್ತು ಇತರ ಎಲ್ಲ ಅವಸ್ಥೆಗಳು ಬಂದು ಹೋದರೂ, ನಿತ್ಯವಾಗಿ ಉಳಿದುಕೊಂಡಿರುವ ಮತ್ತು 'ನಾನು' ಎಂದು ಅಂತರಂಗದಲ್ಲಿ ಸದಾ ಪ್ರಕಾಶಿಸುತ್ತಿರುವ ಆತ್ಮನನ್ನು ಯಾವಾತನು ತನ್ನ ಮಂಗಳವಾದ ಮುದ್ರೆಯಿಂದ ಶಿಷ್ಯರಿಗೆ ಪ್ರಕಟಿಸುವನೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ವಿಶ್ವಂ ಪಶ್ಯತಿ ಕಾರ್ಯಕಾರಣತಯಾ ಸ್ವಸ್ವಾಮಿಸಂಬಂಧತಃ
ಶಿಷ್ಯಾಚಾರ್ಯತಯಾ ತಥೈವ ಪಿತೃಪುತ್ರಾದ್ಯಾತ್ಮನಾ ಭೇದತಃ ।
ಸ್ವಪ್ನೇ ಜಾಗ್ರತಿ ವಾ ಯ ಏಷ ಪುರುಷೋ ಮಾಯಾಪರಿಭ್ರಾಮಿತಃ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೮ ॥

ಯಾವನು ಮನುಷ್ಯನಂತೆ ಮಾಯೆಯಿಂದ ಮರುಳಾಗಿ ಸ್ವಪ್ನದಲ್ಲಿ ಅಥವಾ ಎಚ್ಚರವಾಗಿರುವಾಗ ಈ ವಿಶ್ವವನ್ನು ಕಾರ್ಯಕಾರಣ ರೂಪದಿಂದಲೂ, ಸ್ವತ್ತು–ಸ್ವಾಮಿ–ಸಂಬಂಧದಿಂದಲೂ, ಶಿಷ್ಯ–ಆಚಾರ್ಯ ರೂಪದಿಂದಲೂ, ಪಿತೃ–ಪುತ್ರಾದಿರೂಪದಿಂದಲೂ, ಭೇದದೃಷ್ಟಿಯಿಂದ ನೋಡುತ್ತಾನೆಯೋ, ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ಭೂರಂಭಾಂಸ್ಯನಲೋಽನಿಲೋಽಂಬರಮಹ
ರ್ನಾಥೋ ಹಿಮಾಂಶುಃ ಪುಮಾನ್
ಇತ್ಯಾಭಾತಿ ಚರಾಚರಾತ್ಮಕಮಿದಂ ಯಸ್ಯೈವ ಮೂರ್ತ್ಯಷ್ಟಕಮ್।
ನಾನ್ಯತ್ಕಿಂಚನ ವಿದ್ಯತೇ ವಿಮೃಶತಾಂ ಯಸ್ಮಾತ್ಪರಸ್ಮಾದ್ವಿಭೋಃ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ ೯ ॥

ಯಾರ ಸ್ಥಾವರ–ಜಂಗಮಾತ್ಮಕವಾದ ಎಂಟು ಬಗೆಯುಳ್ಳ ರೂಪವು ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಆತ್ಮ ಇವುಗಳಾಗಿ ಕಾಣುತ್ತದೆಯೋ, ವಿಚಾರಮಾಡುವವನ ಪಾಲಿಗೆ ಶ್ರೇಷ್ಠನೂ, ವ್ಯಾಪಕನೂ ಆದ ಯಾವನಿಗಿಂತ ಬೇರೊಂದು ವಸ್ತುವಿಲ್ಲವೋ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ಸರ್ವಾತ್ಮತ್ವಮಿತಿ ಸ್ಫುಟೀಕೃತಮಿದಂ ಯಸ್ಮಾದಮುಷ್ಮಿಂಸ್ತವೇ
ತೇನಾಸ್ಯ ಶ್ರವಣಾತ್ತದರ್ಥಮನನಾದ್ಧ್ಯಾನಾಚ್ಚ ಸಂಕೀರ್ತನಾತ್ ।
ಸರ್ವಾತ್ಮತ್ವಮಹಾವಿಭೂತಿಸಹಿತಂ ಸ್ಯಾದೀಶ್ವರತ್ವಂ ಸ್ವತಃ
ಸಿದ್ಧ್ಯೇತ್ತತ್ಪುನರಷ್ಟಧಾ ಪರಿಣತಂ ಚೈಶ್ವರ್ಯಮವ್ಯಾಹತಮ್ ॥ ೧೦॥

ಈ ಸ್ತವದಲ್ಲಿ ಸರ್ವಾತ್ಮರೂಪನಾದ ವಸ್ತುವನ್ನು ಸ್ಪಷ್ಟೀಕರಿಸಿದ್ದರಿಂದ ಇದರ ಶ್ರವಣ, ಅರ್ಥದ ಮನನ, ಧ್ಯಾನ ಮತ್ತು ಸಂಕೀರ್ತನೆ ಇವುಗಳ ಮೂಲಕ ಸರ್ವಾತ್ಮತ್ವದ ಮಹಾವಿಭೂತಿಯಿಂದ ಕೂಡಿದ ಈಶ್ವರತ್ವವೂ ಮತ್ತು ಅಣಿಮಾದಿ ಅಷ್ಟಸಿದ್ಧಿಗಳೂ ಲಭಿಸುತ್ತವೆ.

ವಟವಿಟಪಿಸಮೀಪೇ ಭೂಮಿಭಾಗೇ ನಿಷಣ್ಣಂ
ಸಕಲಮುನಿಜನಾನಾಂ ಜ್ಞಾನದಾತಾರಮಾರಾತ್ ।
ತ್ರಿಭುವನಗುರುಮೀಶಂ ದಕ್ಷಿಣಾಮೂರ್ತಿದೇವಂ
ಜನನಮರಣದುಃಖಚ್ಛೇದದಕ್ಷಂ ನಮಾಮಿ ॥ ೧೧ ॥

ವಟವೃಕ್ಷದ ಸಮೀಪದಲ್ಲಿ ಕುಳಿತು ಸಕಲ ಮುನಿಗಳಿಗೂ ಸಾಕ್ಷಾತ್ತಾಗಿ ಜ್ಞಾನವನ್ನು ದಾನಮಾಡುತ್ತಿರುವವನೂ, ಮೂರು ಲೋಕಗಳ ಗುರುವೂ, ಈಶ್ವರನೂ, ಜನನಮರಣರೂಪವಾದ ದುಃಖವನ್ನು ನಾಶಮಾಡುವುದರಲ್ಲಿ ದಕ್ಷನೂ ಆದ ಶ್ರೀದಕ್ಷಿಣಾ ಮೂರ್ತಿಗೆ ನಮಸ್ಕರಿಸುತ್ತೇನೆ.

ಚಿತ್ರಂ ವಟತರೋರ್ಮೂಲೇ ವೃದ್ಧಾಃ ಶಿಷ್ಯಾ ಗುರುರ್ಯುವಾ
ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಸ್ತು ಛಿನ್ನಸಂಶಯಾಃ ॥ ೧೨॥

ಇದು ಬಹಳ ಆಶ್ಚರ್ಯ ! ವಟವೃಕ್ಷದ ಕೆಳಗಿದ್ದ ಶಿಷ್ಯರೆಲ್ಲರೂ ವೃದ್ಧರು ; ಗುರುವಾದರೋ ಯುವಕ ! ಮೌನವೇ ಗುರುವಿನ ವ್ಯಾಖ್ಯಾನ; ಅದರಿಂದಲೇ ಶಿಷ್ಯರ ಸಂಶಯಗಳೆಲ್ಲವೂ ನಿವಾರಣೆ ಯಾದವು !

ಓಂ ನಮಃ ಪ್ರಣವಾರ್ಥಾಯ ಶುದ್ಧಜ್ಞಾನೈಕಮೂರ್ತಯೇ ।
ನಿರ್ಮಲಾಯ ಪ್ರಶಾಂತಾಯ ದಕ್ಷಿಣಾಮೂರ್ತಯೇ ನಮಃ ॥ ೧೩॥

ಪ್ರಣವದ ವಾಚ್ಯನೂ, ಶುದ್ಧಜ್ಞಾನದ ಮೂರ್ತಿಯೂ, ನಿರ್ಮಲನೂ, ಪ್ರಶಾಂತನೂ ಆದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ನಿಧಯೇ ಸರ್ವವಿದ್ಯಾನಾಂ ಭಿಷಜೇ ಭವರೋಗಿಣಾಮ್ ।
ಗುರವೇ ಸರ್ವಲೋಕಾನಾಂ ದಕ್ಷಿಣಾಮೂರ್ತಯೇ ನಮಃ ॥೧೪॥

ಸಮಸ್ತ ವಿದ್ಯೆಗಳ ನಿಧಿಯೂ, ಭವರೋಗಕ್ಕೆ ವೈದ್ಯನೂ, ಸಮಸ್ತ ಲೋಕಕ್ಕೂ ಗುರುವು ಆದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ಚಿದ್ಘನಾಯ ಮಹೇಶಾಯ ವಟಮೂಲನಿವಾಸಿನೇ ।
ಸಚ್ಚಿದಾನಂದರೂಪಾಯ ದಕ್ಷಿಣಾಮೂರ್ತಯೇ ನಮಃ ॥೧೫॥

ವಟವೃಕ್ಷದ ತಲದಲ್ಲಿ ಕುಳಿತಿರುವ, ಚಿದ್ಘನನೂ ಮಹೇಶ್ವರನೂ ಸಚ್ಚಿದಾನಂದನೂ ಆಗಿರುವ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ಮೌನವ್ಯಾಖ್ಯಾಪ್ರಕಟಿತಪರಬ್ರಹ್ಮತತ್ತ್ವಂ ಯುವಾನಂ
ವರ್ಷಿಷ್ಠಾಂತೇವಸದೃಷಿಗಣೈರಾವೃತಂ ಬ್ರಹ್ಮನಿಷ್ಠೈಃ ।
ಆಚಾರ್ಯೇಂದ್ರಂ ಕರಕಲಿತಚಿನ್ಮುದ್ರಮಾನಂದರೂಪಂ
ಸ್ವಾತ್ಮಾರಾಮಂ ಮುದಿತವದನಂ ದಕ್ಷಿಣಾಮೂರ್ತಿಮೀಡೇ ॥ ೧೬॥

ಬ್ರಹ್ಮಜ್ಞಾನವನ್ನು ಮೌನವಾಗಿ ಬೋಧಿಸುವವನೂ, ಯುವಕನೂ, ಬ್ರಹ್ಮನಿಷ್ಠರಾದ ವೃದ್ಧಮಹರ್ಷಿಗಳಿಂದ ಪರಿವೇಷ್ಟಿತನಾದ ಆಚಾರ್ಯೇಂದ್ರನೂ, ಚಿನ್ಮುದ್ರೆಯಿಂದ ಕೂಡಿದ ಹಸ್ತವುಳ್ಳವನೂ, ಆನಂದಸ್ವರೂಪನೂ, ಆತ್ಮಾರಾಮನೂ, ಸಂತೋಷದ ಮುಖವುಳ್ಳ ವನೂ ಆದ ಶ್ರೀದಕ್ಷಿಣಾಮೂರ್ತಿಯನ್ನು ಸ್ತುತಿಸುತ್ತೇನೆ.

(ಈ ಸ್ತೋತ್ರದ ಸರಳವಾದ ಅರ್ಥವನ್ನು ಮನನ ಮಾಡಿಕೊಂಡು ಪಾರಾಯಣ ಮಾಡುವುದರಿಂದ ಗುರುತತ್ತ್ವದ, ವೇದಾಂತ ತತ್ತ್ವದ ಭಾವ ವಾಚಕನ ಹೃದಯಕ್ಕಿಳಿದು, ಅವನ ಬುದ್ಧಿ-ವಿವೇಕಗಳನ್ನು ಪ್ರಚೋದಿಸಿ, ಸಾಧನೆಗೆ ಅವನನ್ನು ಮುನ್ನಡೆಸುವುದರಲ್ಲಿ ಸಂದೇಹ ವಿಲ್ಲ. ಸ್ತೋತ್ರಗಳ ಅರ್ಥವನ್ನು ವಿಸ್ತೃತವಾಗಿ ತಿಳಿಯಬಯಸುವವರು 'ಮಾನಸೋಲ್ಲಾಸ' ವಾರ್ತಿಕವನ್ನು ಓದಬಹುದು.)

ಹೆಚ್ಚಿನ ಓದಿಗೆ:

1. **Dakshinamurthi Stotra with Manasollasa** -by Swami Harshananda, Ramakrishna Math, Bull Temple Road, Bangalore- 560019 [1992; 158 pages; ₹ 25]
2. **ಶ್ರೀದಕ್ಷಿಣಾಮೂರ್ತಿ ಸ್ತೋತ್ರ ಮತ್ತು ಮಾನಸೋಲ್ಲಾಸ,** ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು-570020 [2013; 160 ಪುಟಗಳು; ₹ ೪೦]

*

ಶ್ರೀರಾಮಕೃಷ್ಣ ದರ್ಶನ



ಶ್ರೀರಾಮಕೃಷ್ಣರ ಅಣ್ಣನ ಮಗ ರಾಮಲಾಲ ಹೀಗೊಂದು ಘಟನೆಯನ್ನು ಹೇಳುತ್ತಾರೆ:

ಅಯೋಧ್ಯೆಯಲ್ಲಿ ರಾಮಾಯತ ಸಂಪ್ರದಾಯಕ್ಕೆ ಸೇರಿದ ತರುಣ ಸಾಧುವೊಬ್ಬನಿದ್ದ. ಭಗವಂತ ಭೂಮಿಯಲ್ಲಿ ಅವತರಿಸಿದ್ದಾನೆ, ಅವನು ಪೂರ್ವ ದೇಶದಲ್ಲೆಲ್ಲೋ ಜೀವಂತವಾಗಿದ್ದಾನೆ ಎಂದು ಅವನಿಗೆ ದರ್ಶನದಲ್ಲಿ ತಿಳಿದುಬಂತು. ಆ ಸಾಧು ಭಗವಂತನನ್ನು ಕಾಣಲು ಬರಿಗಾಲಲ್ಲಿ ನಡಿಗೆ ಆರಂಭಿಸಿದ. ಅವನು ಬಂಗಾಳಕ್ಕೆ ಬಂದಾಗ, ಕಲ್ಕತ್ತೆಯ ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರೆಂಬ ಮಹಾನ್ ಸಂತರಿದ್ದಾರೆ ಎಂಬ ವಿಷಯ ತಿಳಿದುಬಂತು. ಹಲವೆಡೆ ವಿಚಾರಿಸಿ, ಕೊನೆಗೂ ಅವನು ದಕ್ಷಿಣೇಶ್ವರಕ್ಕೆ ಬಂದ. ಆದರೆ ಅಲ್ಲಿ ಕಾಳೀಮಂದಿರದ ಮಂದಿ ಹೇಳಿದರು, ಶ್ರೀರಾಮಕೃಷ್ಣರು ಕೆಲವೇ ದಿನಗಳ ಹಿಂದೆ ತೀರಿಕೊಂಡಿದ್ದಾರೆ ಎಂಬುದಾಗಿ. ಅದನ್ನು ಕೇಳಿದೊಡನೆಯೇ ಸಾಧುವಿಗೆ ಹೃದಯಾಘಾತವಾಯಿತು, "ಏನು? ತೀರಿಕೊಂಡರೆ? ನಾನು ಅಷ್ಟೊಂದು ದೂರದ ಅಯೋಧ್ಯೆಯಿಂದ ಅವರನ್ನು ನೋಡುವ ಸಲುವಾಗಿ ಬರಿಗಾಲಲ್ಲೇ ನಡೆದು ಬಂದೆನಲ್ಲಾ! ಎಷ್ಟೊಂದು ಕಷ್ಟಪಟ್ಟೆ ! ಆದರೆ ಈಗ ಅವರು ದೇಹ ಬಿಟ್ಟರಲ್ಲ !" ಎಂದು ಆತ ಅಳತೊಡಗಿದ.

ಕಾಳೀಮಂದಿರದ ಮುಖ್ಯಸ್ಥರೊಬ್ಬರು ಅವನಿಗೆ ಊಟ ತರಿಸಿಕೊಟ್ಟರೆ, ಅವನು ಬೇಡವೆಂದ. ಅವನು ಪಂಚವಟಿಗೆ ಹೋಗಿ ಎರಡು ಮೂರು ದಿನ ಅಲ್ಲಿ ಉಪವಾಸವಿದ್ದ. ಒಂದು ದಿನ ರಾತ್ರಿ ಅವನಿಗೆ ಶ್ರೀರಾಮಕೃಷ್ಣರು ಕಾಣಿಸಿಕೊಂಡು, "ತುಂಬಾ ದಿನಗಳಿಂದ ನೀನು ಏನನ್ನೂ ತಿಂದಿಲ್ಲ. ನಿನಗಾಗಿ ನಾನು ಈ ಪಾಯಸ ತಂದಿದ್ದೇನೆ ಇದನ್ನು ತೆಗೆದುಕೋ" ಎಂದರು. ಆ ಸಾಧುವಿಗೆ ಪಾಯಸವನ್ನು ಉಣಿಸಿ ಶ್ರೀರಾಮಕೃಷ್ಣರು ಅದೃಶ್ಯರಾದರು.

ಮರುದಿನ ನಾನು ಪಂಚವಟಿಗೆ ಹೋದೆ. ಆ ಸಾಧು ಆನಂದದಿಂದ ತುಂಬಿತುಳುಕುತ್ತಿದ್ದ. 'ನಿನಗೇನಾಯಿತು? ನಿನ್ನೆ ಅಷ್ಟೊಂದು ಅಳುತ್ತಿದ್ದೆ. ಈಗ ಇಷ್ಟೊಂದು ಆನಂದದಿಂದ ಇದ್ದೀಯಲ್ಲಾ?' ಎಂದು ನಾನು ಕೇಳಿದೆ. ಆಗ ಅವನು ನನಗೆ ನಡೆದ ವಿಷಯವನ್ನೆಲ್ಲ ತಿಳಿಸಿದ. ಅವನಿಗೆ ಶ್ರೀರಾಮಕೃಷ್ಣರು ಪಾಯಸವನ್ನು ಕೊಟ್ಟಿದ್ದ ಮಣ್ಣಿನ ಪಾತ್ರೆಯನ್ನು ನನಗೆ ತೋರಿಸಿದ".

ಆ ಮಣ್ಣಿನ ಪಾತ್ರೆ ರಾಮಲಾಲನ ಬಳಿ ತುಂಬಾ ಸಮಯ ಇತ್ತು, ಆದರೆ ಆ ನಂತರ ಅದು ನಾಶವಾಯಿತು. *

(' Sri Ramakrishna Saves' ಪುಸ್ತಕದಿಂದ, Ramakrishna Math, Hyderabad 500 029)

ಚಾರಿತ್ರ್ಯದ ಬೆಳವಣಿಗೆ ಮತ್ತು ರಾಷ್ಟ್ರ ನಿರ್ಮಾಣಕ್ಕಾಗಿ ಶಿಕ್ಷಣ

ಭಾಗ ೧

ಸ್ವಾಮಿ ರಂಗನಾಥಾನಂದ

ಅನುವಾದ: ಸ್ವಾಮಿ ವೀರೇಶಾನಂದ

ರಾಮಕೃಷ್ಣ ಮಹಾಸಂಘದ ೧೩ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು ೩.೭.೧೯೯೨ರಂದು ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ ಪಿ.ಯು. ವಿದ್ಯಾರ್ಥಿಗಳ ವಾರ್ಷಿಕ ತರಬೇತಿ ಶಿಬಿರದಲ್ಲಿ ನೀಡಿದ ಭಾಷಣವು "Education for Character Development and National Building" ಎಂಬ ಪುಸ್ತಿಕೆಯ ರೂಪದಲ್ಲಿ ಮುದ್ರಿತವಾಗಿದ್ದು, ಅದರ ಅನುವಾದವನ್ನಿಲ್ಲಿ ಪ್ರಕಟಿಸುತ್ತಿದ್ದೇವೆ. ಶ್ರೇಷ್ಠ ಚಿಂತಕರೂ, ವಾಗ್ಮಿಗಳೂ ಆಗಿದ್ದ ಸ್ವಾಮೀಜಿಯವರು ದೇಶದುದ್ದಗಲ ಹಾಗೂ ವಿದೇಶಗಳಲ್ಲಿ ವಿಚಾರಪ್ರಚೋದಕವಾದ, ಪ್ರಬುದ್ಧವಾದ ಅನೇಕ ಪ್ರವಚನಗಳನ್ನು ನೀಡಿದ್ದಾರೆ. ಅವರ ಪ್ರವಚನ, ಲೇಖನಗಳ ಹಲವಾರು ಸಂಪುಟಗಳು ಹೊರಬಂದಿವೆ. ಅನುವಾದಕರು ಬೇಲೂರು ಮಠದಲ್ಲಿರುವ ಬ್ರಹ್ಮಚಾರಿಗಳ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಯೂ, ವಿದ್ವಾಂಸರೂ ಆಗಿರುವ ಸ್ವಾಮೀಜಿಯವಯರು 'ವಿವೇಕಪ್ರಭ'ದ ಹಿಂದಿನ ಸಂಪಾದಕರಾಗಿದ್ದರು.

ನನ್ನ ಪ್ರಿಯ ಯುವ ಸ್ನೇಹಿತರೇ,

ನಿಮ್ಮೆಲ್ಲರೊಂದಿಗೆ ಕೆಲವು ನಿಮಿಷಗಳ ಕಾಲ ಕಳೆಯಲು ನನಗೆ ಸಂತೋಷವಾಗುತ್ತಿದೆ. ಇಂದು ನಮ್ಮ ದೇಶವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದು ನಮಗೆ ಗೊತ್ತು. ನಮ್ಮ ಶಿಕ್ಷಣವು ಈ ಸಮಸ್ಯೆಗಳ ಪರಿಹಾರಕ್ಕೆ ನಮ್ಮನ್ನು ಸನ್ನದ್ಧರನ್ನಾಗಿ ಮಾಡಬೇಕು. ಆದರೆ ಹಾಗೆ ಆಗುತ್ತಿಲ್ಲ. ನೀವೆಲ್ಲರೂ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯಂಥ, ಆಧ್ಯಾತ್ಮಿಕತೆಗೆ ಮಹತ್ವ ನೀಡುವ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿದ್ದೀರಿ. ದೇಶ ಎದುರಿಸುತ್ತಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ಆಳವಾಗಿ ಆಲೋಚಿಸುವ, ಮತ್ತು ರಾಷ್ಟ್ರೀಯ ಸಮಸ್ಯೆಗಳಿಗೆ ಶಿಕ್ಷಣವು ಹೇಗೆ ಪರಿಹಾರವನ್ನು ಸೂಚಿಸಲು ಸಮರ್ಥವಾಗಿದೆ ಎಂದು ಕಂಡುಹಿಡಿದುಕೊಳ್ಳುವ ಅವಕಾಶವನ್ನು ಇಲ್ಲಿ ನೀವು ಪಡೆದುಕೊಂಡಿದ್ದೀರಿ.

ನಮ್ಮ ರಾಷ್ಟ್ರೀಯ ವ್ಯಾಧಿ

ಇಂದು ನಮ್ಮ ದೇಶದಲ್ಲಿ ಲಕ್ಷಾಂತರ ಮಂದಿ ಹಸಿವೆಯಿಂದ ಕಂಗೆಟ್ಟಿದ್ದಾರೆ. ಇನ್ನೂ ಲಕ್ಷಾಂತರ ಜನರು ನಮಗೆ ದೊರೆತ ಸ್ವಾತಂತ್ರ್ಯದ ಫಲವನ್ನು ಅನುಭವಿಸುವಲ್ಲಿ ವಿಫಲರಾಗಿದ್ದಾರೆ. ಉನ್ನತ ವರ್ಗದವರೆನಿಸಿಕೊಂಡ ಜನರು ಸ್ವಾತಂತ್ರ್ಯದ ಎಲ್ಲ ಫಲ ಗಳನ್ನೂ ಕಸಿದುಕೊಂಡಿದ್ದಾರೆ. ನಮ್ಮ ಜನರಲ್ಲಿ ಇಲ್ಲದಿರುವುದಾದರೂ ಏನು? ನಮ್ಮಲ್ಲಿ ಸಾಕಷ್ಟು ಹಣ ಮತ್ತು ಸಂಪನ್ಮೂಲಗಳಿವೆ. ನಮ್ಮ ದೇಶದ ಮೊದಲ ಪಂಚವಾರ್ಷಿಕ ಯೋಜನೆಗೆ ಖರ್ಚು ಮಾಡಿದ ವೆಚ್ಚ ೨೦೦೦ ಕೋಟಿ ರೂಪಾಯಿಗಳು. ಈ ಬಂಡವಾಳವು ಒಂದು ಪಂಚವಾರ್ಷಿಕ ಯೋಜನೆಯಿಂದ ಇನ್ನೊಂದು ಪಂಚವಾರ್ಷಿಕ ಯೋಜನೆಗೆ ಹೆಚ್ಚಾಗುತ್ತ ಬಂದು, ಎಂಟನೆಯ ಪಂಚವಾರ್ಷಿಕ ಯೋಜನೆಗೆ ೨,೮೦,೦೦೦ ಕೋಟಿ ರೂಪಾಯಿಗಳ ಭಾರೀ ಮೊತ್ತವನ್ನು ತಲುಪಿದೆ. ಇಷ್ಟಾಗಿಯೂ ನಮ್ಮಲ್ಲಿ ಏಕಿಷ್ಟು ಬಡತನ? ಲಕ್ಷಾಂತರ ಜನರು ಏಕೆ ಹೀಗೆ ನರಳುತ್ತಿದ್ದಾರೆ? ಈ ಬಗೆಯ ಆಲೋಚನೆಯನ್ನು ನೀವು ಮಾಡಬೇಕು. ಮತ್ತು ಈ ಸಮಸ್ಯೆಗೆ ಉತ್ತರವನ್ನು ಕಂಡುಕೊಳ್ಳಬೇಕು. ಈ ಆಲೋಚನಾ ವಿಧಾನವನ್ನು ಮಾಡುವ ಕ್ರಿಯೆಯಲ್ಲಿ ನಾನು ನಿಮಗೆ ಸಹಾಯ ಮಾಡುತ್ತೇನೆ.



ಚಾರಿತ್ರ್ಯ ಮತ್ತು ಅದರ ಮಹತ್ವ

ಇಂದು ನಮ್ಮ ರಾಷ್ಟ್ರೀಯ ಚಾರಿತ್ರ್ಯದ ದುಃಸ್ಥಿತಿ ಈ ಮಟ್ಟಕ್ಕೆ ಇಳಿದಿದೆ. ನಿಜವಾದ ಚಾರಿತ್ರ್ಯವು ನಮ್ಮ ಜೀವನದ ಅಂಗ ವಾಗಿದ್ದೇ ಆದರೆ, ಇಷ್ಟುಹೊತ್ತಿಗೆ ನಾವು ನಮ್ಮ ದೇಶವನ್ನು ಸಮೃದ್ಧಿಯ ಶಿಖರಕ್ಕೆ ಕೊಂಡೊಯ್ಯಬಹುದಾಗಿತ್ತು. ಚಾರಿತ್ರ್ಯ ವೊಂದು ಇದ್ದರೆ, ಒಂದು ರೂಪಾಯಿಯ ಬಂಡವಾಳ ಹೂಡು ವಿಕೆಯಿಂದ ಜನರಿಗೆ ಹತ್ತು ರೂಪಾಯಿಗಳ ಅನುಕೂಲತೆ ಗಳನ್ನು ಮಾಡಿಕೊಡಬಹುದು. ಚಾರಿತ್ರ್ಯವಿಲ್ಲದಿದ್ದರೆ, ನೂರು ರೂಪಾಯಿಯು ಹತ್ತು ರೂಪಾಯಿಯ ಮೌಲ್ಯವುಳ್ಳದ್ದಾಗಿ ಬಿಡುತ್ತದೆ. ಆದರೆ ನಮ್ಮ ಮುಂದಿರುವ ಸವಾಲೆಂದರೆ, ಈ ಬಗೆಯ ಚಾರಿತ್ರ್ಯವನ್ನು ಬೆಳೆಸಿಕೊಳ್ಳುವುದು ಹೇಗೆ ಎನ್ನುವುದು. ಮಾನವ-ನಿರ್ಮಾಣ ಹಾಗೂ ಚಾರಿತ್ರ್ಯ-ನಿರ್ಮಾಣ ಶಿಕ್ಷಣ ವನ್ನು ನೀಡುವ ಸ್ವಾಮಿ ವಿವೇಕಾನಂದರ ಮಹಾನ್ ಆದರ್ಶದ ಮಹತ್ವವಿರುವುದು ಇಲ್ಲಿಯೇ.

'ಚಾರಿತ್ರ್ಯ' ಎಂದರೆ ನಿಜವಾಗಿಯೂ ಏನು? ಸಮಾಜಮುಖಿಯಾದ ಇಚ್ಛಾಶಕ್ತಿಯೇ ಕೇಂದ್ರವಾಗಿ ಉಳ್ಳದ್ದು ಚಾರಿತ್ರ್ಯವೆನಿಸಿಕೊಳ್ಳುತ್ತದೆ. ನಿಮ್ಮ ಇಚ್ಛಾಶಕ್ತಿಯು ಸಾಮಾಜಿಕ ಕಲ್ಯಾಣವನ್ನೇ ಧ್ಯೇಯವನ್ನಾಗಿ ಇಟ್ಟುಕೊಂಡಿರಬೇಕು. ಆಗ ಮಾತ್ರವೇ ನೀವು ಚಾರಿತ್ರ್ಯವನ್ನು ಬೆಳೆಸಿಕೊಳ್ಳಲು ಸಾಧ್ಯ. ಇದರಿಂದ, 'ಸಾಮಾಜಿಕ ಒಲವು' ಎನ್ನುವುದರ ಅರ್ಥ, ನಮ್ಮ ಸ್ವಾರ್ಥವನ್ನು ಕಡಮೆ ಮಾಡಿಕೊಳ್ಳುವುದೇ ಆಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ, ನಾವು ನಮ್ಮ ಬಗ್ಗೆ ಮಾತ್ರವೇ ಆಲೋಚಿಸುತ್ತೇವೆ, ಗಮನ ಹರಿಸುತ್ತೇವೆ. ಅದು ನಿಲ್ಲಬೇಕು. ನಾವು ಇತರರ ಬಗ್ಗೆಯೂ ಗಮನ ಹರಿಸಬೇಕು. ಏಕೆಂದರೆ, ವ್ಯಕ್ತಿಗಳು ಕೂಡಿಕೊಂಡಿರುವ ಒಂದು ಸಮಾಜದಲ್ಲಿ ನಾವು ಜೀವಿಸುತ್ತಿದ್ದೇವೆ. ಉದಾಹರಣೆಗೆ, ನಾವು ಒಂದು ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದಿಟ್ಟುಕೊಳ್ಳಿ. ಅಲ್ಲಿ ನಾವು ಜನಸೇವಕರಾಗಿ, ಅವರ ಒಳಿತಿಗಾಗಿ ಕೆಲಸ ಮಾಡುತ್ತೇವೆ – ಎಂಬ ಭಾವನೆಯನ್ನು ಭಾರತದ ಜನತೆ ಇನ್ನೂ ಸಾಕಾರಗೊಳಿಸಿಕೊಂಡಿಲ್ಲ. ಇತರ ದೇಶಗಳ ಜನರು ಇದನ್ನು ಅರ್ಥಮಾಡಿಕೊಂಡಿದ್ದಾರೆ. ಅದಕ್ಕೆಂದೇ ಆ ದೇಶಗಳಲ್ಲಿ ಬಡತನ ಕಂಡುಬರುವುದಿಲ್ಲ, ಮತ್ತು ಅವು ಬಹಳಷ್ಟು ಅಭಿವೃದ್ಧಿಯನ್ನು ಸಾಧಿಸಿವೆ. ತಮ್ಮ ಭೌತಿಕ ಮತ್ತು ಬೌದ್ಧಿಕ ಅಭಿವೃದ್ಧಿಯ ಜೊತೆಜೊತೆಗೆ ಆ ದೇಶಗಳು, ಇತರರ ಬಗೆಗಿನ ಕಳಕಳಿಯನ್ನೇ ಕೇಂದ್ರಬಿಂದುವಾಗಿಟ್ಟುಕೊಂಡು ಚಾರಿತ್ರ್ಯಶಕ್ತಿಯನ್ನೂ ಕೂಡ ಬೆಳೆಸಿಕೊಂಡಿವೆ. ಇದು ನಮ್ಮ ದೇಶದಲ್ಲಿ ಕಾಣಬರುವುದಿಲ್ಲ. ನೀವು ಒಂದು ಕಚೇರಿಗೆ ಹೋದಾಗ, ಅಲ್ಲಿನ ಒಬ್ಬ ಗುಮಾಸ್ತನಿಗೆ ನೀವು ಲಂಚವನ್ನು ಕೊಡದೆ ಇದ್ದರೆ, ಅವನು ನಿಮ್ಮ ಬಗ್ಗೆ ಗಮನ ಹರಿಸುವುದೇ ಇಲ್ಲ. ನಮ್ಮದು ಇದೆಂಥ ಸಂಸ್ಕೃತಿ! ಎಂಥ ಕೀಳುಮಟ್ಟದ ಸಂಸ್ಕೃತಿ ಇದು!

ನಿಜವಾದ ಧರ್ಮ

ಮೇಲಿನ ಕಾರಣದಿಂದ, ನಾವು ಚಾರಿತ್ರ್ಯಸಂಪನ್ನರಾಗಬೇಕೆಂಬುದು ಸ್ಪಷ್ಟವಾಗುತ್ತದೆ. ಇಂದು ನಾವು ಯಾವುದನ್ನು 'ಧರ್ಮ'ವೆಂದು ಕರೆಯುತ್ತೇವೆಯೋ, ಅದು ಕೆಡುಕಿನಿಂದ ಕೂಡಿದ್ದು; ಅಪಾಯಕಾರಿಯಾದದ್ದು ಮತ್ತು ನಿರರ್ಥಕವಾದದ್ದು. ಆಚರಣೆಗಳು, ಪೂಜಾಕ್ರಿಯೆಗಳು ಹಾಗೂ ಪವಾಡಗಳು – ಇವೆಲ್ಲ ನಮ್ಮನ್ನು ಉತ್ಕೃಷ್ಟ ಚಾರಿತ್ರ್ಯದೆಡೆಗೆ ಕೊಂಡೊಯ್ಯಬೇಕು. ಇಲ್ಲದಿದ್ದರೆ ಇವಾವುದಕ್ಕೂ ಯಾವುದೇ ಅರ್ಥವಿಲ್ಲ. ಈ ಅಭಿಪ್ರಾಯವನ್ನೇ ಸ್ವಾಮಿ ವಿವೇಕಾನಂದರು ೧೮೯೫ ರ ಮಾರ್ಚ್ ೨೧ರಂದು ಅಮೆರಿಕದ ಭಕ್ತೆ ಮಿಸೆಸ್ ಓಲೆ ಬುಲ್ ಎಂಬಾಕೆಗೆ ಬರೆದ ತಮ್ಮ ಪತ್ರದಲ್ಲಿ ವ್ಯಕ್ತಪಡಿಸಿದ್ದಾರೆ:

'ಮನುಷ್ಯ–ಮನುಷ್ಯರ ನಡುವಿನ ಸಹೋದರ ಭಾವನೆಗಳಿಗೆ ಈ ಹಿಂದೂ, ಕ್ರಿಶ್ಚಿಯನ್ ಮುಂತಾದ ಹೆಸರುಗಳು ದೊಡ್ಡ ಆತಂಕಗಳೆಂದು ನನ್ನ ಗುರುಗಳು (ಶ್ರೀರಾಮಕೃಷ್ಣರು) ಹೇಳುತ್ತಿದ್ದರು. ಮೊದಲು ನಾವು ಅವುಗಳನ್ನು ಮುರಿಯಲು ಯತ್ನಿಸಬೇಕು. ಅವು ತಮ್ಮಲ್ಲಿದ್ದ ಒಳ್ಳೆಯ ಶಕ್ತಿಗಳನ್ನೆಲ್ಲ ಕಳೆದುಕೊಂಡು ಈಗ ಕೇವಲ ನಾಶಕಾರಕ ಶಕ್ತಿಯನ್ನು ಮಾತ್ರ ಹೊಂದಿವೆ. ನಮ್ಮಲ್ಲಿ ಅತ್ಯಂತ ಉತ್ತಮರಾದವರೂ ಅದರ ಭಯಂಕರ ಪ್ರಭಾವಕ್ಕೆ ಒಳಗಾಗಿ ಪಿಶಾಚಿಗಳಂತೆ ಆಗುತ್ತೇವೆ. ನಾವು ಶಕ್ತಿಮೀರಿ ಪ್ರಯತ್ನಿಸಿ ಜಯಶಾಲಿಗಳಾಗಬೇಕು.

'ಯಾರು ಮಾನವಕುಲಕ್ಕೆ ಸಹಾಯ ಮಾಡಬೇಕೆಂದಿರುವರೋ ಅವರೆಲ್ಲಾ ತಮ್ಮ ಸುಖ, ದುಃಖ, ಹೆಸರು, ಕೀರ್ತಿ ಮತ್ತು ಇತರ ಎಲ್ಲಾ ಬಗೆಯ ಆಸೆ–ಆಕಾಂಕ್ಷೆಗಳನ್ನೂ ಗಂಟುಮೂಟೆ ಕಟ್ಟಿ ಸಮುದ್ರಕ್ಕೆ ಎಸೆದು ಭಗವಂತನೆಡೆಗೆ ಬರಬೇಕು. ಇದನ್ನೇ ಎಲ್ಲಾ ಆಚಾರ್ಯರೂ ಉಪದೇಶಿಸಿದ್ದರು ಮತ್ತು ಇದರಂತೆಯೇ ಅವರೂ ಮಾಡಿದರು.' (ಸ್ವಾಮಿ ವಿವೇಕಾನಂದರ ಪತ್ರಮಾಲೆ, ಪು. ೨೦೫)

ಇದಲ್ಲದೆ, ೧೮೯೬, ಜೂನ್ ೧೭ರಂದು ಲಂಡನ್ನಿನಿಂದ ಭಗಿನಿ ನಿವೇದಿತೆಗೆ ಬರೆದ ತಮ್ಮ ಪತ್ರದಲ್ಲಿ ಸ್ವಾಮೀಜಿ ಹೀಗೆ ಬರೆಯುತ್ತಾರೆ:

'ನನ್ನ ಆದರ್ಶವನ್ನು ನಿಜವಾಗಿ ಬಹಳ ಸ್ವಲ್ಪ ಪದಗಳಲ್ಲಿ ವ್ಯಕ್ತಪಡಿಸಬಹುದು. ಅದೇ, ಮಾನವನಿಗೆ ತನ್ನ ದೈವತ್ವವನ್ನು ಬೋಧಿಸುವುದು ಮತ್ತು ಅದನ್ನು ಜೀವನದ ಪ್ರತಿಯೊಂದು ಕ್ಷಣದಲ್ಲೂ ಹೇಗೆ ವ್ಯಕ್ತಗೊಳಿಸಬೇಕೆಂಬುದನ್ನು ತಿಳಿಸುವುದು.

'ಜಗತ್ತಿನ ಧರ್ಮಗಳೆಲ್ಲ ನಿಸ್ತೇಜವಾಗಿ ನಗೆಗೀಡಾಗಿವೆ. ಜಗತ್ತಿಗೆ ಬೇಕಾಗಿರುವುದು ಶುದ್ಧ ಚಾರಿತ್ರ್ಯ. ಯಾರ ಜೀವನದಲ್ಲಿ ನಿರಂತರವೂ ಪ್ರೇಮ, ನಿಃಸ್ವಾರ್ಥ, ತ್ಯಾಗಗಳು ನಂದಾದೀವಿಗೆಯಂತೆ ಉರಿಯುತ್ತಿವೆಯೋ, ಅಂತಹ ಪುಣ್ಯಾತ್ಮರು ಜಗತ್ತಿಗೆ ಬೇಕಾಗಿದ್ದಾರೆ. ಆ ಪ್ರೇಮವೇ ಪ್ರತಿಯೊಂದು ಮಾತಿನಿಂದಲೂ ಸಿಡಿಲಿನಂತಹ ಪರಿಣಾಮವನ್ನು ಉಂಟುಮಾಡಬಲ್ಲುದು.' (ಸ್ವಾಮಿ ವಿವೇಕಾನಂದರ ಪತ್ರಮಾಲೆ, ಪು. ೨೯೯–೩೦೦)

ದೇಶದ ಸಮಸ್ಯೆಗಳಿಗೆ ಪರಿಹಾರವಾಗಿ ವೇದಾಂತಜ್ಞಾನ

ಈ ಬಗೆಯ ಚಾರಿತ್ರ್ಯವರ್ಧನೆಗೆ ಸಾಧನವಾಗಿ ಸ್ವಾಮಿ ವಿವೇಕಾನಂದರು ವೇದಾಂತ ಸಂದೇಶವನ್ನು ನೀಡಿದ್ದಾರೆ. ವೇದಾಂತವೆಂದರೆ, ಉಪನಿಷತ್ತುಗಳ ಮಹಾನ್ ಬೋಧನೆಗಳು. ಈ ಉಪದೇಶಗಳು ಕೇವಲ ನಂಬಿಕೆಗೆ ಪ್ರಾಧಾನ್ಯ ನೀಡುವುದಿಲ್ಲ; ಬದಲಾಗಿ, ಧೈರ್ಯವಾಗಿ ಪ್ರಶ್ನಿಸುವಂತೆ, ಚರ್ಚೆ ಮಾಡುವಂತೆ ಮತ್ತು ನಾವೇ ಸ್ವತಃ ನೇರವಾಗಿ ಸತ್ಯವನ್ನು ಕಂಡುಕೊಳ್ಳುವಂತೆ ಉತ್ತೇಜಿಸುತ್ತವೆ, ಹಾಗೂ ಅದಕ್ಕನುಗುಣವಾಗಿ ಜೀವಿಸುವಂತೆ ಪ್ರೇರೇಪಿಸುತ್ತವೆ. ಇದೇ ಉಪನಿಷತ್ತುಗಳು ಮತ್ತು ಭಗವದ್ಗೀತೆಯ ವೈಜ್ಞಾನಿಕ ಮಹತ್ವ. ಈ ಮಹಾನ್ ಗ್ರಂಥಗಳಲ್ಲಿ ಋಷಿವರೇಣ್ಯರು ತಮ್ಮ ಸ್ವಂತ ಅನುಭವದ ಮೂಲಕ, ಚಾರಿತ್ರ್ಯವನ್ನು ರೂಪಿಸಿಕೊಳ್ಳಬಹುದಾದ ಖಚಿತ ಆಧಾರಸೂತ್ರವನ್ನು ಇಡೀ ಮಾನವತೆಗೆ ನೀಡಿರುವುದನ್ನು ಕಾಣಬಹುದು. ನಿತ್ಯಶುದ್ಧ, ನಿತ್ಯಮುಕ್ತ ಮತ್ತು ಅನಂತ ಆತ್ಮವು ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಸುಪ್ತವಾಗಿರುವುದು; ಅದು ನಮ್ಮ ಸಹಜ ಸ್ವರೂಪವೇ ಆಗಿದೆ. ಆ ದಿವ್ಯತೆಯ ಕಿಡಿ ಪ್ರತಿಯೊಬ್ಬರಲ್ಲಿಯೂ – ಕೇವಲ ಮಾನವಜೀವಿಗಳಲ್ಲಿ ಮಾತ್ರವಲ್ಲ, ಇತರೆಲ್ಲ ಜೀವರಾಶಿಗಳಲ್ಲಿಯೂ ಕೂಡ ಅಡಗಿದೆ. ಆದರೆ, ಮಾನವನು ಮಾತ್ರವೇ ಈ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಜೈವಿಕವಾಗಿ ಸಮರ್ಥನಾಗಿದ್ದಾನೆ. ಈ ಸತ್ಯವನ್ನು ನೀವೇ

ಸ್ವತಃ ಕಂಡುಕೊಳ್ಳಬೇಕು. ಅದನ್ನು ನಿಮ್ಮ ಜೀವನದಲ್ಲಿ, ನಡವಳಿಕೆಯಲ್ಲಿ ಮತ್ತು ಹಾವಭಾವಗಳಲ್ಲಿ ವ್ಯಕ್ತಗೊಳಿಸಬೇಕು. ಈ ದೇಹ-ಮನಸ್ಸುಗಳ ಸಂಕೀರ್ಣದ ಹಿನ್ನೆಲೆಯಲ್ಲಿ ಅಗಾಧ ಆಧ್ಯಾತ್ಮಿಕ ಆಯಾಮವೊಂದಿದೆ. ಅದು ಅನಂತವಾಗಿದ್ದು, ನಮ್ಮೆಲ್ಲರಲ್ಲೂ ಸುಪ್ತವಾಗಿದೆ. ಆ ಏಕಮಾತ್ರ ಪರಿಶುದ್ಧ ಚೈತನ್ಯ ಅಥವಾ 'ಚಿತ್' ಅಂಶವೇ ನಿಮ್ಮಲ್ಲಿ, ನನ್ನಲ್ಲಿ ಮತ್ತು ಎಲ್ಲರಲ್ಲಿಯೂ ಇದೆ. ಹೀಗಾಗಿ ನಾವು ಆಧ್ಯಾತ್ಮಿಕವಾಗಿ ಒಂದೇ ಆಗಿದ್ದೇವೆ. ಇದೇ ವೇದಾಂತದ ಬೋಧನೆ. ಇದೇ ಅದ್ವೈತ ಸಿದ್ಧಾಂತ. ಈ ಬೋಧನೆಯನ್ನು ನಾವು ಭಗವದ್ಗೀತೆಯಲ್ಲಿಯೂ ನೋಡುತ್ತೇವೆ. ಚಾರಿತ್ರ್ಯದ ಬೆಳವಣಿಗೆಗೆ ಇದೇ ಆಧಾರ ಮತ್ತು ಆಕರವಾಗಬೇಕು. ಬರಿಯ ದೇಹಪ್ರಜ್ಞೆಯಿಂದ ಪ್ರತ್ಯೇಕತೆಯ ಭಾವನೆ ಹೊರಹೊಮ್ಮುತ್ತದೆ. ಆಗ ನಮ್ಮ ಭಾವನೆಗಳು ಸ್ವಾರ್ಥಮಯವೂ, ಸ್ವಕೇಂದ್ರಿತವೂ ಆಗಿಬಿಡುತ್ತವೆ. ಉದಾಹರಣೆಗೆ, ನನ್ನ ಭಾವನೆ ಹೇಗಿರಬೇಕೆಂದರೆ, ನಾನು ನಿಮ್ಮಲ್ಲಿ ಸಮಾನತೆಯನ್ನು ಹೊಂದಿರಬೇಕು. ಅದು ನಮ್ಮ ನಿತ್ಯನೂತನ ಆಧ್ಯಾತ್ಮಿಕ ಸ್ವರೂಪದಿಂದ ಮಾತ್ರವೇ ಮೂಡಿಬರಲು ಸಾಧ್ಯ. ಭೌತಿಕವಾಗಿ ನಾನು ನಿಮಗಿಂತ ಪ್ರತ್ಯೇಕವಾಗಿದ್ದೇನೆ, ನಿಜ. ನಾನು ಊಟ ಮಾಡಿದರೆ, ನಿಮಗೇನೂ ತೃಪ್ತಿಯಾಗದು. ನೀವು ಊಟ ಮಾಡಿದಾಗ, ನನಗೂ ತೃಪ್ತಿಯಾಗದು. ಈ ಅರ್ಥದಲ್ಲಿ ನಾವು ಬೇರೆಬೇರೆ ಎನ್ನುವುದು ಸರಿಯೇ. ಆದರೆ, ಅದು ಕೇವಲ ಭೌತಿಕ ನೆಲೆಗಟ್ಟಿನಲ್ಲಿ ಮಾತ್ರ. ಪರಿಶುದ್ಧ ಚೈತನ್ಯಸ್ವರೂಪವಾದ ಆತ್ಮಸ್ವರೂಪದ ಹಂತದಲ್ಲಿ ನಾವೆಲ್ಲರೂ ಒಂದೇ ಆಗಿದ್ದೇವೆ.

ನಿಸ್ವಾರ್ಥತೆ ಮತ್ತು ಜೀನ್

ಈ ದೇಹವು ಜೀನ್‌ಗಳೆಂಬ ಆನುವಂಶಿಕ (genetic) ಅಣುಗಳ ಹಲವಾರು ಗುಂಪುಗಳಿಂದ ಮಾಡಲ್ಪಟ್ಟಿದೆ. ನಮ್ಮ ಭೌತಿಕ ಸ್ವಭಾವವು ನಮ್ಮನ್ನು ಆರೋಗ್ಯವಂತರನ್ನಾಗಿ ಮತ್ತು ಶಕ್ತಿವಂತರನ್ನಾಗಿ ಮಾಡಬಹುದು. ಆದರೆ ಅದು ನಮಗೆ ನೈತಿಕ ಮೌಲ್ಯಗಳನ್ನು ನೀಡಲಾರದು. ಜೀನ್‌ಗಳು ನಮಗೆ ಯಾವುದೇ ರೀತಿಯ ನೈತಿಕ ಮೌಲ್ಯಗಳನ್ನೂ ನೀಡಲಾರವು ಎಂದು ಜೀವಶಾಸ್ತ್ರ ಇಂದು ಪ್ರತಿಪಾದಿಸುತ್ತಿದೆ. ಅದಕ್ಕೆಂದೇ, ಜೀನ್‌ಗಳು ಸ್ವಭಾವತಃ ಸ್ವಾರ್ಥಿಗಳು ಎಂದು ಹೇಳಲಾಗುತ್ತದೆ. ಇದನ್ನು ಹೇಳಿದ್ದು ಒಬ್ಬ ವಿಜ್ಞಾನಿ. ಆತನ ಹೆಸರು ರಿಚರ್ಡ್ ಡಾಕಿನ್ಸ್ ಎಂದು. ೧೯೭೬ರಲ್ಲಿ ಪ್ರಕಟವಾದ ತನ್ನ Selfish Gene ಎಂಬ ಪುಸ್ತಕದಲ್ಲಿ ಆತ ಹೀಗೆ ಹೇಳಿದ್ದಾನೆ *(ಪುಟ ೨-೩, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೦, ನೂತನ ಆವೃತ್ತಿ) :*

"ಈ ಪುಸ್ತಕದಲ್ಲಿ ಪ್ರತಿಪಾದಿಸಲಾಗಿರುವ ವಾದವೆಂದರೆ, ನಾವು ಮತ್ತು ಎಲ್ಲ ಪ್ರಾಣಿಗಳು ನಮ್ಮಲ್ಲಿರುವ ಜೀನ್‌ಗಳಿಂದ ಸೃಷ್ಟಿಸಲ್ಪಟ್ಟ ಯಂತ್ರಗಳು ಎಂಬುದು. ಚಿಕಾಗೋ ನಗರದ ಯಶಸ್ವಿ ರೌಡಿಗಳ ಹಾಗೆ, ನಮ್ಮ ಜೀನ್‌ಗಳು ಉಳಿದುಕೊಂಡು ಬಂದಿವೆ. ಕೆಲವೊಂದಂತೂ ಅತ್ಯಂತ ಸ್ಪರ್ಧಾತ್ಮಕವಾದ ಈ ಜಗತ್ತಿನಲ್ಲಿ ಲಕ್ಷಾಂತರ ವರ್ಷಗಳಿಂದಲೂ ಉಳಿದಿವೆ. ಹೀಗಾಗಿ ನಮ್ಮ ಜೀನ್‌ಗಳಲ್ಲಿ ಕೆಲವೊಂದು ನಿರ್ದಿಷ್ಟ ಗುಣಗಳು ಇವೆ ಎಂದು ನಾವು ಊಹಿಸಲು ಸಾಧ್ಯ. ಒಂದು ಯಶಸ್ವಿ ಜೀನ್‌ನಲ್ಲಿ ಇರಬಹುದಾದ ಪ್ರಧಾನ ಗುಣವೆಂದರೆ ನಿರ್ದಾಕ್ಷಿಣ್ಯವಾದ ಸ್ವಾರ್ಥ ಎಂದು ನಾನು ವಾದಿಸುತ್ತೇನೆ. ಈ ಜೀನ್‌ಗಳ ಸ್ವಾರ್ಥವು ಸಾಮಾನ್ಯವಾಗಿ ವೈಯಕ್ತಿಕ ನಡವಳಿಕೆಯಲ್ಲಿನ ಸ್ವಾರ್ಥಭಾವನೆಯ ಉದಯಕ್ಕೆ ಕಾರಣವಾಗುತ್ತದೆ. ಆದರೂ, ನಾವು ಮುಂದೆ ನೋಡುವಂತೆ, ಕೆಲವು ವಿಶೇಷ ಪರಿಸ್ಥಿತಿಗಳಿರುವುದನ್ನು ನಾವು ಗಮನಿಸಬಹುದು. ಅಂಥ ಪರಿಸ್ಥಿತಿಗಳಲ್ಲಿ ಪ್ರಾಣಿಗಳ ವೈಯಕ್ತಿಕ ನೆಲೆಯಲ್ಲಿ, ನಿಸ್ವಾರ್ಥತೆಯ ಸೀಮಿತ ಅಂಶವನ್ನು ಬೆಳೆಸಿಕೊಳ್ಳುವ ಮೂಲಕ, ತನ್ನ ಸ್ವಂತ ಸ್ವಾರ್ಥ ಗುರಿಗಳನ್ನು ಪರಿಣಾಮಕಾರಿಯಾಗಿ ಸಿದ್ಧಿಸಿಕೊಳ್ಳಲು ಯಾವುದೋ ಒಂದು ಜೀನ್ ಶಕ್ತವಾಗುತ್ತದೆ. ಈ ಹಿಂದಿನ ವಾಕ್ಯಗಳಲ್ಲಿ **'ವಿಶೇಷ'** ಮತ್ತು **'ಸೀಮಿತ'** ಎಂಬ ಪದಗಳು ಮುಖ್ಯವಾದುವು. ನಾವೆಷ್ಟೇ ವಿಶ್ವಾಸವಿಡಲು ಇಚ್ಛಿಸುವುದಾದರೂ, 'ವಿಶ್ವಪ್ರೇಮ' ಮತ್ತು 'ಒಟ್ಟಾರೆ ಜೀವಪ್ರವರ್ಗವೊಂದರ (species) ಒಳಿತು' ಎಂಬ ಕಲ್ಪನೆಗಳು ಜೈವಿಕ ವಿಕಾಸಕ್ಕೆ ಒಳಪಡುವಂಥವು ಎನ್ನುವುದು ಸಮಂಜಸವಲ್ಲ."

"ಈ ಪುಸ್ತಕವು ಯಾವುದರ ಬಗ್ಗೆ ಅಲ್ಲ ಎನ್ನುವುದನ್ನು ನಾನು ಮೊದಲು ಸ್ಪಷ್ಟಪಡಿಸುತ್ತೇನೆ. ಜೈವಿಕ ವಿಕಾಸದ ಮೇಲೆ ಆಧರಿಸಿದ ನೈತಿಕತೆಯನ್ನು ನಾನು ಪ್ರತಿಪಾದಿಸುವುದಿಲ್ಲ ಎನ್ನುವುದೇ ಅದು.

"ಜೀನ್‌ಗಳಲ್ಲಿ ಕಂಡುಬರುವ ಸಾರ್ವತ್ರಿಕ ನಿರ್ದಾಕ್ಷಿಣ್ಯ ಸ್ವಾರ್ಥತೆಯ ನಿಯಮದ ಮೇಲೆ ಆಧರಿಸಿದ ಮಾನವ ಸಮಾಜವು, ಬದುಕಲು ಅತ್ಯಂತ ಅಸಹ್ಯವಾದಂಥ ಸಮಾಜವಾಗುವುದು ಎನ್ನುವುದು ನನ್ನ ಸ್ವಂತ ಭಾವನೆ. ಇದಕ್ಕೆ ಸಂಬಂಧಿಸಿದಂತೆ ನಾನು ಒಂದು ಎಚ್ಚರಿಕೆಯನ್ನು ನೀಡಲೇಬೇಕು. ನಾನು ಇಚ್ಛಿಸಿದ ಹಾಗೆ, ವ್ಯಕ್ತಿಗಳು ಉದಾರ ಮತ್ತು ನಿಸ್ವಾರ್ಥ ಮನೋಭಾವದಿಂದ ಪರಸ್ಪರ ಸಹಕರಿಸುವ ಸಮಾಜವನ್ನು ಕಟ್ಟಲು ನೀವೂ ಇಚ್ಛಿಸುವಿರಾದರೆ, ನಮ್ಮ ಈ ಜೈವಿಕ ಸ್ವಭಾವದಿಂದ ಕಿಂಚಿತ್ತೂ ಸಹಾಯವನ್ನು ಅಪೇಕ್ಷಿಸದಿರಿ. ನಾವು ಪರೋಪಕಾರ ಮನೋಭಾವ ಮತ್ತು ಉದಾರತೆಗಳನ್ನು ಬೋಧಿಸಲು ಪ್ರಯತ್ನಪಡೋಣ. ಏಕೆಂದರೆ, ಜೈವಿಕವಾಗಿ ನಾವು ಸ್ವಾರ್ಥಿಗಳಾಗಿಯೇ ಹುಟ್ಟಿರುತ್ತೇವೆ. ನಮ್ಮ ಜೀನ್‌ಗಳು ಏನು ಮಾಡುತ್ತವೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ. ಏಕೆಂದರೆ, ಅವುಗಳ ಕುಹಕ ಯೋಜನೆಗಳನ್ನು ಪಲ್ಲಟ ಮಾಡುವ ಅವಕಾಶ ಆಗ ನಮಗೆ ಪ್ರಾಪ್ತವಾಗುತ್ತದೆ. ಇದನ್ನು (ಮಾನವನಲ್ಲದೆ) ಇನ್ನಾವ ಜೀವಪ್ರಭೇದವೂ ತಾನು ಸಾಧಿಸುತ್ತೇನೆಂಬ ಮಹತ್ವಾಕಾಂಕ್ಷೆಯನ್ನು ಹಿಂದೆಂದೂ ಹೊಂದಿರಲಿಲ್ಲ."

ಇಲ್ಲಿ ಲೇಖಕ ಹೇಳುವುದನ್ನು ಗಮನಿಸಿ: "ನಾವು ಪರೋಪಕಾರ ಮನೋಭಾವ ಮತ್ತು ಉದಾರತೆಗಳನ್ನು ಬೋಧಿಸಲು ಪ್ರಯತ್ನಪಡೋಣ. ಏಕೆಂದರೆ, ಜೈವಿಕವಾಗಿ ನಾವು ಸ್ವಾರ್ಥಿಗಳಾಗಿಯೇ ಹುಟ್ಟಿರುತ್ತೇವೆ."

ನಮ್ಮ ಅಂತರಂಗದಲ್ಲಿ ಆಳವಾಗಿ ಧುಮುಕುವುದು

ಚಾರಿತ್ರ್ಯಕ್ಕೆ ಬೇಕಾದ ಶಿಕ್ಷಣವನ್ನು ನಾವು ಎಲ್ಲಿಂದ ಪಡೆದುಕೊಳ್ಳಬಹುದು? ಭಾರತದ ಪ್ರಾಚೀನ ಋಷಿಗಳು ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದರು. ಈಗ ನಾವು ನಮ್ಮ ಅಂತರಂಗದಲ್ಲಿಯೇ ಇದಕ್ಕಾಗಿ ಅನ್ವೇಷಣೆಯನ್ನು ಮಾಡಲು ಆರಂಭಿಸೋಣ. ನಮ್ಮ ಭೌತಿಕ ಪ್ರಕೃತಿಗಿಂತ ಗಾಢವಾದ ಆಯಾಮವೊಂದಿದೆ. ಹಿಂದಿನ ಕಾಲದ ಪಾಶ್ಚಾತ್ಯ ವಿಜ್ಞಾನವು ಪ್ರಕೃತಿಯ ಮೇಲ್ಪದರವನ್ನು ಮಾತ್ರ ಪರಿಗಣನೆಗೆ ತಂದುಕೊಂಡಿತ್ತು. ಆದರೆ ನಂತರದ ಕಾಲದಲ್ಲಿ, ಪ್ರಕೃತಿಯ ಗಾಢವಾದ ಆಳವನ್ನು ಅದು ಅನ್ವೇಷಿಸತೊಡಗಿತು. ಉದಾಹರಣೆಗಾಗಿ, 'ಶಕ್ತಿ' ಅಥವಾ 'ಬಲ'ದ ಉದಾಹರಣೆಯನ್ನೇ ತೆಗೆದುಕೊಳ್ಳಿ. ವಿಜ್ಞಾನವು ಮಾನವ ಜನಾಂಗಕ್ಕೆ ಮೊದಲು ನೀಡಿದ್ದು ಉರುವಲು ಶಕ್ತಿಯನ್ನು ಮಾತ್ರ. ಆದರೆ ಅದು ಬಹಳ ಅಲ್ಪವಾದುದು. ಹೀಗಾಗಿ ವಿಜ್ಞಾನವು ಪ್ರಕೃತಿಯೊಳಗೆ ಮತ್ತೂ ಆಳವಾಗಿ ಅನ್ವೇಷಣೆ ನಡೆಸಿ, ಇದಕ್ಕಿಂತ ಪ್ರಬಲವೂ, ಸೂಕ್ಷ್ಮವೂ ಆದ ವಿದ್ಯುಚ್ಛಕ್ತಿಯನ್ನು ಕಂಡುಹಿಡಿಯಿತು. ಆದರೆ ವಿಜ್ಞಾನ ಅಷ್ಟಕ್ಕೇ ತೃಪ್ತಿಹೊಂದಲಿಲ್ಲ. ಅದು ಘೋಷಿಸಿತು, "ಇನ್ನೂ ಪ್ರಕೃತಿಯಾಳಕ್ಕೆ ಹೋಗುತ್ತೇನೆ" ಎಂದು. ಈ ಪ್ರಯತ್ನದ ಫಲವಾಗಿ ಅಣುಶಕ್ತಿಯನ್ನು ಕಂಡುಹಿಡಿಯಿತು. ಹೀಗೆ ಭೌತಿಕ ಪ್ರಕೃತಿಯ ಅಂತರಾಳದ ಅನ್ವೇಷಣೆಯನ್ನೇ ಪಾಶ್ಚಾತ್ಯ ವಿಜ್ಞಾನವು ಕೈಗೊಂಡಿತು ಎನ್ನಬಹುದು. ಉಪನಿಷತ್ತಿನ ಋಷಿಗಳು ನಾಲ್ಕು ಸಾವಿರ ವರ್ಷಗಳ ಹಿಂದೆ, ಈ ಬಗೆಯ ಅನ್ವೇಷಣೆಯನ್ನೇ ಮಾನವಜೀವಿಯ ವಿಷಯದಲ್ಲಿ, ಮಾನವ ಸ್ವಭಾವದ ಅಂತರಾಳದಲ್ಲಿ ಕೈಗೊಂಡರು.

ನಮ್ಮ ನೈಜ ಸ್ವಭಾವ

"ಇನ್ನು ನಾವು ಮಾನವಜೀವಿಯ ಅಂತರಾಳವನ್ನು ಹೊಕ್ಕು ನೋಡೋಣ" ಎಂದು ಆ ಋಷಿಗಳು ತಮಗೆ ತಾವೇ ಚಿಂತಿಸಿದರು. ಅದರಲ್ಲಿ ಯಾವ ಯಾವ ಸತ್ಯಗಳು, ಯಾವ ಯಾವ ಶಕ್ತಿಗಳು ಅಡಗಿವೆ ಎಂದು ಕಂಡುಕೊಂಡರು. ಮಾನವ ವ್ಯಕ್ತಿತ್ವದ ಮೇಲ್ಪದರದಲ್ಲಿ ನಮಗೆ ಕಾಣುವುದು ದೇಹ, ಮಾಂಸಖಂಡಗಳು ಮತ್ತಿತರ ಭಾಗಗಳಿಂದ ಕೂಡಿದ ಜೈವಿಕ ವ್ಯವಸ್ಥೆ. ಇನ್ನೂ ಸ್ವಲ್ಪ ಆಳವಾಗಿ ಕೆದಕಿ ನೋಡಿದಾಗ, ಋಷಿಗಳು ಕಂಡುಕೊಂಡಿದ್ದೇನೆಂದರೆ, ನರವ್ಯೂಹದ ಶಕ್ತಿಯನ್ನು. ಅದು ಮಾಂಸಖಂಡಗಳ ಶಕ್ತಿಗಿಂತಲೂ ಬೃಹತ್‌ಪ್ರಮಾಣದ ಶಕ್ತಿಯುಳ್ಳದ್ದು. ಇನ್ನೂ ಸ್ವಲ್ಪ ಆಳವಾಗಿ ಒಳಹೊಕ್ಕು ನೋಡಿದರೆ, ಮಾನಸಿಕ ಶಕ್ತಿಯು ಅನಾವರಣಗೊಳ್ಳುವುದು. ಅದು ನರವ್ಯೂಹಗಳ ಶಕ್ತಿಗಿಂತಲೂ ಸೂಕ್ಷ್ಮವಾದುದು ಮತ್ತು ಮಹತ್ತರ ಸಾಮರ್ಥ್ಯವುಳ್ಳದ್ದು. ಇನ್ನೂ ಆಳವಾಗಿ ತಮ್ಮ ಅನ್ವೇಷಣೆಯನ್ನು ಮುಂದುವರೆಸಿದ ಋಷಿಮುನಿಗಳು ಪರಿಶುದ್ಧ ಚೈತನ್ಯವೇ ಸ್ವಭಾವವಾಗುಳ್ಳ ದಿವ್ಯತೆಯ ಕಿಡಿಯನ್ನು ಕಂಡುಹಿಡಿದರು. ಆ ಮೂಲಕ ಆತ್ಮದ ಅನಂತ ಶಕ್ತಿಯನ್ನು ಅನಾವರಣಗೊಳಿಸಿದರು. ಹೀಗೆ ನಮ್ಮ ಋಷಿಮುನಿಗಳು ಮಾನವ ವ್ಯಕ್ತಿತ್ವದ ಗಾಢ ಆಯಾಮದ ಒಳಹೊಕ್ಕು ಅನ್ವೇಷಿಸಿದರು. ಈ ಪ್ರಕ್ರಿಯೆಯಲ್ಲಿ ಅವರು ಕಂಡುಕೊಂಡ ಸತ್ಯವನ್ನು ಛಾಂದೋಗ್ಯ ಉಪನಿಷತ್ತು ಹೀಗೆ ಘೋಷಿಸುತ್ತದೆ: **ತತ್ತ್ವಮಸಿ** (ಅದೇ ನೀನಾಗಿದ್ದೀಯೆ).

ಕಠೋಪನಿಷತ್ತಿಗೆ ತಾವು ಬರೆದ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು (೩: ೧೦-೧೧) ಒಂದು ಗಹನ ತತ್ತ್ವವನ್ನು ಪ್ರತಿಪಾದಿಸುತ್ತಾರೆ. ಪ್ರತಿಯೊಬ್ಬ ಮಾನವ ಜೀವಿಯಲ್ಲಿಯೂ ಶಕ್ತಿ ತುಂಬುವಂಥ ಅಂಶವದು. ಬಾಹ್ಯ ಆಯಾಮದಿಂದ ಆಂತರಿಕ ಆಯಾಮದವರೆಗೆ, ಸೂಕ್ಷ್ಮತ್ವ, ವ್ಯಾಪಕತ್ವ ಮತ್ತು ಅಂತರ್ಗತತ್ವಗಳ ಆಧಾರದ ಮೇಲೆ ನೀಚೋನ್ನತ ಕ್ರಮದಲ್ಲಿ ಈ ತತ್ತ್ವವು ಸುವ್ಯವಸ್ಥಿತವಾಗಿದೆ. ಅದನ್ನೇ ಶಂಕರಾಚಾರ್ಯರು **'ಸೂಕ್ಷ್ಮ ಮಹಂತಾಶ್ಚ, ಪ್ರತ್ಯಗಾತ್ಮ ಭೂತಶ್ಚ'** ಎನ್ನುತ್ತಾರೆ.

ಪ್ರತಿಯೊಬ್ಬ ಮಾನವಜೀವಿಯೂ ಮೂಲಭೂತವಾಗಿ ಆತ್ಮನೇ ಆಗಿದ್ದಾನೆ. ಅಂಥ ಆತ್ಮವು ಯಾವತ್ತೂ ಪರಿಶುದ್ಧವೂ, ನಿತ್ಯಮುಕ್ತವೂ, ನಿತ್ಯ ಜ್ಯೋತಿಸ್ವರೂಪವೂ ಹಾಗೂ ಅದ್ವಯ ತತ್ತ್ವವೂ ಆಗಿದೆ. ಚೈತನ್ಯವು ಬಹುವಾಗಲು ಸಾಧ್ಯವೇ ಇಲ್ಲ. ನೀವು ಆಕಾಶವನ್ನು ವಿಭಜಿಸಲಾರಿರಿ. ಆಕಾಶವು ಎಂದೆಂದಿಗೂ ಒಂದೇ ಆಗಿರುತ್ತದೆ. ಅದನ್ನು ನೀವು ವಿಭಜಿಸಲು ಸಾಧ್ಯವೇ ಇಲ್ಲ. ನಾಲ್ಕು ಗೋಡೆಗಳನ್ನು ನಿರ್ಮಾಣ ಮಾಡಿ ಒಂದು ಕೊಠಡಿಯನ್ನು ಕಟ್ಟಿದಾಕ್ಷಣ ನೀವು ಆಕಾಶವನ್ನು ಭಾಗ ಮಾಡಿದ್ದೇವೆ ಎಂದುಕೊಳ್ಳುತ್ತೀರಿ. ಆದರೆ, ಆಕಾಶವು ಎಂದೆಂದಿಗೂ ಸರ್ವವ್ಯಾಪಕ ತತ್ತ್ವವಾಗಿಯೇ ಇರುತ್ತದೆ. ಅದು ಅಂತರಂಗ, ಬಹಿರಂಗ, ಮಧ್ಯಭಾಗ ಮತ್ತು ಎಲ್ಲೆಡೆಯಲ್ಲಿಯೂ ವ್ಯಾಪಿಸಿಕೊಂಡಿದೆ. ಹಾಗೆಯೇ ಪರಿಶುದ್ಧ ಚೈತನ್ಯ, ಚಿತ್ಸ್ವರೂಪ ಅಥವಾ ಚಿತ್‌ಶಕ್ತಿಯೂ ಕೂಡ ಎಲ್ಲೆಲ್ಲೂ ಹಬ್ಬಿಕೊಂಡಿದೆ. ಇದು ಏಕಮೇವ ಅದ್ವಿತೀಯ ತತ್ತ್ವ. ಇದನ್ನೇ ಋಷಿಗಳು **ಬ್ರಹ್ಮನ್** ಅಥವಾ **ಆತ್ಮನ್** ಎಂದು ಕರೆದರು. ಇದರಿಂದಲೇ ಇಡೀ ಅಖಂಡ ವಿಶ್ವವು ಹೊರಹೊಮ್ಮಿದೆ. ಇದರಲ್ಲಿಯೇ ಆ ವಿಶ್ವವು ನೆಲೆಸಿರುತ್ತದೆ. ಮತ್ತು ಅದರೊಳಗೇ ಮತ್ತೆ ಇಡೀ ವಿಶ್ವವು ವಿಲೀನವಾಗುತ್ತದೆ. ನಿಮ್ಮಲ್ಲಿ, ನನ್ನಲ್ಲಿ ಮತ್ತು ಎಲ್ಲರಲ್ಲಿ ಅಂತರ್ಗತವಾಗಿರುವ ಅನಂತ ಬ್ರಹ್ಮನ್ ಅಥವಾ ಆತ್ಮತತ್ತ್ವವೇ ಅದು. ಆ ದಿವ್ಯಶಕ್ತಿಯ ಅಲ್ಪಾಂಶವಾದರೂ ನಿಮ್ಮ ಜೀವನದಲ್ಲಿ ಪ್ರಕಟಗೊಂಡರೆ, ನೀವು ಅತ್ಯುನ್ನತ ಮಟ್ಟದ ಚಾರಿತ್ರ್ಯವನ್ನು ಸಿದ್ಧಿಸಿಕೊಳ್ಳುತ್ತೀರಿ. ಬಳಿಕ ಇನ್ನೇನೂ ಬೇಕಾಗಿಲ್ಲ. ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಮಾನವನು ಸಾರ್ಥಕತೆಯನ್ನು ಸಾಧಿಸುವುದಕ್ಕೆ ಆಧ್ಯಾತ್ಮಿಕ ಶಕ್ತಿ ಸಂಪನ್ಮೂಲದ ಅತ್ಯಂತ ಸಣ್ಣ ಅಂಶವೇ ಸಾಕು. ಈ ಆಧ್ಯಾತ್ಮಿಕ ಶಕ್ತಿಯ ಅಭಾವವನ್ನು ನಾವಿಂದು ಭಾರತದಲ್ಲಿ ಕಾಣುತ್ತಿದ್ದೇವೆ.

ಎಲ್ಲ ಮೌಲ್ಯಗಳೂ ಈ ಆಧ್ಯಾತ್ಮಿಕ ಆಯಾಮದಿಂದಲೇ ಮೂಡಿ ಬರುವಂಥವು. ಪ್ರತಿಯೊಬ್ಬ ಮಾನವಜೀವಿ ಕೂಡ ಅದನ್ನು ಅಭಿವ್ಯಕ್ತಿಗೊಳಿಸುವ ಜೈವಿಕ ಸಾಮರ್ಥ್ಯವನ್ನು ಹೊಂದಿದ್ದಾನೆ. ಇದನ್ನೇ ನಾವು ಆಧ್ಯಾತ್ಮಿಕ ವಿಜ್ಞಾನ ಎನ್ನುವುದು.

ನಮ್ಮ ದೈನಂದಿನ ಜೀವನದಲ್ಲಿ ಆಧ್ಯಾತ್ಮಿಕತೆ

ಒಬ್ಬ ವ್ಯಕ್ತಿ ನಿಮಗೆ ಒಂದು ಸಾವಿರ ರೂಪಾಯಿ ಲಂಚವನ್ನು ನೀಡಲು ಮುಂದಾಗುತ್ತಾನೆ ಎಂದಿಟ್ಟುಕೊಳ್ಳಿ. ನೀವು ವ್ಯಕ್ತಿತ್ವದ ಕೇವಲ ಆನುವಂಶಿಕ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟದ್ದೇ ಆದರೆ, ಆ ಲಂಚವನ್ನು ತೆಗೆದುಕೊಳ್ಳುತ್ತೀರಿ. ನಿಮ್ಮ ವ್ಯಕ್ತಿತ್ವದ ಬೌದ್ಧಿಕ ಆಯಾಮದಲ್ಲಿ ಮಾತ್ರವೇ ನೀವು ನಂಬಿಕೆಯಿಟ್ಟಿದ್ದಾದರೆ, ಆಗಲೂ ನೀವು ಲಂಚಕ್ಕೆ ಮಾರುಹೋಗುತ್ತೀರಿ. ಈ ಆಮಿಷಕ್ಕೆ ಅಂಕುಶ ಹಾಕುವ ಶಕ್ತಿ ವ್ಯಕ್ತಿತ್ವದ ಮೇಲಿನ ಎರಡು ಆಯಾಮಗಳಿಗೆ ಇಲ್ಲ. ಅದೇ ರೀತಿ, ಅನೈತಿಕ ಹಾಗೂ ಅನ್ಯಾಯದಿಂದ ಕೂಡಿದ ಬೇರೆ ಯಾವುದೇ ಆಮಿಷಗಳನ್ನು ಎದುರಿಸಿ ನಿಲ್ಲುವ ಸಾಮರ್ಥ್ಯವೂ ಅವುಗಳಿಗಿಲ್ಲ. ಆದರೆ ನೀವು ಸ್ವಲ್ಪವಾದರೂ ಆಧ್ಯಾತ್ಮಿಕ ಪ್ರಗತಿಯನ್ನು ಹೊಂದಿದ್ದೇ ಆದರೆ, "ನನಗಿದು ಬೇಕಾಗಿಲ್ಲ. ಇಲ್ಲಿ ನಾನಿರುವುದು ಜನರ ಸೇವೆಯನ್ನು ಮಾಡಲು" ಎಂದು ನಿರ್ದಾಕ್ಷಿಣ್ಯವಾಗಿ ಹೇಳುವ ಶಕ್ತಿಯನ್ನು ಸಂಪಾದಿಸಿಕೊಳ್ಳುತ್ತೀರಿ. ಅಂಥ ಆಧ್ಯಾತ್ಮಿಕ ಶಕ್ತಿಯು ಇಂದು ನಮ್ಮಲ್ಲಿ ಬಹುತೇಕರಲ್ಲಿ ಕಣ್ಮರೆಯಾಗಿಬಿಟ್ಟಿದೆ. ನಾವಿದನ್ನು ಮತ್ತೆ ಪುನುರುಜ್ಜೀವನಗೊಳಿಸಿಕೊಳ್ಳಬೇಕಾಗಿದೆ. ಇದೇ ನಮ್ಮ ಜೀವನದ ಮೇಲೆ ಆಧ್ಯಾತ್ಮಿಕತೆಯು ಮಾಡುವ ಪ್ರಭಾವ. ಅಂತರಂಗದಲ್ಲಿ ಅಡಗಿರುವ ಈ ದಿವ್ಯತೆಯನ್ನು ಪ್ರಕಟಗೊಳಿಸಿಕೊಳ್ಳುವುದು ಪ್ರತಿಯೊಬ್ಬ ಮಾನವಜೀವಿಯ ಜನ್ಮಸಿದ್ಧ ಹಕ್ಕು. ಹಾಗೆಂದೇ ಸ್ವಾಮಿ ವಿವೇಕಾನಂದರು, 'ಧರ್ಮವು ಮಾನವನಲ್ಲಿ ಈಗಾಗಲೇ ಅಂತರ್ಗತವಾಗಿರುವ ದಿವ್ಯತೆಯ ಅಭಿವ್ಯಕ್ತಿ' ಎಂದು ಘೋಷಿಸುತ್ತಾರೆ. ಅವರ ಪ್ರಕಾರ ಧರ್ಮವೆಂದರೆ ಬರಿಯ ಆಚರಣೆಗಳಾಗಲಿ, ಪೂಜಾ ಪದ್ಧತಿಗಳಾಗಲಿ ಅಲ್ಲ; ಹಾಗೆಯೇ ಮಂತ್ರಜಾಲವಾಗಲಿ ಮೂಢನಂಬಿಕೆಯಾಗಲಿ ಅಲ್ಲ. ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ದಿವ್ಯತೆಯೆಂಬ ಅಗ್ನಿಯ ಕಿಡಿ ಅಂತರ್ಗತವಾಗಿಯೇ ಇದೆ. ಮಾನವ ವ್ಯಕ್ತಿತ್ವಕ್ಕೆ ತನ್ನದೇ ಆದ ಗಾಢ ಆಯಾಮವಿದೆ. ಈಗತಾನೇ ಹುಟ್ಟಿದ ಮಗುವಿನ ಕಣ್ಣುಗಳನ್ನು ನೋಡಿ. ಆ ಕಣ್ಣುಗಳಲ್ಲಿ ಮಾನವ ವ್ಯಕ್ತಿತ್ವದ ಅಗಾಧತೆಯನ್ನು ಕಾಣುತ್ತೀರಿ. ಆ ಅಗಾಧತೆಯ ಆಯಾಮವೆಂಬುದು ಎಂಥದು ಎನ್ನುವುದನ್ನು ನೀವು ಕಂಡುಕೊಳ್ಳಲು ಪಯತ್ನಿಸಬೇಕು. ಅದೇ ಒಂದು ಮಗುವಿನ ಬೊಂಬೆಯ ಕಣ್ಣುಗಳನ್ನು ನೋಡಿ. ಅದರಲ್ಲಿ ಅಂಥ ಗಾಢತೆ ಕಂಡುಬರುವುದೇ ಇಲ್ಲ. ಅಲ್ಲಿ ನಾವು ಕಾಣುವುದು ಮಾನವ ವ್ಯಕ್ತಿತ್ವದ ಮೇಲ್ಪದರದ ಆಯಾಮ ಮಾತ್ರ. ಒಂದು ಜೀವಂತ ಶಿಶುವಿನ ಕಣ್ಣುಗಳಲ್ಲಿ ಅಗಾಧ ಗಾಢತೆಯ ಆಯಾಮವನ್ನು ಕಾಣುತ್ತೇವೆ. ಪ್ರಾಚೀನ ಭಾರತದ ಋಷಿಮುನಿಗಳ ಮಹಾನ್ ಸಾಧನೆಯೆಂದರೆ, ಅವರು ಮಾನವ ಸ್ವಭಾವದ ಆ ಗಾಢ ಆಯಾಮದ ಒಳಹೊಕ್ಕು, ಎಲ್ಲರ ಹೃದಯಗಳಲ್ಲಿಯೂ ಅಂತರ್ಗತವಾಗಿರುವ ದಿವ್ಯತೆಯನ್ನು ಸಾಕ್ಷಾತ್ಕಾರಪಡಿಸಿಕೊಂಡರು. ಹಾಗೆಂದೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳುತ್ತಾನೆ: "ಎಲ್ಲ ಜೀವಿಗಳ ಹೃದಯಲ್ಲಿ ನೆಲೆಸಿರುವ ಆತ್ಮತತ್ತ್ವವು ನಾನೇ ಆಗಿದ್ದೇನೆ." **(ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ।)**

"ನಾನು ಎಲ್ಲ ಜೀವಿಗಳ ಹೃದಯದಲ್ಲಿಯೂ ಇದ್ದೇನೆ" ಎಂದು ಶ್ರೀಕೃಷ್ಣನು ಹೇಳುತ್ತಿದ್ದಾನೆ. ಹೀಗಾಗಿ ನೀವು ಮತ್ತು ನಾನು ಒಂದೇ ಆಗಿದ್ದೇವೆ. ನಾವು ಯಾರೂ ಪ್ರತ್ಯೇಕ ಜೀವಿಗಳಲ್ಲ. ಈ ದೇಹವು ನಮ್ಮ ನಡುವೆ ಭಿನ್ನತೆಯ ಭಾವನೆಯನ್ನು ಉಂಟುಮಾಡುತ್ತದೆ. ವಂಶವಾಹಿಗಳ ವ್ಯವಸ್ಥೆಯು ನಿಮ್ಮನ್ನು ಪ್ರತ್ಯೇಕರೆಂದು ಭಾವಿಸುವಂತೆ ಮಾಡುತ್ತದೆ. ಈ ಭಿನ್ನತೆಯ ಅಥವಾ ಪ್ರತ್ಯೇಕತೆಯ ಭಾವನೆಯೇ ಸ್ವಾರ್ಥ, ಸ್ವ-ಕೇಂದ್ರಿತ ವ್ಯಕ್ತಿತ್ವ ಮತ್ತು ಶೋಷಣೆಗಳಿಗೆ ಎಡೆಮಾಡಿಕೊಡುತ್ತದೆ. ಇದಕ್ಕೆ ಬದಲಾಗಿ ಆಧ್ಯಾತ್ಮಿಕ ಐಕ್ಯಭಾವನೆಯು ಪ್ರೀತಿ, ಅನುಕಂಪ, ಸೇವೆ ಮುಂತಾದ ಮೌಲ್ಯಗಳ ಮೂಲಸ್ರೋತವಾಗಿದೆ. ಹಾಗೆಯೇ ಚಾರಿತ್ರ್ಯವೂ ಇದರಿಂದಲೇ ಹೊರಹೊಮ್ಮುತ್ತದೆ. ಈ ನಮ್ಮ ಆಧ್ಯಾತ್ಮಿಕ ಐಕ್ಯತೆಯನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಉನ್ನತ ಚಾರಿತ್ರ್ಯವನ್ನು ಬೆಳೆಸಿಕೊಳ್ಳುವುದಕ್ಕೆ ಏಕಮೇವ ರಾಜಮಾರ್ಗವಾಗಿದೆ. *(ಮುಂದುವರಿಯುವುದು)* ✱

ಗುರು – ಭಗವಂತ

ಗುರುವು ಭಗವಂತನೇ ಆಗಿದ್ದಾನೆ. ಮಾನವನು ಮುಕ್ತಿಯನ್ನು ಹೊಂದಲು ಅತ್ಯಂತ ಅಗತ್ಯವಾದ ಮೂರ್ತರೂಪವನ್ನು ತಳೆದು, ಎಲ್ಲರಿಗೂ ಗೋಚರವಾಗುವಂತೆ ಅವನು ಆವಿರ್ಭವಿಸುತ್ತಾನೆ. ಏಕೆಂದರೆ, ಭಗವಂತನೊಬ್ಬನೇ ಮಾನವನನ್ನು ಭಗವಂತನೆಡೆಗೆ ಕರೆದೊಯ್ಯಬಲ್ಲ.

ಗುರುವು ಸೃಷ್ಟಿ, ಸ್ಥಿತಿ, ವಿನಾಶಗಳನ್ನು ಮಾಡುವವನಷ್ಟೇ ಅಲ್ಲ; ಅವನು ದೇಶ, ಕಾಲ, ಕಾರ್ಯಕಾರಣಗಳನ್ನು ಮೀರಿದ ಪರಬ್ರಹ್ಮನೇ ಆಗಿದ್ದಾನೆ ಎಂದು ಶಾಸ್ತ್ರಗಳು ಹೇಳುತ್ತವೆ. ಗುರುವಿಗೆ ವಿಧೇಯನಾಗಿದ್ದುಕೊಂಡು ಅವನನ್ನು ಆರಾಧಿಸುವುದೆಂದರೆ, ನಾವು ಭಗವಂತನಿಗೆ ವಿಧೇಯನಾಗಿದ್ದಂತೆ; ಅವನನ್ನೇ ಪೂಜಿಸಿದಂತೆ.

ಗುರು ಭಗವಂತನಿಗಿಂತ ಬೇರೆಯಾಗಿರುವ, ಮಧ್ಯವರ್ತಿಯಾಗಿರುವ ವ್ಯಕ್ತಿಯಲ್ಲ; ಅವನು ಸಾಕ್ಷಾತ್ ಭಗವಂತನೇ ಆಗಿದ್ದಾನೆ. ಮಾನವನ ಸಾಕ್ಷಾತ್ಕಾರಕ್ಕಾಗಿ ಮಾನವದೇಹವನ್ನು ತಳೆದ ಕರುಣಾಮಯ ಮೂರ್ತಿಯಾದ ಭಗವಂತನೇ ಅವನು.

–ಸ್ವಾಮಿ ರಾಮಕೃಷ್ಣಾನಂದ

ಹಿಂದೂ ಸಂನ್ಯಾಸ ಸಂಪ್ರದಾಯ ಮತ್ತು ಧರ್ಮಾಚರಣೆಗಳಿಗೆ

ಸ್ವಾಮಿ ರಾಮಕೃಷ್ಣಾನಂದರ ಅನುಪಮ ಕೊಡುಗೆ

ಸ್ವಾಮಿ ಹರ್ಷಾನಂದ

ಶ್ರೀರಾಮಕೃಷ್ಣರ ಧ್ಯೇಯ–ಆದರ್ಶಗಳನ್ನು ತಮ್ಮ ಜ್ವಲಂತ ಜೀವನದ ಮೂಲಕ ಜನತೆಯ ಮುಂದಿಟ್ಟ, ಅವರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ರಾಮಕೃಷ್ಣಾನಂದರು ದಕ್ಷಿಣ ಭಾರತದಲ್ಲಿ ರಾಮಕೃಷ್ಣ–ವಿವೇಕಾನಂದ ಭಾವಧಾರೆಯನ್ನು ಹರಡಿದವರಲ್ಲಿ ಪ್ರಮುಖರು. ಜುಲೈ ತಿಂಗಳ ೨೪ರಂದು ಅವರ ಜಯಂತಿಯನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಜೀವನ ಮತ್ತು ಸಾಧನೆಗಳನ್ನು ಕುರಿತು ಸಮಗ್ರ ದೃಷ್ಟಿಯ ನಿರೂಪಣೆಯನ್ನು ಮಾಡಿರುವ ಲೇಖಕರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಸಂಸ್ಕೃತ, ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಅಪಾರ ವಿದ್ವತ್ತನ್ನು ಹೊಂದಿರುವ ಸ್ವಾಮೀಜಿಯವರು ಹಲವು ಗ್ರಂಥಗಳನ್ನು ರಚಿಸಿದ್ದು, ಅವು ಅತ್ಯಂತ ಪ್ರಸಿದ್ಧವಾಗಿವೆ.

ಸ್ವಾಮಿ ವಿವೇಕಾನಂದರು ತಾವು ಸಂನ್ಯಾಸ ಸ್ವೀಕರಿಸುವ ಸಮಯದಲ್ಲಿ "ರಾಮಕೃಷ್ಣಾನಂದ" ಎಂಬ ಹೆಸರನ್ನು ತಾವೇ ಇಟ್ಟುಕೊಳ್ಳುವ ಬಯಕೆಯನ್ನು ಹೊಂದಿದ್ದರೂ, ಅದು ಶಶಿಭೂಷಣರಿಗೇ ಹೆಚ್ಚು ಸೂಕ್ತವಾಗಿ ಹೊಂದಿಕೊಳ್ಳುವುದೆಂಬುದನ್ನು ಅರಿತು, ಆ ಹೆಸರನ್ನು ಶಶಿಭೂಷಣರಿಗೆ ಕೊಟ್ಟುಬಿಟ್ಟರು ಎಂಬ ಹೇಳಿಕೆ ಇದೆ. ಶ್ರೀರಾಮಕೃಷ್ಣರ ಅಂತ್ಯ ಕಾಲದಲ್ಲಿ, ಅವರಿಗೆ ಬಹು ಶ್ರದ್ಧೆಯಿಂದ ಸೇವೆ ಸಲ್ಲಿಸಿದ ಶಶಿಭೂಷಣರು ಆ ಹೆಸರಿಗೆ ತಕ್ಕ ಅರ್ಹತೆಯನ್ನು ಪಡೆದಿದ್ದರು. ಶ್ರೀರಾಮಕೃಷ್ಣರು ಜೀವಂತವಾಗಿದ್ದಾಗ ಮಾಡಿದ ಸೇವೆ, ಮತ್ತು ಅವರು ಮಹಾಸಮಾಧಿಯನ್ನು ಹೊಂದಿದ ಮೇಲೆ ಅವರ ಅವಶೇಷಗಳಿಗೆ ಶಶಿಯು ಸಲ್ಲಿಸಿದ ಪೂಜೆಗಳು, ಕನಿಷ್ಠವಾಗಿ ಹೇಳಬೇಕೆಂದರೂ, ಬಲು ಆದರ್ಶಪ್ರಾಯವಾಗಿದ್ದವು.

ಈ ಲೇಖನವನ್ನು ಶಶಿಭೂಷಣರ ಜೀವನದ ಸಂಕ್ಷಿಪ್ತ ವಿವರಗಳೊಂದಿಗೆ ಆರಂಭಿಸೋಣ. ಏಕೆಂದರೆ ಅವರ ಸಾಧನೆಗಳನ್ನು ಕುರಿತು ಅಧ್ಯಯನ ನಡೆಸಲು ಯೋಗ್ಯ ಹಿನ್ನೆಲೆಯನ್ನು ಅವು ಒದಗಿಸುತ್ತವೆ.

ಸ್ವಾಮಿ ವಿವೇಕಾನಂದರು ಜನ್ಮ ತಾಳಿದ ವರ್ಷವೇ ಶಶಿಭೂಷಣರು ೧೮೬೩ರ ಜುಲೈ ೧೩ರಂದು ಬಂಗಾಳದ ಹೂಗ್ಲಿ ಜಿಲ್ಲೆಯ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಅವರಿಗೆ ಜೀವನದ ಪ್ರಾರಂಭ ಹಂತದಲ್ಲಿ ಒಳ್ಳೆಯ ಶಿಕ್ಷಣ ಮತ್ತು ಉತ್ತಮ ತರಬೇತಿ ದೊರೆತು, ಅವು ಅವರ ಉತ್ತಮಮಟ್ಟದ ಶೀಲಕ್ಕೆ ಅಸ್ತಿಭಾರವನ್ನು ಹಾಕಿದವು. ತನ್ನ ಸಮೀಪ ಬಂಧುವಾದ ಶರತ್ (ಸ್ವಾಮಿ ಶಾರದಾನಂದ)ನೊಂದಿಗೆ ಶಶಿಭೂಷಣರು ಶ್ರೀರಾಮಕೃಷ್ಣರನ್ನು ಮೊದಲ ಸಲ ಭೇಟಿಯಾದ ಮೇಲೆ, ಅವರೊಂದಿಗೆ ಅತಿ ನಿಕಟವಾದ ಸಂಬಂಧವನ್ನು ಹೊಂದಿ, ಶ್ರೀರಾಮಕೃಷ್ಣರನ್ನು ತಮ್ಮ ಜೀವನದ, ಮಾರ್ಗದರ್ಶನದ ಧ್ರುವತಾರೆಯಾಗಿ ಸ್ವೀಕರಿಸಿದರು.

ಶಶಿಭೂಷಣರು ತಮ್ಮ ಗುರುಗಳಾದ ಶ್ರೀರಾಮಕೃಷ್ಣರ ಅನಾರೋಗ್ಯದ ದಿನಗಳಲ್ಲಿ, ಹಗಲುರಾತ್ರಿಗಳನ್ನು ಲೆಕ್ಕಿಸದೆ ಅವರ ಸೇವೆಗೈದರು. ಶ್ರೀರಾಮಕೃಷ್ಣರ ಮಹಾಸಮಾಧಿಯಾದ ಮೇಲೆ, ಅವರ ಅಸ್ಥಿಭಸ್ಮಗಳನ್ನು ಸಂಗ್ರಹಿಸಿ, ಅದನ್ನು ರಾಮಕೃಷ್ಣ ಮಹಾಸಂಘದ ಪ್ರಪ್ರಥಮ ಮಠವಾದ ಬಾರಾನಗರದಲ್ಲಿ ಸ್ಥಾಪಿಸಿದ ಮೇಲೆ, ಶಶಿಭೂಷಣರು ಆ ಅಸ್ಥಿಕಲಶದ ಅರ್ಚನೆಯ ಭಾರವನ್ನು ವಹಿಸಿಕೊಂಡರು. ತೀವ್ರ ವೈರಾಗ್ಯದ ಕಿಚ್ಚನ್ನು ಹೊಂದಿದ್ದ ತಮ್ಮ ಸಂನ್ಯಾಸಿ ಸೋದರರ ಯೋಗಕ್ಷೇಮವನ್ನು ನೋಡಿಕೊಳ್ಳುವ ಹೊಣೆಯನ್ನೂ ಅವರು ಹೊತ್ತುಕೊಂಡರು. ಶಶಿಭೂಷಣರ ಸೋದರ ಸಂನ್ಯಾಸಿಗಳ ಪ್ರೀತಿವಾತ್ಸಲ್ಯಪೂರಿತ ಪಾಲನೆಗಿಂತ ಅಧಿಕವಾಗಿ ಯಾವ ಒಬ್ಬ ತಾಯಿಯೂ ತನ್ನ ಮಕ್ಕಳ ಲಾಲನೆಪಾಲನೆಯನ್ನು ಮಾಡಲಾಗುತ್ತಿರಲಿಲ್ಲ ಎನ್ನಬಹುದು.

ಶಶಿಭೂಷಣರು– ಈಗ ಸ್ವಾಮಿ ರಾಮಕೃಷ್ಣಾನಂದರು– ಸ್ವಾಮಿ ವಿವೇಕಾನಂದರ ಆದೇಶದ ಮೇಲೆ ಒಂದು ಆಶ್ರಮವನ್ನು ಸ್ಥಾಪಿಸಲು ಮದರಾಸಿಗೆ(ಈಗಿನ ಚೆನ್ನೈ) ಬಂದರು. ತಮ್ಮ ಸರಳ ಜೀವನ, ಶ್ರದ್ಧಾಪೂರ್ವಕ ಸೇವೆ, ಮತ್ತು ಅಪಾರ ವಿದ್ವತ್ತಿನೊಂದಿಗೆ ಅವರು ಆಶ್ರಮವನ್ನು ಒಂದು ಗಟ್ಟಿಯಾದ ತಳಹದಿಯ ಮೇಲೆ ನಿಲ್ಲಿಸಿದರು. ಇದಕ್ಕಾಗಿ ಅವರು ಅನೇಕ ಅಗ್ನಿಪರೀಕ್ಷೆಗಳನ್ನು ಎದುರಿಸಬೇಕಾಯಿತು. ತದನಂತರ ಅವರು, ರಾಜರ ಆಳ್ವಿಕೆಯಲ್ಲಿದ್ದ ಮೈಸೂರು ಸಂಸ್ಥಾನದ ಜನರಲ್ಲಿ ಶ್ರೀರಾಮಕೃಷ್ಣರ



ಬೋಧನೆಗಳ ಮೇಲೆ ಆಸಕ್ತಿ ಮೂಡಿಸಿ, ಅಂತಿಮವಾಗಿ ಬೆಂಗಳೂರಿನಲ್ಲಿ ಸಹ ಒಂದು ಮಠವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು.

ಮದರಾಸಿನ ಮಠವನ್ನು ಸದೃಢವಾಗಿ ನಿಲ್ಲಿಸಲು ಅವರು ಪಟ್ಟ ಕಠಿಣಶ್ರಮ, ಅವರ ದೇಹವನ್ನು ಶಿಥಿಲಗೊಳಿಸಿತು. ರಾಮಕೃಷ್ಣಾನಂದರು ೧೯೧೧ರ ಸೆಪ್ಟೆಂಬರ್ ೨೧ಂದು ತಮ್ಮ ಶರೀರವನ್ನು ಕಲ್ಕತ್ತೆಯಲ್ಲಿ ತ್ಯಜಿಸಿದರು.

ಅವರು ಉನ್ನತಮಟ್ಟದ, ಅಪಾರವಾದ ವಿದ್ವತ್ತನ್ನು ಹೊಂದಿದ್ದರು; ಹಾಗೂ ಭಗವಂತನಲ್ಲಿ ಅತ್ಯಂತ ಆಳವಾದ ಭಕ್ತಿಯನ್ನು ಹೊಂದಿದ್ದರು. ಹೊರಗೆ ಅತ್ಯಂತ ಕಠಿಣ ಶಿಸ್ತನ್ನು ಅಳವಡಿಸಿಕೊಂಡಿದ್ದ ಅವರು, ಒಳಗೆ ಸುಕೋಮಲವಾದ ಮಾತೃ ಹೃದಯವನ್ನು ಹೊಂದಿದ್ದರು.

ಅದು ಏನೇ ಇದ್ದರೂ ಹಿಂದೂ-ಸಂನ್ಯಾಸಾಶ್ರಮದ ಹಿಂದಿರುವ ನೈಜ ಅರ್ಥ ಹಾಗೂ ಶಾಸ್ತ್ರಾಚರಣೆಗಳಿಗೆ, ರಾಮಕೃಷ್ಣಾನಂದರ ಅಪಾರ ಕೊಡುಗೆ ಏನೆಂಬುದನ್ನು ತೆರೆದು ತೋರಿಸಲು ಅವರ ಜೀವನವನ್ನು ಆಳವಾಗಿ ಅಭ್ಯಾಸ ಮಾಡುವುದು ಅವಶ್ಯವಾಗಿದೆ.

ಒಂದು ಸಂನ್ಯಾಸ ಮಠದ ಮಹತ್ವವು, ಆ ಮಠದಲ್ಲಿರುವ ಅಧಿಕ ಸಂನ್ಯಾಸಿಗಳ ಸಂಖ್ಯೆಯ ಮೇಲೆ, ಬೃಹತ್ ಕಟ್ಟಡಗಳ ಮೇಲೆ, ಬಹುವಿಧವಾದ ಕಾರ್ಯ ಚಟುವಟಿಕೆಗಳ ಮೇಲೆ, ದಿಗ್ಭ್ರಮೆಗೊಳಿಸುವ ಆಡಳಿತಯಂತ್ರದ ಮೇಲೆ ಅಥವಾ ಬ್ಯಾಂಕುಗಳಲ್ಲಿ ಶೇಖರಿಸಿರುವ ಅಪಾರ ಹಣದ ಮೇಲೆ ಅವಲಂಬಿತವಾಗಿಲ್ಲ! ಬದಲಾಗಿ ಹೇಗೆ ನೂಲಿನ ಗುಣಮಟ್ಟವು ಬಟ್ಟೆಯ ಗುಣಮಟ್ಟವನ್ನು ನಿರ್ಧರಿಸುವುದೋ ಹಾಗೆ ಅದು ಮಠದಲ್ಲಿರುವ ಪ್ರತಿಯೊಬ್ಬ ನಿವಾಸಿಯ ಶೀಲ ಮತ್ತು ನಡವಳಿಕೆಗಳ ಮೇಲೆ ನಿಂತಿರುತ್ತದೆ.

ಹಿಂದೂ ಸಂನ್ಯಾಸ ಸಂಪ್ರದಾಯವು, ಜ್ಞಾನ ಮತ್ತು ತಪಸ್ಸುಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿ, ಸಂನ್ಯಾಸಿಗಳಾಗಲು ಬಯಸಿದವರು ಮೂಲಭೂತವಾಗಿ ಜ್ಞಾನಾರ್ಜನೆಗೆ ಮತ್ತು ತಪಶ್ಚರ್ಯೆಗಳಿಗೆ ಸಿದ್ಧವಿರಬೇಕೆಂದು ಆಗ್ರಹಿಸುತ್ತದೆ.

ಕೇವಲ ಬೌದ್ಧಿಕ ಬೆಳವಣಿಗೆ ಭಾವನೆಗಳ ಮುಖ್ಯಕೇಂದ್ರವಾದ ಹೃದಯವು ಶುಷ್ಕವಾಗಲು ಎಡೆಮಾಡಿಕೊಡುತ್ತದೆ. ಅದಕ್ಕೆ ಬದಲಾಗಿ ಅತಿಯಾದ ದೈಹಿಕ ತಪಶ್ಚರ್ಯೆಗಳು ಆಧ್ಯಾತ್ಮಿಕ ಬೆಳೆವಣಿಗೆಗೆ ಸಾಧನವಾದ ದೇಹ-ಮನಸ್ಸುಗಳ ಸಂಘಾತ ಕುಸಿದುಹೋಗಲು ಕಾರಣವಾಗಬಹುದು. ಆದ್ದರಿಂದ ಈ ಎರಡರ ಸಂಯುಕ್ತ ಸಮತೋಲನೆ ಮತ್ತು ಬೆಳವಣಿಗೆ ಅಪೇಕ್ಷಣೀಯ.

ಯಥಾರ್ಥವಾಗಿ ನೋಡಿದರೆ, ಹಿಂದೂ ಸಂನ್ಯಾಸ ಸಂಪ್ರದಾಯದಲ್ಲಿ ಜ್ಞಾನವೆಂದರೆ ಶಾಸ್ತ್ರಗಳಾದ ಉಪನಿಷತ್‌ಗಳು ಮತ್ತು ಭಗವದ್ಗೀತೆಯು ತಿಳಿಸಿಕೊಡುವ ಅರಿವಿನ ಗ್ರಹಿಕೆ. ತಪಸ್ಸೆಂದರೆ ದೇಹವನ್ನು ಆಧ್ಯಾತ್ಮಿಕ ಜೀವನದ ಒತ್ತಡ ಮತ್ತು ಶ್ರಮಗಳಿಗೆ ಒಗ್ಗುವಂತೆ ಸಿದ್ಧಗೊಳಿಸುವುದು ಮತ್ತು ಇಂದ್ರಿಯಗಳನ್ನು ನಿಗ್ರಹಿಸಿ ಅವುಗಳ ಶಕ್ತಿಯನ್ನು ಜೀವನದ ಗುರಿಯತ್ತ ಕೇಂದ್ರೀಕರಿಸುವುದು.

ಜ್ಞಾನಕ್ಕೆ ಎರಡು ಆಯಾಮಗಳಿವೆ: ಒಂದು ಬೌದ್ಧಿಕ, ಮತ್ತೊಂದು ಆಧ್ಯಾತ್ಮಿಕ. ಬೌದ್ಧಿಕ ಪಾಂಡಿತ್ಯವನ್ನು ಉಪನಿಷತ್ತೇ ಮೊದಲಾದ ಶಾಸ್ತ್ರದ ಆಳವಾದ ಅಧ್ಯಯನದಿಂದ ಪಡೆಯಬಹುದು. ಆದರೆ ಇದಕ್ಕೆ ವ್ಯಾಕರಣ ಜ್ಞಾನದ, ಶಬ್ದನಿಷ್ಪತ್ತಿಯ ಮತ್ತು ಬಳಕೆಯ ಜ್ಞಾನದ ಹಿನ್ನೆಲೆ ಇರಬೇಕಾಗುತ್ತದೆ. ಜೊತೆಗೆ ಪ್ರಾಚೀನ ವಿದ್ವಾಂಸರುಗಳಿಂದ ಶಾಸ್ತ್ರಗಳ ಮೇಲೆ ರಚಿತವಾದ ಪ್ರಮಾಣಯುಕ್ತ ಭಾಷ್ಯಗಳ ಅಧ್ಯಯನವೂ ಆವಶ್ಯಕ. ಆದರೆ ಇದು ಹೊರಕವಚ ಮಾತ್ರ.

ಬೋಧನೆಯ ಅಂತರಾರ್ಥವನ್ನು, ಶ್ರದ್ಧಾಪೂರಿತ ಸಾಧನೆಯಿಂದ ಹೊಮ್ಮುವ ಅಂತರ್ದೃಷ್ಟಿಯಲ್ಲಿ ಗ್ರಹಿಸಿ ಅನುಭವಕ್ಕೆ ತಂದುಕೊಳ್ಳಬಹುದು. ಹೀಗೆ ಆದರೆ ಮಾತ್ರ ಜ್ಞಾನದ ಗಳಿಕೆ ಪೂರ್ಣವಾಗುವುದು.

ತಪಸ್ಸಿಗೆ ಭಗವದ್ಗೀತೆಯು (ಅ.೧೭.೧೪-೧೬) ಮಾನವನ ವ್ಯಕ್ತಿತ್ವದ ಮೂರು ಭಾಗಗಳನ್ನೊಳಗೊಂಡಿರುವಂತೆ- ಅಂದರೆ ಶಾರೀರಕ, ವಾಕ್ ಮತ್ತು ಮನಸ್ಸಿನ ರೂಪಗಳು- ಸುಂದರ ವಿವರಣೆಯನ್ನು ನೀಡುತ್ತದೆ.

ಆಧ್ಯಾತ್ಮಿಕ ಪಿಪಾಸುವಿಗೆ, ಭೋಗ ಅಥವಾ ಕಠಿಣ ದೈಹಿಕ ಸಾಧನೆಗಳು ಗುರಿಯಾಗಿರದೆ, ಕೇವಲ ಭಗವತ್ ಸಾಕ್ಷಾತ್ಕಾರವೇ ಗುರಿಯಾಗಿರುವುದರಿಂದ ಅವನು ಅತಿರೇಕಕ್ಕೆ ಇಳಿಯದೆ ಮಧ್ಯ ಮಾರ್ಗವನ್ನು ಅನುಸರಿಸುವುದು ಒಳಿತು. ಆದ್ದರಿಂದ ದೇಹ-ಮನಸ್ಸುಗಳ ಸಂಘಾತವನ್ನು ಸುಸ್ಥಿತಿಯಲ್ಲಿ ಇಟ್ಟಿರಬೇಕು. ಆದರೆ ಮನಸ್ಸನ್ನು ಶುದ್ಧಸ್ಥಿತಿಯಲ್ಲಿ, ಉನ್ನತ ಆಧ್ಯಾತ್ಮಿಕ ನೆಲೆಯಲ್ಲಿ ಇಡಲು ಗರಿಷ್ಠಮಿತಿಯ ಪ್ರಯತ್ನ ಮಾಡುತ್ತಿರಬೇಕು.

ಈಗ ನಾವು ರಾಮಕೃಷ್ಣಾನಂದರ ಜೀವನಕ್ಕೆ ಹಿಂತಿರುಗಿ, ಮೇಲ್ಕಂಡ ಆದರ್ಶಸೂತ್ರಗಳು ಹೇಗೆ ಫಲಕಾರಿಯಾದವು ಎಂಬುದನ್ನು ನೋಡೋಣ.

೧೮೮೬ ನೇ ಇಸವಿ, ಜನವರಿ ಮಧ್ಯಭಾಗದಲ್ಲಿ ಶ್ರೀರಾಮಕೃಷ್ಣರು ತಮ್ಮ ಹನ್ನೆರಡು ಮಂದಿ ಶಿಷ್ಯರಿಗೆ ಕಾವಿ ವಸ್ತ್ರಗಳನ್ನು ಕೊಟ್ಟಾಗ ಅದನ್ನು ಸ್ವೀಕರಿಸಿದವರಲ್ಲಿ ಶಶಿಯೂ ಒಬ್ಬನು. ಹಾಗೆಯೇ ಈ ಶಿಷ್ಯರುಗಳು ಆಂಟ್‌ಪುರದಲ್ಲಿ (ಬಾಬುರಾಮನ, ಅಂದರೆ ಮುಂದೆ ಸ್ವಾಮಿ ಪ್ರೇಮಾನಂದರ ತಂದೆ ತಾಯಂದಿರ ಸ್ಥಳ) ಒಟ್ಟಿಗೆ ಸೇರಿ ನರೇಂದ್ರನ (ಸ್ವಾಮಿ ವಿವೇಕಾನಂದ) ನೇತೃತ್ವದಲ್ಲಿ ಧುನಿಯನ್ನು ಹತ್ತಿಸಿ, ಎಲ್ಲರೂ ಮಾನಸಿಕವಾಗಿ ಸಂನ್ಯಾಸಿಗಳಾಗಲು ಪ್ರತಿಜ್ಞೆ ಮಾಡಿದಾಗ, ಶಶಿಯೂ ಅಲ್ಲಿದ್ದನು. ಅಂತಿಮವಾಗಿ, ವಿಧಿಪೂರ್ವಕವಾಗಿ ವಿರಜಾಹೋಮವನ್ನು ಮಾಡಿ, ಸಂನ್ಯಾಸಾಶ್ರಮದ ಪ್ರತಿಜ್ಞೆಗಳನ್ನು ತೆಗೆದುಕೊಂಡಾಗ, ಶಶಿಯೂ ಅದರಲ್ಲಿ ಭಾಗವಹಿಸಿ ಸ್ವತಃ ವಿವೇಕಾನಂದರೇ ಕೊಟ್ಟ "ರಾಮಕೃಷ್ಣಾನಂದ" ಎಂಬ ಸಂನ್ಯಾಸಾಶ್ರಮದ ನೂತನ ಹೆಸರನ್ನು ಸ್ವೀಕರಿಸಿದನು.

ಬಾರಾನಗರದ ಮಠದ ಪ್ರಾರಂಭದ ದಿನಗಳಲ್ಲಿ, ರಾಮಕೃಷ್ಣಾನಂದರು ತಪಸ್ಸಿನ ಎರಡು ಮೂಲ ಅಂಶಗಳನ್ನು- ಕಠೋರ ಸಂಯಮ ಮತ್ತು ಬ್ರಹ್ಮಚರ್ಯಗಳನ್ನು ಪಾಲಿಸಿಕೊಂಡು ಬಂದರು. ಶ್ರೀರಾಮಕೃಷ್ಣರ ಅವಶೇಷವನ್ನು ಇಟ್ಟಿದ್ದ ಕರಂಡಕವನ್ನು ಪೂಜಿಸುವುದರ ಜೊತೆಗೆ, ಮಠದ ಇತರ ಎಲ್ಲ ಕೆಲಸಗಳನ್ನು ಏಕಾಂಗಿಯಾಗಿ ಮಾಡಿ, ಉಳಿದ ಸಂನ್ಯಾಸೀ ಸೋದರರು ಯಾವಾಗಲೂ ಧ್ಯಾನ ಅಥವಾ ಶಾಸ್ತ್ರಾಧ್ಯಯನದಲ್ಲಿ ತೊಡಗಿರುವಾಗ ಅವರ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಿದ್ದರು. ಅವರ ಸಂನ್ಯಾಸೀ ಸೋದರರು ಪರಿವ್ರಾಜಕರಾಗಿ, ಕೆಲವೊಮ್ಮೆ ದೀರ್ಘ

ಕಾಲ, ಕೆಲವೊಮ್ಮೆ ಅಲ್ಪಕಾಲ ಸಂಚಾರ ಮಾಡುತ್ತಿದ್ದರೂ, ಸ್ವಾಮಿ ರಾಮಕೃಷ್ಣಾನಂದರು ಮಠದಲ್ಲಿಯೇ ಇದ್ದು, ತಪಶ್ಚರ್ಯೆ ಮತ್ತು ಭಗವತ್ಸೇವೆಯ ಪಥದಲ್ಲಿಯೇ ನಿರತರಾಗಿ ಆಚೀಚೆ ಸರಿಯುತ್ತಿರಲಿಲ್ಲ. ಇದು ಹದಿನೈದು ವರ್ಷದಷ್ಟು ದೀರ್ಘಕಾಲದ ವರೆಗೆ ಮುಂದುವರಿಯಿತು.

ಸಂನ್ಯಾಸಿಯು ಯಾವುದೇ ವ್ಯಕ್ತಿಗಾಗಲಿ, ಸ್ಥಳಕ್ಕಾಗಲಿ ಅಥವಾ ವಸ್ತುವಿಗಾಗಲಿ ಮನೋಬಂಧನಕ್ಕೆ ಒಳಗಾಗದೆ, ಸದಾ ಭಗವಂತನ ಸಾನ್ನಿಧ್ಯವನ್ನು ಬಯಸುತ್ತಿರಬೇಕೆಂಬುದು ನಿಯಮ. ಅದರಂತೆ ಸ್ವಾಮಿ ವಿವೇಕಾನಂದರು ೧೮೯೭ರ ಮಾರ್ಚ್‌ನಲ್ಲಿ ಮದರಾಸಿಗೆ(ಈಗಿನ ಚೆನ್ನೈ) ಹೋಗಿ ಅಲ್ಲಿ ಮಠದ ಕೇಂದ್ರವೊಂದನ್ನು ಪ್ರಾರಂಭಿಸಲು ಸೂಚಿಸಿದಾಗ, ರಾಮಕೃಷ್ಣಾನಂದರು ಒಮ್ಮೆಗೇ ಒಪ್ಪಿಗೆ ಸೂಚಿಸಿ, ಬಾರಾನಗರ ಮಠದ ಸಂಬಂಧವನ್ನು ಸಂಪೂರ್ಣವಾಗಿ ತ್ಯಜಿಸಿ, ಮದರಾಸಿಗೆ ಹೊರಟೇಬಿಟ್ಟರು!

೧೮೯೭ರ ಏಪ್ರಿಲ್‌ನಿಂದ ಸೆಪ್ಟೆಂಬರ್ ೧೯೧೧ರ ವರೆಗಿನ ಅವಧಿಯ ೧೪ ವರ್ಷಗಳ ದೀರ್ಘಕಾಲವು ಅವರನ್ನು ಅಲ್ಲಿಗೆ ಕಳುಹಿಸಿದ ಕಾರ್ಯಕ್ಕಾಗಿ ಅವರು ಮಾಡಿದ ಸಮರ್ಪಣೆ ಮತ್ತು ತ್ಯಾಗದ ಕಥೆಯಾಗಿತ್ತು.

ಅವರು ಮೊದಲು ಐಸ್‌ಹೌಸ್‌ನಲ್ಲಿ (ಆಗ ಕ್ಯಾಸಲ್ ಕರ್ನನ್) ೧೦ ವರ್ಷಗಳ ಕಾಲ, ೧೯೦೭ರ ವರೆಗೆ ಇದ್ದು, ನಂತರ ಕೊಂಚಕಾಲ ಸಣ್ಣ ಮನೆಯಲ್ಲಿದ್ದು, ೧೯೦೭ರಲ್ಲಿ ಮೈಲಾಪುರದ ನೂತನ ಮಠದ ಕಟ್ಟಡಕ್ಕೆ ಸ್ಥಳಾಂತರಿಸಿದರು. ಮಠದಲ್ಲಿ ೧೯೧೧ರ ಸೆಪ್ಟೆಂಬರ್ ವರೆಗೆ ಇದ್ದರು.

ರಾಮಕೃಷ್ಣಾನಂದರು ಮದರಾಸಿಗೆ ಬಂದಮೇಲೆ ಮೊದಲು ಮಾಡಿದ ಕೆಲಸವೆಂದರೆ, ತಾವು ಇಳಿದುಕೊಂಡಿದ್ದ ಮನೆಯಲ್ಲಿ ತಾವು ಜೊತೆಯಲ್ಲಿ ತಂದಿದ್ದ ತಮ್ಮ ಗುರುಗಳಾದ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಸ್ಥಾಪಿಸಿ, ತಾವು ಬಾರಾನಗರದ ಮಠದಲ್ಲಿ ಮಾಡುತ್ತಿದ್ದ ಶಾಸ್ತ್ರೋಕ್ತ ಕರ್ಮಗಳನ್ನು ಪ್ರಾರಂಭಿಸಿದ್ದು.

ಅವರು ಮದರಾಸಿನಲ್ಲಿ ಇದ್ದ ೧೪ ವರ್ಷಗಳಲ್ಲಿ ಹತ್ತು ವರ್ಷಗಳು 'ಐಸ್‌ಹೌಸ್'ನಲ್ಲಿಯೇ ಕಳೆದುಹೋಯಿತು. ಅಲ್ಲಿ ವಾಸಿಸಲು ಸ್ಥಳ ಬಿಟ್ಟರೆ, ಅತ್ಯಂತ ಸರಳ ಜೀವನವನ್ನು ನಡೆಸಲು ಬೇಕಾಗುವ ಯಾವುದೇ ಪೀಠೋಪಕರಣಗಳಾಗಲಿ, ಇನ್ನಿತರ ಸಾಮಾನ್ಯ ಉಪಯೋಗಿ ವಸ್ತುಗಳಾಗಲಿ ಇರಲಿಲ್ಲ. ಅವರು ಮಿತಾಹಾರಿಗಳಾಗಿದ್ದರು. ತಮಗೆ ದೊರೆತ ಆಹಾರವನ್ನು ಶ್ರೀರಾಮಕೃಷ್ಣರಿಗೆ ನಿವೇದಿಸಿಯೇ ಸೇವಿಸುತ್ತಿದ್ದರು. ಇನ್ನೊಬ್ಬ ವ್ಯಕ್ತಿ ಸಹಾಯಕ್ಕೆ ಇರಲಿಲ್ಲವಾದ್ದರಿಂದ ಅವರು ಎಲ್ಲ ಕೆಲಸವನ್ನೂ ತಾವೇ ಸ್ವತಃ ಮಾಡಬೇಕಾಗಿದ್ದಿತು. ಆದರೆ ಅವರು ಎಲ್ಲವನ್ನೂ ಪರಮ ಮನಃಸ್ಥೈರ್ಯದಿಂದ ಸಹಿಸಿಕೊಂಡರು.

ತಮ್ಮ ಗುರುದೇವನ ಸಂದೇಶವನ್ನು ಪ್ರಸಾರ ಮಾಡುವುದೇ ಅವರ ಜೀವನದ ಗುರಿಯಾಗಿದ್ದುದರಿಂದ, ಅವರು ಉತ್ಸಾಹಭರಿತರಾಗಿಯೇ ಅನೇಕ ಸಾರ್ವಜನಿಕ ಸಭೆಗಳಲ್ಲಿ ಉಪನ್ಯಾಸಗಳನ್ನು ಮಾಡಲು ಮತ್ತು ಆಧ್ಯಾತ್ಮಿಕ ಶಿಕ್ಷಣ ತರಗತಿಗಳನ್ನು ನಡೆಸಲು ಒಪ್ಪಿಕೊಂಡರು. ಅನೇಕ ವೇಳೆ ಅವರಿಗೆ ವಾರದಲ್ಲಿ ಹನ್ನೆರಡು ಕಾರ್ಯಕ್ರಮಗಳು ಇರುತ್ತಿದ್ದವು!

ನಿಗದಿತ ಕಾರ್ಯಕ್ರಮದ ಸ್ಥಳಕ್ಕೆ ಬಹುಪಾಲು ಅವರು ನಡೆದುಕೊಂಡೇ ಹೋಗಬೇಕಿತ್ತು. ಹವಾಮಾನದ ವೈಪರೀತ್ಯದಲ್ಲೂ ಬಹುದೂರದವರೆಗೆ ನಡೆಯಬೇಕಿತ್ತು. ಏಕೆಂದರೆ ಯಾವುದೇ ವಾಹನದಲ್ಲಿ ಹೋಗಲು ಅವರ ಹತ್ತಿರ ಹಣವಿರಲಿಲ್ಲ. ಸುಮಾರು ದಿನಗಳಲ್ಲಿ ಅವರು ಎಷ್ಟು ಆಯಾಸಗೊಂಡಿರುತ್ತಿದ್ದರೆಂದರೆ, ಅವರು ತಮ್ಮ ಹಸಿವನ್ನು ಒಂದು ತುಂಡು ಬ್ರೆಡ್ ತಿಂದು ನೀಗಿಸಿಕೊಳ್ಳುತ್ತಿದ್ದರು.

ಕೆಲವು ವೇಳೆ ಸಭೆಯಲ್ಲಿ ಕೆಲವೇ ಮಂದಿ ಶ್ರೋತೃಗಳಿರುತ್ತಿದ್ದರು ಅಥವಾ ಸ್ಥಳ ಖಾಲಿಯಾಗಿರುತಿತ್ತು. ಇದರಿಂದ ಅವರು ಕ್ಷೋಭೆಗೊಳ್ಳದೆ, ತಮ್ಮ ಪ್ರವಚನವನ್ನು ಗುರುದೇವನ ಪಾದದಡಿ ಅರ್ಪಿಸಲು ಹಿಂಜರಿಯುತ್ತಿರಲಿಲ್ಲ.

ಶಾಸ್ತ್ರಗಳ ಬೌದ್ಧಿಕ ವ್ಯಾಸಂಗವು ಸಂನ್ಯಾಸಿ ಜೀವನದ ಒಂದು ಪ್ರಮುಖ ಅಂಗ; ಏಕೆಂದರೆ ಅದು ಸಾಧನೆಯಲ್ಲಿ ಏಳಿಗೆಯಾಗಲು ಮತ್ತು ಬೋಧನೆ ಮಾಡಲು ಸಹಕಾರಿಯಾಗುತ್ತದೆ. ಸ್ವಾಮಿ ರಾಮಕೃಷ್ಣಾನಂದರು ಮಹಾ ಮೇಧಾವಿಗಳಾಗಿದ್ದರು. ಅವರು ಸಂಸ್ಕೃತದಲ್ಲಿ, ಹಿಂದೂ ಶಾಸ್ತ್ರಗ್ರಂಥಗಳಲ್ಲಿ ವಿದ್ವಾಂಸರಾಗಿದ್ದರು. ಇತರ ಧರ್ಮಗಳ ದರ್ಶನಗಳ ಅರಿವು, ಗಣಿತಶಾಸ್ತ್ರವೇ ಮುಂತಾದ ವಿಜ್ಞಾನ ಕ್ಷೇತ್ರಗಳಲ್ಲಿ ಪಾಂಡಿತ್ಯ ಅವರಿಗೆ ಇದ್ದಿತು. ಅವರು ಶ್ರೇಷ್ಠ ವಾಗ್ಮಿಗಳಲ್ಲದಿದ್ದರೂ, ಅವರ ತರಗತಿಗಳ ಉಪನ್ಯಾಸಗಳು, ಸರಳ ಸಂಭಾಷಣೆಯ ರೂಪದಲ್ಲಿದ್ದು ಶ್ರೋತೃಗಳ ಮನಸ್ಸಿಗೆ ನೇರವಾಗಿ ನಾಟುವಂತಿದ್ದವು.

ಇಷ್ಟೆಲ್ಲಾ ಪಾಂಡಿತ್ಯವಿದ್ದರೂ, ಅವರು ಸರಳರೂ, ನಿರಹಂಕಾರಿಗಳೂ, ಹೆಸರು ಮತ್ತು ಕೀರ್ತಿಗಳಲ್ಲಿ ನಿರಾಸಕ್ತರೂ ಆಗಿದ್ದರು. ಆದರೆ ಶ್ರೀಶಂಕರರೇ ಮೊದಲಾದ ಪ್ರಸಿದ್ಧ ವ್ಯಕ್ತಿ ಗಳನ್ನು ಕುರಿತು ಯಾರಾದರೂ ಲಘುವಾಗಿ ಮಾತನಾಡಿದರೆ, ಸಲ್ಲದ ವಿಮರ್ಶೆಗಳನ್ನು ಮಾಡಿದರೆ, ಉಗ್ರವಾಗಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಒಮ್ಮೆ ತಾವು ಮಾತನಾಡಬೇಕಿದ್ದ ಸಭೆಯಲ್ಲಿ ಪ್ರಾಯೋಜಕರು ಶ್ರೀಶಂಕರರ ಬಗ್ಗೆ ಅಗೌರವವಾಗಿ ಮಾತನಾಡಿದುದರಿಂದ ಒಮ್ಮಿಂದೊಮ್ಮೆಗೇ ಸಭೆಯಿಂದ ಹೊರ ನಡೆದರು.

ಶ್ರೀರಾಮಕೃಷ್ಣರ ನೈಜ ಸಂನ್ಯಾಸಿಶಿಷ್ಯರಾಗಿ ಅವರು ಆಧ್ಯಾತ್ಮಿಕ ಉನ್ನತಿಗಾಗಿ, ಕಾಮ ಮತ್ತು ಲೋಭಗಳ ತ್ಯಾಗದ ಅನಿವಾರ್ಯತೆಯನ್ನು ಮೇಲಿಂದ ಮೇಲೆ ಉಲ್ಲೇಖ ಮಾಡುತ್ತಿದ್ದರು. ಈ ರೀತಿಯ ಬೋಧನೆಯು ಕೆಲವು ಗಣ್ಯವ್ಯಕ್ತಿಗಳನ್ನು ಅಸಮಾಧಾನಗೊಳಿಸಿ, ಅವರು ಈ ಬೋಧನೆಯು ಮುಂದುವರಿದರೆ ಆರ್ಥಿಕ ಸಹಾಯವನ್ನು ನಿಲ್ಲಿಸುತ್ತೇವೆಂದು ಸೂಚನೆ ಕೊಟ್ಟರು. ಶ್ರೀರಾಮಕೃಷ್ಣರು ಬೋಧಿಸಿದ್ದ ಸಂನ್ಯಾಸ ಮತ್ತು ಆಧ್ಯಾತ್ಮಿಕ ಜೀವನದ ಮೂಲಸೂತ್ರಗಳಿಗೆ ರಾಮಕೃಷ್ಣಾನಂದರು ಬದ್ಧರಾಗಿದ್ದುದರಿಂದ ಅವನ್ನು ಮಾರ್ಪಡಿಸುವ ಬಗ್ಗೆ ಕಿಂಚಿತ್ತೂ ರಾಜಿಯಾಗದೆ ತಮ್ಮ ನಿಲುವಿನಿಂದ ಕೊಂಚವೂ ಜಗ್ಗಲಿಲ್ಲ.

'ಐಸ್‌ಹೌಸ್' ಕಟ್ಟಡವು ಹರಾಜಿಗೆ ಬಂದಾಗ, ಅವರ ಹಿತೈಷಿಗಳು ಮತ್ತು ಭಕ್ತರುಗಳು ಅದನ್ನು ಖರೀದಿಸಲು ಹರಸಾಹಸ ಪಡುತ್ತಿದ್ದಾಗ, ಅವರು ಸಂಪೂರ್ಣವಾಗಿ ಅನಾಸಕ್ತರಾಗಿದ್ದರು; ಏಕೆಂದರೆ ಅವರು ವಸತಿಗಾಗಿ, ತಮ್ಮ ಸ್ವಂತ ಮನೆಗಾಗಿ, ಸುಖಜೀವನಕ್ಕಾಗಿ ಎಂದೂ ಆಸಕ್ತರಾಗಿರಲಿಲ್ಲ.

ಅವರ ಹೊರಗಿನ ನಡೆವಳಿಕೆಗಳು ಗಂಭೀರವಾಗಿದ್ದರೂ, ಅವರು ಮೃದುಹೃದಯಿಗಳಾಗಿದ್ದರು. ಕೊಯಂಬತ್ತೂರು ನಗರವು ಪ್ಲೇಗಿನಿಂದ ಪೀಡಿತವಾಗಿ ವಿನಾಶಕ್ಕೆ ಈಡಾದಾಗ, ಕೆಲವು ಮಕ್ಕಳು ಅಸಹಾಯಕರಾಗಿ ಅಲ್ಲಿಂದಿಲ್ಲಿಗೆ ಓಡಾಡುತ್ತಿರುವುದನ್ನು ಕಂಡು ಅವರ ಹೃದಯ ಮರುಗಿತು. ಆ ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಅವರು ಒಂದು ಅನಾಥಾಲಯವನ್ನು ಸ್ಥಾಪಿಸಿದರು. ಈಗ ಅದು ಅತಿ ದೊಡ್ಡ ಶುಲ್ಕರಹಿತ ನಿವಾಸಿ ಶಿಕ್ಷಣ ಕೇಂದ್ರವಾಗಿ ಬೆಳೆದಿದೆ.

ಪ್ರೀತಿ ಮತ್ತು ನಿಷ್ಠುರತೆಯ ಸಮತೋಲನ ದೃಷ್ಟಿಯನ್ನು ಇಟ್ಟುಕೊಂಡು ಅವರು ತಮ್ಮಲ್ಲಿಗೆ ಬಂದ ಹೊಸಬರಿಗೆ ತರಬೇತಿ ನೀಡಿದರು. ಅವರೆಲ್ಲರೂ ಕಾಲಕ್ರಮೇಣ ಸಮರ್ಥ ಸಾಧುಗಳಾಗಿ ಕಾರ್ಯ ನಿರ್ವಹಿಸಿದರು.

ತಮ್ಮ ಸ್ವಂತ ಆಧ್ಯಾತ್ಮಿಕ ಜೀವನದಲ್ಲಿ ಗಾಢಧ್ಯಾನದ ಜೊತೆಗೆ, ಅವರು ಭಗವದ್ಗೀತೆಯ ಮತ್ತು ವಿಷ್ಣುಸಹಸ್ರನಾಮದ ಪಾರಾಯಣದಲ್ಲಿ ಉತ್ಸುಕರಾಗಿದ್ದರು. ಅವರು ಈ ಪಾರಾಯಣವನ್ನು ಎಂದೂ ತಪ್ಪಿಸುತ್ತಿರಲಿಲ್ಲ.

ಹಿಂದೂಧರ್ಮ-ಸಂಪ್ರದಾಯಬದ್ಧರಾಗಿ ಅವರು ದಿನದ ಶುಭ ಮತ್ತು ಅಶುಭ ಕಾಲಗಳನ್ನು ಜಾಗರೂಕತೆಯಿಂದ ಆಚರಿಸುತ್ತಿದ್ದರು. ಆ ದಿನಗಳಲ್ಲಿ ಏನಾದರೂ ಶಾಸ್ತ್ರೀಯ ಕರ್ಮಗಳನ್ನು ಮಾಡಬೇಕಾದಲ್ಲಿ ಅದನ್ನು ತಪ್ಪದೆ ಮಾಡುತ್ತಿದ್ದರು.

ಎರಡನೆಯದಾಗಿ, ಅವರ ಜೀವನದ ಇನ್ನೊಂದು ಮಹತ್ತ್ವದ ಭಾಗವೆಂದರೆ, ತಮ್ಮ ಗುರುಗಳಾದ ಶ್ರೀರಾಮಕೃಷ್ಣರಲ್ಲಿ ಇಟ್ಟಿದ್ದ ಗಾಢವಾದ ಭಕ್ತಿ ಮತ್ತು ಅವರನ್ನು ಪೂಜಿಸುತ್ತಿದ್ದ ಅನನ್ಯವಾದ ಅದ್ಭುತವಾದ ರೀತಿ.

ಅಧಿಕ ಸಂಖ್ಯೆಯ ಭಕ್ತರುಗಳಾದ ನಮಗೆ ಶ್ರೀರಾಮಕೃಷ್ಣರ ಫೋಟೊ, ಅಥವಾ ಚಿತ್ರವು, ಕಾಗದದ, ಗಾಜಿನ, ಮರದ ಭೌತಿಕ ವಸ್ತುವಾದರೂ ಅದು ಒಂದು ಪವಿತ್ರ ಪ್ರತೀಕವಾದುದರಿಂದ ನಾವು ಅದಕ್ಕೆ ಗೌರವ ಮತ್ತು ಪೂಜೆಗಳನ್ನು ಸಲ್ಲಿಸುವುದು ರೂಢಿಯಾಗಿದೆ. ಏಕೆಂದರೆ ಅದು ನಮ್ಮ ಮನಸ್ಸಿಗೆ ಜೀವಂತ ಹಾಗೂ ಪ್ರಜ್ಞಾಪೂರ್ವಕ ದೇವತೆಯ ಇರುವಿಕೆಯನ್ನು ಕೊಡುತ್ತದೆ.

ಆದರೆ ರಾಮಕೃಷ್ಣಾನಂದರು ಆಳವಾದ ಶ್ರದ್ಧಾಭಕ್ತಿಯುಳ್ಳವರಾಗಿದ್ದರಿಂದ ಅವರಿಗೆ, ಅದು ಕೇವಲ ಒಂದು ಚಿತ್ರ ಅಥವಾ ಪ್ರತೀಕವಾಗಿರದೆ, ಸ್ವಯಂ ಶ್ರೀರಾಮಕೃಷ್ಣರೇ ರಕ್ತಮಾಂಸಗಳಿಂದ ಕೂಡಿದ ದೇಹಧಾರಿಗಳಾಗಿ, ಸಜೀವರಾಗಿ, ಸಂಪೂರ್ಣ ಪ್ರಜ್ಞೆಯುಳ್ಳವರಾಗಿರುವರೆಂದು ತೋರುತ್ತಿತ್ತು. ಹೀಗಾಗಿ ಅವರ ಇಡೀ ಶಾಸ್ತ್ರೋಕ್ತ ಪೂಜಾಪದ್ಧತಿಯು ಮತ್ತು ಸೇವೆಗಳು ಈ ಭಾವನೆಗೆ ಅನುಗುಣವಾಗಿರುತ್ತಿದ್ದವು.

ಅವರ ಗುರುಗಳು ಅಥವಾ ದೇವತೆಯು ಜೀವಂತವಾಗಿ ಗರ್ಭಗುಡಿಯಲ್ಲಿ ವಾಸಿಸುತ್ತಿದ್ದು ಮತ್ತು ಇವರ ಜೊತೆಯೇ ಇರುತ್ತಿದ್ದುದರಿಂದ ನಿವೇದನೆಗೆ ಏನೂ ಆಹಾರ ಸಿಗದಿದ್ದರೆ, ಭಕ್ತರು ಏನಾದರೂ ವಸ್ತುಗಳನ್ನು ತಂದುಕೊಡದೆ ಇದ್ದ ಸಮಯದಲ್ಲಿ, ಅವರು ತಮ್ಮ ಗುರುಗಳೊಡನೆ ಕಲಹವಾಡುತ್ತಿದ್ದರು. ಒಮ್ಮೆ ನಿವೇದನೆಗೆ ಏನೂ ಸಿಗದಿದ್ದಾಗ, ಅವರು ಸಮುದ್ರ ತೀರದ ಮರಳಿನ ಉಂಡೆಗಳನ್ನೇ ಅರ್ಪಿಸಿ ಅದನ್ನೇ ತಿನ್ನುವುದಾಗಿ ಹೇಳಿದ ಪ್ರಸಿದ್ಧ ಘಟನೆಯಿದೆ! ಆಗ ಆಶ್ಚರ್ಯ ಎಂಬಂತೆ, ಭಕ್ತನೊಬ್ಬನು ಆಹಾರಸಾಮಗ್ರಿಗಳನ್ನು ಸರಿಯಾದ ಕಾಲದಲ್ಲಿ ತಂದುಕೊಟ್ಟಾಗ, ರಾಮಕೃಷ್ಣಾನಂದರು ತಕ್ಷಣವೇ ಲೂಚಿ (ಪೂರಿ) ಮತ್ತು ಹಲ್ವ ತಯಾರಿಸಿ, ಬಿಸಿಬಿಸಿಯಾಗಿ ಶ್ರೀರಾಮಕೃಷ್ಣರಿಗೆ ಅರ್ಪಿಸಿ, ಮುಗ್ಧ ಬಾಲಕನಂತೆ ಸಂತೋಷಪಟ್ಟರು. ರಾಮಕೃಷ್ಣಾನಂದರು ಶ್ರೀರಾಮಕೃಷ್ಣದೇವರಿಗೆ ಬೇಸಿಗೆಯ ಕಡುತಾಪದ ದಿನಗಳಲ್ಲಿ ಬೀಸಣಿಗೆಯಿಂದ ತಾಸುಗಟ್ಟಲೆ ಗಾಳಿ ಬೀಸುವ, ಅಥವಾ ಕಟ್ಟಡದ ಸೂರಿನ ರಂಧ್ರದಿಂದ ಮಳೆಯ ನೀರು ರಾಮಕೃಷ್ಣರ ಚಿತ್ರದ ಮೇಲೆ ಬೀಳುವುದನ್ನು ತಪ್ಪಿಸಲು ಇಡೀ ರಾತ್ರಿ ಕೊಡೆಯನ್ನು ಹಿಡಿದು ಸೇವೆ ಸಲ್ಲಿಸುವ ದೃಶ್ಯಗಳು, ಅಥವಾ ನಿವೇದನೆಗೆ ಹಣ್ಣುಗಳನ್ನು, ಆಹಾರ ಪದಾರ್ಥಗಳನ್ನು ಸಿದ್ಧಪಡಿಸುವಲ್ಲಿ ತೆಗೆದುಕೊಳ್ಳುತ್ತಿದ್ದ ಎಚ್ಚರಿಕೆಗಳು, ನಯನಮನೋಹರವಾಗಿರುತ್ತಿದ್ದವು.

ಅವರು ಪೂಜೆ ಮತ್ತು ಕೈಂಕರ್ಯಗಳಿಗೆ ಸಂಬಂಧಿಸಿದಂತೆ ಇರುವ ಕೆಲಸಗಳಲ್ಲಿ ಕೊಂಚ ಅಜಾಗರೂಕತೆಯಾದರೂ, ಅದನ್ನು ಎಂದೂ ಸಹಿಸುತ್ತಿರಲಿಲ್ಲ. ರಾಮಕೃಷ್ಣಾನಂದರ ದೀರ್ಘಕಾಲದ ದಕ್ಷಿಣ ಭಾರತದ ವಾಸದ ಭಕ್ತಿಗಾಥೆಯು, ಶ್ರದ್ಧಾವಂತ ಭಕ್ತರುಗಳಿಗೆ, ಭಗವತ್ಸಾಕ್ಷಾತ್ಕಾರ ಬಯಸುವವರಿಗೆ, ಪರಿಪೂರಿತ ಅನುಭವಗಳಿಂದ ತುಂಬಿ ಮಾರ್ಗದರ್ಶಿಯಾಗಿದೆ.

ಶತಮಾನಗಳಿಂದ ಹಿಂದೂ ಸಂನ್ಯಾಸಿ ಜೀವನವು ಸ್ವಂತ ಮುಕ್ತಿಯ ಅಥವಾ ಬಿಡುಗಡೆಯ ಕಿರುಪಥ್ಯಕ್ಕೆ ಸೀಮಿತಗೊಂಡು, ಇಡೀ ಸಮಾಜದ ಹಿತಕ್ಕೆ ಯಾವ ಚಿಂತನೆಯೂ ನಡೆದಿರಲಿಲ್ಲ. ತೊಡಕಾದ ಹಿಂದೂ ಧರ್ಮಾಚರಣೆಗಳು ದೈವೀಮುಖವಾಡದ ಸ್ವಂತ ಹಿತಾಸಕ್ತಿಯ ಪೂರಕಕ್ರಿಯೆಗಳಾಗಿ ನೆಲಕಚ್ಚಿದ್ದವು. ರಾಮಕೃಷ್ಣಾನಂದರು ಈ ಇಬ್ಬಗೆಯ ಧಾರ್ಮಿಕ-ಆಧ್ಯಾತ್ಮಿಕ ಕ್ರಿಯೆಗಳನ್ನು ಮೇಲಕ್ಕೆ ಎತ್ತಿದುದೇ ಅಲ್ಲದೆ ಅವುಗಳಲ್ಲಿ ಪರಿವರ್ತನೆಯನ್ನೂ ತಂದರು.

'ಕ್ರಿಯೆ ಮತ್ತು ಆರಾಧನೆ'ಯ ಭಾವನೆಯನ್ನು (ಇದು ಸ್ವಾಮಿ ವಿವೇಕಾನಂದರ ಬೋಧನೆಗಳಿಂದ- ಕ್ರಮೇಣ ಕ್ರಿಯೆಯೇ ಆರಾಧನೆ ಎಂಬ ಎತ್ತರಕ್ಕೆ ಏರಿತು) ಸಂನ್ಯಾಸಿ ಜೀವನಕ್ಕೆ ಜೋಡಿಸಿ ಒಂದು ಹೊಸ ಆಯಾಮವನ್ನೇ ತಂದುಕೊಟ್ಟರು. ಈ ಕೆಲಸವಾಗುವಾಗ ಸಂನ್ಯಾಸಿ ಜೀವನದ ಭಾಗವಾದ ವೈರಾಗ್ಯ ಮತ್ತು ತ್ಯಾಗಗಳನ್ನು ತ್ಯಜಿಸಲಿಲ್ಲ. ಇದಕ್ಕೆ ಪೂರಕವಾಗಿ ಅವರ ಅಪಾರ ವಿದ್ವತ್ತು, ಅವರ ಜೀವನವನ್ನು, ಶುದ್ಧತೆಯನ್ನು ಅಂದಗೊಳಿಸಿತು.

ತಮ್ಮ ಜೀವನದ ಸರ್ವಸ್ವವೇ ಆಗಿದ್ದ ಶ್ರೀರಾಮಕೃಷ್ಣರ ವಿಧ್ಯುಕ್ತ ಪೂಜೆಯನ್ನು, ಅತಿ ಸಣ್ಣ ವಿಷಯಗಳಿಗೂ ಹೆಚ್ಚಿನ ಗಮನ ಕೊಟ್ಟು ಸಿದ್ಧಮಾಡಿ, ಶ್ರದ್ಧಾಭಕ್ತಿಗಳೊಡನೆ ಮಾಡಿ, ಅವರು ಈ ರೀತಿಯ ಪೂಜೆಯನ್ನು ಹೇಗೆ ಮಾಡಬೇಕೆಂದು ಮಾರ್ಗ ತೋರಿದ್ದಾರೆ. ಅವರು ತೀವ್ರಭಕ್ತಿಭಾವದಿಂದ ಮಾಡುತ್ತಿದ್ದ ಪೂಜೆಯು, ಅಲ್ಲಿರುತ್ತಿದ್ದ ಜಡ ವೀಕ್ಷಕರ ಮನಸ್ಸನ್ನೂ ಎತ್ತರಕ್ಕೆ ಕರೆದೊಯ್ಯುತಿತ್ತು. ಅವರಿಗೆ ಶ್ರೀರಾಮಕೃಷ್ಣರ ಭಾವಚಿತ್ರವು, ಶ್ರೀರಾಮಕೃಷ್ಣರೇ ಅಲ್ಲಿ ಜೀವಂತವಾಗಿ ಇರುವರೆಂಬ ಭಾವನೆ ಯನ್ನುಂಟುಮಾಡುತ್ತಿತ್ತು.

ಹಿಂದೂ ಸಂನ್ಯಾಸಾಶ್ರಮ ಸಂಪ್ರದಾಯಕ್ಕೆ ಮತ್ತು ಧರ್ಮಾಚರಣೆಗಳಿಗೆ ಸ್ವಾಮಿ ರಾಮಕೃಷ್ಣನಂದರ ಕೊಡುಗೆ, ನಿಜವಾಗಿ ಹೇಳಬೇಕೆಂದರೆ ಸರಿಸಾಟಿಯಿಲ್ಲದ್ದು, ಅನುಪಮವಾದದ್ದು! *

ಸ್ವಾಮಿ ನಿತ್ಯಸ್ಥಾನಂದ

ಜ್ಞಾನ ಮತ್ತು ವಿಜ್ಞಾನ



ನಾವು ಜ್ಞಾನವನ್ನು ಅನೇಕ ವಿಧಾನಗಳ ಮೂಲಕ ಪಡೆಯುತ್ತೇವೆ. ಸಾಮಾನ್ಯ ಇಂದ್ರಿಯಗಳ ಮೂಲಕ ಪಡೆಯುವುದು ಒಂದು ಬಗೆಯ ಜ್ಞಾನ. ಇದು ಕೇವಲ ವಸ್ತುಗಳನ್ನು ಗುರುತಿಸುವುದು ಅಷ್ಟೆ. ಪ್ರಾಣಿಗಳೂ ಇದೇ ರೀತಿಯ ಜ್ಞಾನವನ್ನು ಪಡೆಯುತ್ತವೆ. ಆದರೆ ಮಾನವನು ಇಷ್ಟರಿಂದಲೇ ತೃಪ್ತನಾಗದೆ ಅನೇಕ ವಿಧಾನಗಳನ್ನು ಅನುಸರಿಸಿ, ತನ್ನ ಬುದ್ಧಿಯನ್ನೂ ಉಪಯೋಗಿಸಿ ತನ್ನ ಜ್ಞಾನದ ಪರಿಧಿಯನ್ನು ವಿಸ್ತರಿಸುತ್ತಾ ಹೋಗುತ್ತಾನೆ. ಅಷ್ಟೇ ಅಲ್ಲದೆ ಆ ಜ್ಞಾನವನ್ನು ವ್ಯಾವಹಾರಿಕ ಜೀವನದಲ್ಲಿ ಬಳಸಿಕೊಂಡು ಸಂಸ್ಕೃತಿ ಮತ್ತು ನಾಗರಿಕತೆಯಲ್ಲಿ ಅವನು ಮುಂದುವರಿಯುತ್ತಾನೆ. ಆದರೆ ಇದೆಲ್ಲವೂ ಮೂಲಭೂತವಾಗಿ ಇಂದ್ರಿಯಾನುಭವವನ್ನೇ ಅವಲಂಬಿಸಿರುವುದು. ಮಾನವನು ಜ್ಞಾನವನ್ನು ಪಡೆಯುವುದು ಮಾತ್ರವಲ್ಲದೆ, ಅದನ್ನು ನಿತ್ಯಜೀವನದಲ್ಲಿ ಉಪಯೋಗಿಸಿಕೊಳ್ಳುತ್ತಾನೆ. ಅಗ್ನಿಯ ಜ್ಞಾನವನ್ನು ಪಡೆಯುವುದು ಒಂದು, ಅದನ್ನು ಉಪಯೋಗಿಸಿಕೊಳ್ಳುವುದು ಇನ್ನೊಂದು. ಹೀಗೆ ಜ್ಞಾನದ ಮೂರು ಹಂತಗಳನ್ನು ಗುರುತಿಸಬಹುದು – ಇಂದ್ರಿಯಜ್ಞಾನ, ಬೌದ್ಧಿಕಜ್ಞಾನ ಮತ್ತು ಅನುಭವಜ್ಞಾನ. ಇಂದ್ರಿಯಜ್ಞಾನವು ಪ್ರಾಣಿ ಮತ್ತು ಮನುಷ್ಯರಿಗೆ ಸಮಾನವಾದುದು. ಮನುಷ್ಯನು ಇದನ್ನು ಮೀರಿ ಹೋಗಿ ತನ್ನ ಬುದ್ಧಿ, ಭಾಷೆ ಮತ್ತು ಇನ್ನೂ ಅನೇಕ ಉಪಕರಣಗಳ ಮೂಲಕ, ಹಾಗೂ ವಿವಿಧ ಜ್ಞಾನಗಳನ್ನು ಒಂದಕ್ಕೊಂದು ಸಂಬಂಧಿಸುತ್ತ, ವಿಸ್ತಾರವಾದ ಜ್ಞಾನ ಪ್ರಪಂಚವನ್ನೇ ನಿರ್ಮಿಸುತ್ತಾನೆ. ಅವನು ಇನ್ನೂ ಮುಂದುವರಿದು ತಾಂತ್ರಿಕತೆ ಮತ್ತು ವಿವಿಧ ಕಲೆಗಳ ಮೂಲಕ ಈ ಜ್ಞಾನವನ್ನು ಅನುಭವಿಸುತ್ತಾನೆ. ಶ್ರೀರಾಮಕೃಷ್ಣರು ನೀಡುವ ಉದಾಹರಣೆಯ ಮೂಲಕ ವಿವರಿಸುವುದಾದರೆ, ಹಾಲನ್ನು ನೋಡುವುದು ಇಂದ್ರಿಯಜ್ಞಾನ, ಅದು ಏನು ಎಂದು ವೈಜ್ಞಾನಿಕವಾಗಿ ತಿಳಿದುಕೊಳ್ಳುವುದು ಬೌದ್ಧಿಕ ಜ್ಞಾನ, ಮತ್ತು ಅದನ್ನು ಕುಡಿದು ಪೌಷ್ಟಿಕತೆಯನ್ನು ಪಡೆಯುವುದು ಅನುಭವ ಜ್ಞಾನ.

ಇದನ್ನೇ ಆಧ್ಯಾತ್ಮಿಕ ಜೀವನಕ್ಕೆ ಅನ್ವಯಿಸಿದರೆ, ಆಧ್ಯಾತ್ಮಿಕ ವಿಷಯಗಳನ್ನು ತಿಳಿದುಕೊಳ್ಳುವುದು ಒಂದು, ಅದನ್ನು ಅನುಭವಿಸುವುದು ಇನ್ನೊಂದು. ಶ್ರೀಕೃಷ್ಣನು ಒಂದನ್ನು ಜ್ಞಾನವೆಂದೂ ಇನ್ನೊಂದನ್ನು ವಿಜ್ಞಾನವೆಂದೂ ಕರೆಯುತ್ತಾನೆ.

ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ ।
ಯಜ್ಜ್ಞಾತ್ವಾ ನೇಹ ಭೂಯೋಽನ್ಯಜ್ಜ್ಞಾತವ್ಯಮವಶಿಷ್ಯತೇ ॥
(೭ : ೨)

"ವಿಜ್ಞಾನಸಹಿತವಾದ ಜ್ಞಾನವನ್ನು ಸ್ವಲ್ಪವೂ ಬಿಡದೆ ನಾನು ನಿನಗೆ ಹೇಳುತ್ತೇನೆ. ಇದನ್ನು ತಿಳಿದುಕೊಂಡರೆ ಇಲ್ಲಿ ಇನ್ನೇನೂ ತಿಳಿದುಕೊಳ್ಳುವುದಕ್ಕೆ ಉಳಿಯುವುದಿಲ್ಲ."

'ಸವಿಜ್ಞಾನಂ' ಎಂಬುದಕ್ಕೆ **ಸ್ವಾನುಭವ ಸಂಯುಕ್ತಂ**–'ಸ್ವಂತ ಅನುಭವದಿಂದ ಕೂಡಿರುವುದು' ಎಂಬ ವಿವರಣೆಯನ್ನು ಶ್ರೀಶಂಕರಾಚಾರ್ಯರು ನೀಡುತ್ತಾರೆ. ಅಂದರೆ ಶ್ರೀಕೃಷ್ಣನು ಇಲ್ಲಿ ಬೋಧಿಸುವ ಜ್ಞಾನವು ಕೇವಲ ಬೌದ್ಧಿಕ ಜ್ಞಾನವಲ್ಲ, ಅನುಭವಸಹಿತವಾದ ಜ್ಞಾನ. ನಮ್ಮಲ್ಲನೇಕರ ಆಧ್ಯಾತ್ಮಿಕ ಜೀವನ ಬೌದ್ಧಿಕ ಜ್ಞಾನದಲ್ಲಿಯೇ ಕೊನೆಗೊಳ್ಳುತ್ತದೆ. ಆಧ್ಯಾತ್ಮಿಕ ವಿಷಯಗಳನ್ನು ಚಿಂತಿಸುವುದು, ಅವುಗಳ ಬಗ್ಗೆ ಬರೆಯುವುದು, ಉಪನ್ಯಾಸ ನೀಡುವುದು, ಮತ್ತು ಅವುಗಳ ಆಧಾರದ ಮೇಲೆ ಮತ, ತತ್ತ್ವಗಳನ್ನು ವಿಸ್ತರಿಸುವುದು– ಇವುಗಳೆಲ್ಲ ಒಂದು ಬೌದ್ಧಿಕ ಕಲೆ. ಇವುಗಳಲ್ಲಿಯೇ ಮುಳುಗಿ ಹೋದರೆ ಆಧ್ಯಾತ್ಮಿಕ ಆದರ್ಶವು ಕಣ್ಮರೆಯಾಗಿ ಹೂವಿನ ಸೌಂದರ್ಯಕ್ಕೆ ಮಾರುಹೋಗಿ ಮಕರಂದವನ್ನು ಸವಿಯದ ದುಂಬಿಯಂತಾಗುತ್ತೇವೆ. ಶ್ರೀರಾಮಕೃಷ್ಣರು ಹೇಳುವಂತೆ ಎಲೆ ಎಣಿಸುವುದರಲ್ಲೇ ಮಗ್ನರಾಗಿ ಹಣ್ಣು ತಿನ್ನುವುದನ್ನೇ ಮರೆಯುತ್ತೇವೆ. ಆದ್ದರಿಂದಲೇ ಶ್ರೀಕೃಷ್ಣನು ಹೇಳುತ್ತಾನೆ.

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।
ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥ (೭ : ೩)

"ಸಾವಿರಾರು ಮನುಷ್ಯರಲ್ಲಿ ಎಲ್ಲೋ ಕೆಲವರು ಆಧ್ಯಾತ್ಮಿಕ ಉನ್ನತಿಗಾಗಿ ಪ್ರಯತ್ನಿಸುತ್ತಾರೆ. ಈ ರೀತಿ ಪ್ರಯತ್ನಿಸುವ ಸಿದ್ಧರಲ್ಲೂ ಕೆಲವರು ಮಾತ್ರ ಭಗವಂತನನ್ನು ಯಥಾರೂಪವಾಗಿ ಅರಿಯುತ್ತಾರೆ." ಅನೇಕರು ಆಧ್ಯಾತ್ಮಿಕ ಜೀವನಕ್ಕೆ ಆಕರ್ಷಿತರಾಗಿ ಬರುತ್ತಾರೆ. ಕೆಲವರು ಸ್ವಲ್ಪ ಮನಶ್ಶಾಂತಿಯನ್ನು ಪಡೆದು ಅಷ್ಟರಲ್ಲೇ ತೃಪ್ತರಾಗಿ ಸಾಧನೆಯನ್ನು ಬಿಟ್ಟುಬಿಡುತ್ತಾರೆ. ಮತ್ತೆ ಕೆಲವರು ಇತರರಿಗೆ ಬೋಧಿಸುವುದರಲ್ಲೇ ಮಗ್ನರಾಗಿ ಆದರ್ಶವನ್ನು ಮರೆಯುತ್ತಾರೆ. ಇನ್ನು ಕೆಲವರು ಬೌದ್ಧಿಕ ತೃಪ್ತಿಯನ್ನು ಪಡೆದು ಮುಂದುವರಿಯುವುದೇ ಇಲ್ಲ. ಈ ಶಾಂತಿ ತೃಪ್ತಿ ಮುಂತಾದವುಗಳೆಲ್ಲ ಆಧ್ಯಾತ್ಮಿಕ ಯಾತ್ರೆಯ ಮಧ್ಯದಲ್ಲಿ ದೊರೆಯುವ ತಂಗುದಾಣಗಳಿದ್ದಂತೆ. ಆದರೆ ತಂಗುದಾಣವೇ ಯಾತ್ರೆಯ ಗುರಿಯಲ್ಲ. ರನ್ನಿಂಗ್ ರೇಸ್‌ನಲ್ಲಿ ಅನೇಕರು ಓಡುತ್ತಾರೆ, ಆದರೆ ಒಬ್ಬರೋ ಇಬ್ಬರೋ ಗುರಿಮುಟ್ಟುತ್ತಾರೆ.

ಜ್ಞಾನವನ್ನು ಇನ್ನೊಂದು ರೀತಿಯಲ್ಲಿ ವಿಭಾಗಿಸಲಾಗಿದೆ– ಸಾಂಕೇತಿಕ ಜ್ಞಾನ (symbolic knowledge) ಮತ್ತು ನಿಕಟ ಜ್ಞಾನ (intimate knowledge). ನಾವು ಆಲೋಚನೆಗಳ ಮೂಲಕ ಪಡೆಯುವ ಜ್ಞಾನವೆಲ್ಲ ಸಾಂಕೇತಿಕವಾದುದು, ಅಂದರೆ ಅದು ಶಬ್ದಮಯವಾದುದು. ಈ ಶಬ್ದಮಯ ಜ್ಞಾನವು ವಸ್ತುವಿನ ನಿಜಸ್ವರೂಪವನ್ನು ನೀಡುವುದಿಲ್ಲ. ಈ ಶಬ್ದಮಯ ಜ್ಞಾನವೆಲ್ಲವೂ ಸತ್ಯದ ಬಗ್ಗೆ ನಮ್ಮ ವ್ಯಾಖ್ಯಾನ (interpretation) ಅಷ್ಟೆ, ಅದೇ ಸತ್ಯವಲ್ಲ. ಸತ್ಯದ ನಿಕಟ ಅರಿವು ನಮಗುಂಟಾಗಬೇಕಾದರೆ ಈ 'ಶಬ್ದ' ಅಡಗಬೇಕು – ಅಂದರೆ ಮನಸ್ಸು ಶಾಂತವಾಗಬೇಕು. ನಾವು ಏನನ್ನಾದರೂ ನೋಡಿದಾಗ, ಕೇಳಿದಾಗ ಆಲೋಚನೆಗಳಿಂದ ಅದನ್ನು ಮುಚ್ಚಿಬಿಡುತ್ತೇವೆ, ಅದನ್ನು ಅನುಭವಿಸುವುದಿಲ್ಲ. ಬುದ್ಧನಿಗೆ ಸಂಬಂಧಿಸಿದ ಒಂದು ಸುಂದರ ಕಥೆ ಇದೆ. ಬುದ್ಧನು ತನ್ನ ಕೆಲವರು ಶಿಷ್ಯರೊಡನೆ ಒಂದು ಹೂದೋಟದಲ್ಲಿ ಸುತ್ತು ತ್ತಿದ್ದನು. ಒಂದು ಸುಂದರವಾದ ಹೂವನ್ನು ತೋರಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಬೇಕೆಂದು ಶಿಷ್ಯರಿಗೆ ಹೇಳಿದನು. ಒಬ್ಬನು ಆ ಹೂವಿನ ಮೇಲೆ ಒಂದು ಸುಂದರವಾದ ಪ್ರಬಂಧ ವನ್ನೇ ಬರೆದನು, ಮತ್ತೊಬ್ಬನು ಒಂದು ಅದ್ಭುತ ಕವನವನ್ನು ರಚಿಸಿದನು. ಬುದ್ಧನ ನಿಕಟ ಶಿಷ್ಯನಾದ ಶಾರೀಪುತ್ರನು ಆ ಹೂವನ್ನು ದಿಟ್ಟಿಸಿ ನೋಡಿ ಮುಗುಳ್ನಕ್ಕನು. ಅವನೇ ನಿಜ ವಾಗಿ ಹೂವನ್ನು ಅನುಭವಿಸಿದವನು ಎಂದು ಬುದ್ಧನು ಅಭಿಪ್ರಾಯಪಟ್ಟನು. ಶಬ್ದಾರಣ್ಯದಲ್ಲಿ ನಮ್ಮನ್ನು ನಾವೇ ಕಳೆದು ಕೊಳ್ಳುತ್ತಿರುವೆವು.

ನಮ್ಮ ದೈನಂದಿನ ವ್ಯಾವಹಾರಿಕ ಜೀವನಕ್ಕೂ ಇದು ಅನ್ವಯಿಸುತ್ತದೆ. ನಾವು ವ್ಯಕ್ತಿಯನ್ನು ವ್ಯಕ್ತಿಯಾಗಿ ನೋಡದೆ ಅವನ ಬಗ್ಗೆ ನಮಗಿರುವ ಅಭಿಪ್ರಾಯಕ್ಕನುಗುಣವಾಗಿ ನೋಡು ತ್ತೇವೆ. ನಮ್ಮ ಅಭಿಪ್ರಾಯಗಳನ್ನು ಬದಿಗೊತ್ತಿ ವ್ಯಕ್ತಿ ಮತ್ತು ವಸ್ತುಗಳನ್ನು ಆದಷ್ಟು ವಾಸ್ತವಿಕ ದೃಷ್ಟಿಯಿಂದ ನೋಡುವುದನ್ನು ನಾವು ಕಲಿತರೆ ನಮ್ಮ ಪರಸ್ಪರ ಮಾನವೀಯ ಸಂಬಂಧವು ಅತ್ಯುತ್ತಮವಾಗುವುದರಲ್ಲಿ ಸಂದೇಹವಿಲ್ಲ. ನಮ್ಮ ದೃಷ್ಟಿಗೆ ಅನುಗುಣವಾಗಿ ಇತರರು ಹೀಗೇ ಇರಬೇಕೆಂದು ನಾವು ನಿರೀಕ್ಷಿಸುತ್ತೇವೆ. ಹಾಗಿರದಿದ್ದಾಗ ಅಸಮಾಧಾನವುಂಟಾಗುತ್ತದೆ, ಮನಸ್ತಾಪವುಂಟಾಗುತ್ತದೆ. ನಾವು ಆಧ್ಯಾತ್ಮಿಕ ಆದರ್ಶವುಳ್ಳವ ರಾಗಿದ್ದರೆ, ಇತರರೂ ನಮ್ಮಂತೆಯೇ ಆಧ್ಯಾತ್ಮಿಕ ವ್ಯಕ್ತಿಗಳಾಗಿರ ಬೇಕೆಂದು ಬಯಸುತ್ತೇವೆ. ನಮ್ಮ ಆದರ್ಶಕ್ಕೆ ಸ್ವಲ್ಪವೂ ಸಹಾನುಭೂತಿ ತೋರಿಸದೆ, ತಮ್ಮದೇ ಆದ ಟಿ.ವಿ. ಸಂಸ್ಕೃತಿಯ ಜೀವನವನ್ನು ನಡೆಸುವವರೊಂದಿಗೆ ಬಾಳುವುದು ಅತ್ಯಂತ ಕಷ್ಟಸಾಧ್ಯವಾಗುತ್ತದೆ. ಎಷ್ಟೋ ಕುಟುಂಬಗಳಲ್ಲಿ, ಧಾರ್ಮಿಕ ಕೇಂದ್ರಗಳಲ್ಲಿಯೂ ಕೂಡ ಇದು ಅನಿವಾರ್ಯವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಆಧ್ಯಾತ್ಮಿಕ ಸಾಧಕನು ಏನು ಮಾಡ ಬೇಕು? ಶ್ರೀಕೃಷ್ಣನು ಭರವಸೆ ನೀಡುತ್ತಾನೆ:

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್
॥ ೯ : ೨೨ ॥

"ಅನ್ಯ ಚಿಂತೆಗಳನ್ನೆಲ್ಲ ಬಿಟ್ಟು ಯಾರು ನನ್ನನ್ನೇ ಪೂಜಿಸು ತ್ತಾರೊ, ನಿತ್ಯವೂ ಅಧ್ಯಾತ್ಮ ಚಿಂತನೆಯಲ್ಲಿಯೇ ತೊಡಗಿರುವ ಅಂತಹವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ." ಇಲ್ಲಿ ಯೋಗಕ್ಷೇಮವೆಂದರೆ ಭೌತಿಕ ಆವಶ್ಯಕತೆಗಳು ಮಾತ್ರವಲ್ಲ, ಅವರಿಗೆ ಅನುಕೂಲವಾದ ಆಧ್ಯಾತ್ಮಿಕ ಪರಿಸರವನ್ನು ಅವನೇ ಕಲ್ಪಿಸಿಕೊಡುತ್ತಾನೆ. ಇದು ಅವರ ನಿಷ್ಠೆಯನ್ನು ಅವಲಂಬಿಸಿರುತ್ತದೆ. ನಮಗೆ ತಾಳ್ಮೆ ಬೇಕು. ತುಂಬ ಗೊಣಗುತ್ತಿದ್ದರೆ, ವಾತಾವರಣವನ್ನು, ವ್ಯಕ್ತಿ ಗಳನ್ನು ಮಾನಸಿಕವಾಗಿ ಶಪಿಸುತ್ತಿದ್ದರೆ, ಅದು ನಮ್ಮ ಅಧ್ಯಾತ್ಮ ನಿಷ್ಠೆಯ ಕೊರತೆಯನ್ನು ಸೂಚಿಸುತ್ತದೆ ಮತ್ತು ಭಗವಂತನೂ ಸುಮ್ಮನಿರುತ್ತಾನೆ.

ಅನುಭವವೇ ನಿಜವಾದ ಜ್ಞಾನ. ಇದನ್ನೇ ಶ್ರೀಕೃಷ್ಣನು ಇಲ್ಲಿ **'ಜ್ಞಾನ'**ವೆಂದು ಕರೆದಿರುವುದು. ಇದು ಅನುಭವಾತ್ಮಕ ವಾಗಿರುವುದರಿಂದ ಇದನ್ನು **'ಸವಿಜ್ಞಾನಂ'** ಎಂದು ಕರೆಯು ತ್ತಾನೆ. ಇದನ್ನು ಅರಿತ ಮೇಲೆ ಇನ್ನೇನೂ ತಿಳಿಯುವುದಕ್ಕೆ ಉಳಿಯುವುದಿಲ್ಲವೆಂದು ಶ್ರೀಕೃಷ್ಣನು ಹೇಳುತ್ತಾನೆ. ಎಲ್ಲವೂ ಭಗವನ್ಮಯವಾದುದರಿಂದ ಭಗವಂತನನ್ನೇ ಅರಿತ ಮೇಲೆ ಅರಿಯುವುದಕ್ಕೆ ಇನ್ನೇನು ಉಳಿಯುತ್ತದೆ? ಮುಂಡಕೋಪ ನಿಷತ್ತಿನ ಆರಂಭದಲ್ಲಿಯೇ ಒಂದು ಪ್ರಸಂಗ ಬರುತ್ತದೆ. ತೀಕ್ಷ್ಣ ಮತಿಯ ಒಬ್ಬ ಶಿಷ್ಯನು ಗುರುವಿನೆಡೆಗೆ ಹೋಗಿ, **ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ** – "ಯಾವುದನ್ನು ತಿಳಿದರೆ ಇದೆಲ್ಲವನ್ನೂ ತಿಳಿದಂತಾಗುತ್ತದೆ?" ಎಂದು ಪ್ರಶ್ನಿಸು ತ್ತಾನೆ. ಇದಕ್ಕೆ ಉತ್ತರವಾಗಿ ಗುರುವು ಪರಾವಿದ್ಯೆಯ ವಿಷಯ ವಾಗಿ ಶಿಷ್ಯನಿಗೆ ಉಪದೇಶಿಸುತ್ತಾನೆ. **ಪರಾವಿದ್ಯೆ** ಎಂದರೆ ಆತ್ಮಾ ಅಥವಾ ಪರಬ್ರಹ್ಮನಿಗೆ ಸಂಬಂಧಿಸಿದ ಅನುಭವಾತ್ಮಕ ಜ್ಞಾನ – **ಅಥ ಪರಾ ಯಯಾ ತದಕ್ಷರಂ ಅಧಿಗಮ್ಯತೇ** – "ಯಾವುದರಿಂದ ಆ ಅಕ್ಷರವು ಅರಿಯಲ್ಪಡುತ್ತದೊ ಅದು ಪರಾವಿದ್ಯೆ". ಶ್ರೀ ಶಂಕರಾಚಾರ್ಯರು **'ಅಕ್ಷರ'** ಎಂಬ ಪದಕ್ಕೆ ಮೂರು ಅರ್ಥಗಳನ್ನು ನೀಡುತ್ತಾರೆ : ತನ್ನ ಮೂಲರೂಪವನ್ನು ಬಿಡದಿರುವುದು (ಅಕ್ಷರ), ಕ್ಷೀಣವಾಗದಿರುವುದು (ಅಕ್ಷಯ) ಮತ್ತು ಯಾವ ದೋಷವೂ ಇಲ್ಲದಿರುವುದು (ಅಕ್ಷತ). **ಯಥಾ ಸೌಮ್ಯ ಏಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್** – "ಹೇಗೆ, ಒಂದು ಮಣ್ಣು ಮುದ್ದೆಯನ್ನು ಅರಿತರೆ ಮಣ್ಣಿನಿಂದಾದ ಎಲ್ಲವನ್ನು ಅರಿತಂತಾಗುವುದೊ," ಹಾಗೆಯೇ ಆ ಅಕ್ಷರವನ್ನು ಅರಿತರೆ ಇಡೀ ಜಗತ್ತನ್ನೇ ಅರಿತಂತಾಗುತ್ತದೆ. ಈ ಜಗತ್ತಿನಲ್ಲಿ ಎಲ್ಲವನ್ನೂ ಅರಿಯುವುದಕ್ಕಾಗುವುದಿಲ್ಲ. ನಾವು ಅರಿಯುತ್ತ ಹೋದಷ್ಟು ನಮ್ಮ ಅಜ್ಞಾನದ ಅರಿವು ಅಧಿಕವಾಗುತ್ತ ಹೋಗುತ್ತದೆ. ಈ ಅಜ್ಞಾನದ ಅರಿವೇ ಆತ್ಯಂತಿಕ ಜ್ಞಾನವನ್ನು ನೀಡುತ್ತದೆ. ಶತ್ರುಸೈನ್ಯದಲ್ಲಿ ಒಬ್ಬೊಬ್ಬರೇ ಸೈನಿಕನನ್ನು ನಾವು

ಕೊಲ್ಲುತ್ತ ಹೋದರೆ ನಡೆಯುವುದಿಲ್ಲ. ಹೇಗಾದರೂ ಮಾಡಿ ಸೇನಾಧಿಪತಿಯನ್ನು ಹಿಡಿದುಬಿಟ್ಟರೆ ಇಡೀ ಸೈನ್ಯವನ್ನು ಗೆದ್ದಂತಾಗುತ್ತದೆ. ಹಾಗೆಯೇ ಆ ಅಕ್ಷರವನ್ನು ಅರಿತರೆ ಎಲ್ಲವನ್ನೂ ಅರಿತಂತಾಗುತ್ತದೆ.

ಒಂಬತ್ತನೆಯ ಅಧ್ಯಾಯದ ಮೊದಲ ಮಂತ್ರದಲ್ಲಿ ಶ್ರೀಕೃಷ್ಣನು ಜ್ಞಾನವನ್ನು ಕುರಿತು ಪ್ರಸ್ತಾಪಿಸುತ್ತ **'ವಿಜ್ಞಾನಸಹಿತಂ'** ಎಂಬ ವಿಶೇಷಣವನ್ನು ಹೇಳುತ್ತಾನೆ– ಅಂದರೆ ಅನುಭವಾತ್ಮಕವಾದ ಜ್ಞಾನ ಎಂದು ಅರ್ಥ. ಈ ಜ್ಞಾನವನ್ನೇ ಬುದ್ಧನು **'ಬೋಧಿ'** ಎಂದು ಕರೆಯುತ್ತಾನೆ. ಅವನ ಪ್ರಕಾರ ಇನ್ನೆರಡು ಬಗೆಯ ಜ್ಞಾನಗಳಿವೆ: ಒಂದು ವಿಚಾರಪರವಾದುದು– ತತ್ತ್ವಶಾಸ್ತ್ರ ಮುಂತಾದ ಬೌದ್ಧಿಕ ಜ್ಞಾನ, ಇನ್ನೊಂದು ವೈಯಕ್ತಿಕ ಆಸೆ, ಆಕಾಂಕ್ಷೆಗಳನ್ನು ಅವಲಂಬಿಸಿದ ಅಭಿಪ್ರಾಯ ಅಥವಾ ಅಭಿಮತಗಳು. ಮೂಲಭೂತ ಅನುಭವಾತ್ಮಕ ಜ್ಞಾನವು ಮೊದಲು ವಿಚಾರದ ಮೂಲಕ ವಿಕೃತಗೊಳ್ಳುತ್ತದೆ, ಅನಂತರ ಆಸೆ, ಆಕಾಂಕ್ಷೆಗಳ ಮೂಲಕ ಮತ್ತಷ್ಟು ವಿಕೃತಗೊಳ್ಳುತ್ತದೆ. ಮೊದಲು ನಮ್ಮ ಆಸೆ–ಆಕಾಂಕ್ಷೆಗಳಿಂದ ದೂರವಾಗಬೇಕು, ಮುಂದೆ ನಮ್ಮ ವಿಚಾರವನ್ನೂ ಮೀರಿಹೋಗಬೇಕು ಎಂಬುದನ್ನು ಇದು ಸೂಚಿಸುತ್ತದೆ.

ನಮ್ಮ ಮಿದುಳು ಬೆಳೆದಂತೆಲ್ಲ ನಮ್ಮ ಸತ್ಯದ ಕಲ್ಪನೆಯೂ ಉನ್ನತೋನ್ನತವಾಗುತ್ತದೆ ಎಂದು ನರವಿಜ್ಞಾನಿಗಳು ಹೇಳುತ್ತಾರೆ. ತುಂಬ ಹಿಂದುಳಿದ ಜನರಲ್ಲಿ ಭಾವೋದ್ವೇಗಗಳಿಗೆ ಸಂಬಂಧಿಸಿದ ಮಿದುಳಿನ ಕೇಂದ್ರವು ತುಂಬ ಪ್ರಬಲವಾಗಿರುತ್ತದೆ. ಅವರಲ್ಲಿ ವಿಚಾರಕ್ಕೆ ಸಂಬಂಧಿಸಿದ ಮಿದುಳಿನ ಭಾಗವು ಇನ್ನೂ ಅಂಕುರಾವಸ್ಥೆಯಲ್ಲಿರುತ್ತದೆ. ಆದ್ದರಿಂದ ಅವರು ವಿವಿಧ ಭಾವೋದ್ವೇಗಗಳಿಂದ ಕೂಡಿದ, ಭಯವನ್ನು ಹುಟ್ಟಿಸುವ ಸರ್ವಾಧಿಕಾರಿಯಾದ ದೇವರ ಕಲ್ಪನೆಯನ್ನು ಹೊಂದಿರುತ್ತಾರೆ. ಸಂಸ್ಕೃತಿಯು ಮುಂದುವರಿದಂತೆಲ್ಲ ಮಿದುಳೂ ಬೆಳೆಯುತ್ತ ಹೋಗುತ್ತದೆ, ಆಗ ದಯಾಮಯನಾದ ದೇವರ ಕಲ್ಪನೆ ಪ್ರಚಾರಕ್ಕೆ ಬರುತ್ತದೆ. ವೈಚಾರಿಕ ಮಿದುಳು ಹೆಚ್ಚು ಹೆಚ್ಚು ಬೆಳೆದಂತೆಲ್ಲ, ದೇವರ ಬಗೆಗಿನ ನಮ್ಮ ಕಲ್ಪನೆ ಇನ್ನೂ ಸೂಕ್ಷ್ಮವಾಗುತ್ತ, ವಾಙ್ಮನಾತೀತವಾದ, ಸರ್ವಾತೀತವಾದ, ಸರ್ವಾತ್ಮವಾದ, ನಿರ್ಗುಣ–ನಿರಾಕಾರ ಸತ್ಯದ ಆತ್ಯಂತಿಕ ಹಂತವನ್ನು ಮುಟ್ಟುತ್ತದೆ. ಇದು ಮಿದುಳಿನ ಹಂತವನ್ನೂ ಮೀರಿಹೋಗುವ ಅನುಭವಾತ್ಮಕ ಜ್ಞಾನ – **'ಸವಿಜ್ಞಾನ'**.

ಶ್ರೀರಾಮಕೃಷ್ಣರೂ **'ವಿಜ್ಞಾನ'**ವನ್ನು ಕುರಿತಾಗಿ ಹೇಳುತ್ತಾರೆ. ಅವರ ಪ್ರಕಾರ 'ನೇತಿ ನೇತಿ' ಮಾರ್ಗವನ್ನು ಅನುಸರಿಸಿ ಆತ್ಮಾನುಭೂತಿಯನ್ನು ಪಡೆಯುವುದು **'ಜ್ಞಾನ'**. ಅನಂತರ ಎಲ್ಲವನ್ನೂ ಭಗವನ್ಮಯವಾಗಿ ಕಾಣುವುದು **'ವಿಜ್ಞಾನ'**. ಇದನ್ನು ಅವರು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ. ಒಬ್ಬನು ಒಂದೊಂದೇ ಮೆಟ್ಟಲನ್ನು ಕೆಳಗೆ ಬಿಟ್ಟು ಮಹಡಿಗೆ ಹೋಗುತ್ತಾನೆ. ಅನಂತರ ಮಹಡಿಯು ಯಾವ ಇಟ್ಟಿಗೆ ಗಾರೆ ಮುಂತಾದವುಗಳ ಮೂಲಕ ತಯಾರಾಗಿದೆಯೋ ಅವುಗಳಿಂದಲೇ ಮೆಟ್ಟಲುಗಳೂ ತಯಾರಾಗಿವೆ ಎಂಬುದನ್ನು ಅವನು ಅರಿಯುತ್ತಾನೆ. ಯಾವುದನ್ನು 'ಇದಲ್ಲ ಇದಲ್ಲ' ಎಂದು ಹಿಂದೆ ಬಿಟ್ಟಿದ್ದನೊ ಅದೂ ಆತ್ಮಸ್ವರೂಪವಾಗಿಯೇ ಅವನಿಗೆ ಕಂಡುಬರುತ್ತದೆ. ಆಗ ಅವನ ಅನುಭವಕ್ಕೆ ಬರುತ್ತದೆ :

ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ॥
(೭ : ೭)

"ನನಗಿಂತ (ಭಗವಂತನಿಗಿಂತ) ಶ್ರೇಷ್ಠವಾದ ವಸ್ತು ಬೇರೆ ಯಾವುದೂ ಇಲ್ಲ. ದಾರದಲ್ಲಿ ಮಣಿಗಳು ಪೋಣಿಸಲ್ಪಟ್ಟ ಹಾಗೆ ಇವೆಲ್ಲವೂ ನನ್ನಲ್ಲಿ ಪೋಣಿಸಲ್ಪಟ್ಟಿವೆ."


ಅಂದರೆ ಎಲ್ಲ ವಸ್ತುಗಳ ಹಿಂದೆಯೂ ಭಗವಂತನೇ ಓತಪ್ರೋತವಾಗಿರುವುದನ್ನು ಅವನು ಕಾಣುತ್ತಾನೆ. ಸ್ವಾಮಿ ಅದ್ಭುತಾನಂದರು ಒಂದು ಸುಂದರವಾದ ಉದಾಹರಣೆಯ ಮೂಲಕ ಈ ವಿಜ್ಞಾನಾವಸ್ಥೆಯನ್ನು ವಿವರಿಸುತ್ತಾರೆ. ಒಬ್ಬ ಯಜಮಾನನು ಒಂದು ಕೋಸುಗೆಡ್ಡೆಯನ್ನು ಮನೆಗೆ ತಂದು, 'ಇದರಿಂದ ಒಂದು ಪಲ್ಯ ಮಾಡು' ಎಂದು ಅಡುಗೆಯವನಿಗೆ ತಿಳಿಸಿದನು. ಅಡುಗೆಯವನಿಗೆ ಕೋಸು ಹೊಸತು. ಅವನು ಅದರ ಸಿಪ್ಪೆ ಬಿಡಿಸುತ್ತ ಹೋದನು, ಅವನಿಗೆ ಕೋಸುಗೆಡ್ಡೆಯೇ ಸಿಕ್ಕಲಿಲ್ಲ. ಯಜಮಾನನಿಗೆ ತಿಳಿಸಲಾಗಿ, ಅವನು ಬಂದು ಹೇಳಿದನು, "ನೀನು ಯಾವುದನ್ನು ಕೋಸುಗೆಡ್ಡೆಯಲ್ಲ ಎಂದು ತ್ಯಜಿಸಿದೆಯೋ, ಅದೇ ಕೋಸು. ಅದರಿಂದಲೇ ನಾನು ಪಲ್ಯ ಮಾಡಿ ತೋರಿಸುತ್ತೇನೆ, ನೋಡು" ಎಂದು.

ಹೀಗೆ ವ್ಯಕ್ತಿಯು ಇಂದ್ರಿಯ ಜ್ಞಾನದಿಂದ ಪ್ರಾರಂಭಿಸಿ, ವಿಚಾರಪ್ರಪಂಚದಲ್ಲಿ ವಿಹರಿಸಿ, ಕೊನೆಯಲ್ಲಿ ಆಧ್ಯಾತ್ಮಿಕ ವಿಜ್ಞಾನಿಯಾಗುತ್ತಾನೆ. *

ಸ್ವಾಮಿ ವಿವೇಕಾನಂದರ ಹೃದಯ

ಸ್ವಾಮೀಜಿಯವರಿಗೆ ಇತರರ ನೋವು–ವೇದನೆಗಳನ್ನು ಸಹಿಸಲಾಗುತ್ತಿರಲಿಲ್ಲ. ಒಮ್ಮೆ ಮಧ್ಯಾಹ್ನ ಊಟದ ಸಮಯದಲ್ಲಿ ಸ್ವಾಮೀಜಿ ತಮ್ಮ ಕೋಣೆಯಲ್ಲಿದ್ದರು. ಬಹಳಷ್ಟು ಬಡಜನರು ಕಾತರರಾಗಿ ಅವರ ಬಾಗಿಲ ಹತ್ತಿರ ಕಾಯುತ್ತ ನಿಂತಿದ್ದರು. ಅವರು ಕಾಯಲು ಕಾರಣವೇನೆಂದು ಕೇಳಿದಾಗ ಗೊತ್ತಾಯಿತು, ಅವರು ಬೇಯಿಸಿದ ಅನ್ನದ ಗಂಜಿಯನ್ನು ಪಡೆಯಲು ಕಾಯುತ್ತಿದ್ದಾರೆಂದು. ಅವರ ಬಡತನವನ್ನು ಕಂಡು ಸ್ವಾಮೀಜಿಯವರಿಗೆ ಅಪಾರ ವ್ಯಥೆಯಾಯಿತು. ಅವರು ಒಡನೆಯೇ ತಮ್ಮ ಅಂದಿನ ಊಟವನ್ನು ಅವರಿಗೇ ಹಂಚಿಕೊಟ್ಟರು.

ಸ್ವಾಮಿ ಚೇತನಾನಂದರ 'Various Facts of Swami Vivekananda' ಲೇಖನ, 'Samvit' ಪತ್ರಿಕೆ ಅನು: ಮಾತಾ ತ್ಯಾಗಮಯೀ



ಜೀವನ ಮಕರಂದ

('ಬದುಕಲು ಕಲಿಯಿರಿ' ಪುಸ್ತಕದ ಸಂಗ್ರಹ)

ಮೂಲ ಲೇಖಕರು : ಸ್ವಾಮಿ ಜಗದಾತ್ಮಾನಂದ ಸಂಗ್ರಹ : ಡಾ. ಜಿ.ವಿ. ಕುಲಕರ್ಣಿ

ಅಧ್ಯಾಯ ಐದು

ಅದ್ಭುತ(ಘಟನೆ)ಗಳು ಸಾರುವ ಸತ್ಯ

ಮೊದಲು ಜನನವನರಿಯೆ
ಮರಣದ ಹದನ ಕಡೆಯಲಿ ತಿಳಿಯೆ
ಮಧ್ಯದಲಿ ನಾ ನೆರೆನಿಪುಣನೆಂಬುದು ಬಳಿಕ ನಗೆಗೇಡು!

–ಕನಕದಾಸ

"ನಿನಗೆ ಗೊತ್ತಿಲ್ಲದ ವಿಚಾರವನ್ನು ಗೊತ್ತಿಲ್ಲ ಎಂದು ನಮ್ರನಾಗಿ ಒಪ್ಪಿಕೊ. ಅದೇ ನಿನ್ನ ಜ್ಞಾನಕಿಂಡಿಯನ್ನು ತೆರೆಯಬಲ್ಲದು."

–ಕನ್‌ಫ್ಯೂಶಿಯಸ್ (ಚೀನೀ ತತ್ತ್ವಜ್ಞಾನಿ)

ವೈಜ್ಞಾನಿಕ ಅನ್ವೇಷಣೆಗಳಿಗೆ ತಿಳಿಯದ ಅನೇಕ ಸಂಗತಿಗಳು ಜೀವನದಲ್ಲಿ ನಡೆಯುತ್ತವೆ. ದೇಹಕ್ಕಿಂತ ಭಿನ್ನವಾದ ಜೀವತತ್ತ್ವ ಇದೆ ಎಂಬ ಮಾತನ್ನು ವಿಜ್ಞಾನಿಗಳು ಒಪ್ಪುವುದಿಲ್ಲ. 'ಎಲುಬು ರಕ್ತ ಮಾಂಸ ನರವ್ಯೂಹಗಳಿಂದ ಕೂಡಿದ ನಮ್ಮ ಈ ಸ್ಥೂಲ ಶರೀರದಲ್ಲಿ ಅತ್ಯಂತ ಸೂಕ್ಷ್ಮವಾದ ಇನ್ನೊಂದು ಶರೀರವಿದೆ' ಎಂಬುದನ್ನು ನಮ್ಮ ದೇಶದಲ್ಲಿ ಪುರಾತನರು ತಿಳಿದುಕೊಂಡಿದ್ದರು. ಅದನ್ನು ಅವರು 'ಸೂಕ್ಷ್ಮಶರೀರ'ವೆಂದು ಕರೆದರು. ಇದಕ್ಕೆ 'ಲಿಂಗಶರೀರ'ವೆಂಬ ಹೆಸರೂ ಇದೆ. ನಮ್ಮ ಸ್ಥೂಲದೇಹ ಅಳಿದರೂ ಈ ಸೂಕ್ಷ್ಮದೇಹಕ್ಕೆ ನಾಶವಿಲ್ಲ.

ಕ್ರೈಸ್ತಧರ್ಮ, ಮಹಮ್ಮದೀಯ ಧರ್ಮಗಳನ್ನು ಅನುಸರಿಸುವವರು ಪುನರ್ಜನ್ಮ ಹಾಗೂ ಕರ್ಮಸಿದ್ಧಾಂತಗಳಲ್ಲಿ ವಿಶ್ವಾಸ ಇಡುವುದಿಲ್ಲ. ಬ್ರೆಜಿಲ್‌ನಲ್ಲಿ ಹಳ್ಳಿಯ ಬಡ ರೈತನೊಬ್ಬ ಮಹಾ ಸರ್ಜನ್ ಆಗಿ ಪರಿವರ್ತನೆಗೊಂಡ ಘಟನೆಯಿದೆ. ಆ ರೈತ ಯಾವುದೇ ವೈದ್ಯಕೀಯ ವ್ಯಾಸಂಗ ಮಾಡಿದವನಲ್ಲ, ಯಾವುದೇ ತರಬೇತಿ ಪಡೆದವನಲ್ಲ. ಅವನು ಶಸ್ತ್ರಕ್ರಿಯೆಗೆ ಬಳಸುತ್ತಿದ್ದ ಉಪಕರಣ ಒಂದು ಪುಟ್ಟ ಚಾಕು. ರೋಗಿಗೆ ಎಚ್ಚರ ತಪ್ಪಿಸದೆ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮಾಡುತ್ತಿದ್ದ. ಜೊತೆಗೆ ಔಷಧ ಸೂಚಿಸಿ ಚೀಟಿಯನ್ನೂ ಸರಸರನೆ ಬರೆದು ಕೊಡುತ್ತಿದ್ದ. ಪ್ರತಿದಿನ ಸಾವಿರಾರು ಜನ ಇವನಲ್ಲಿ ಚಿಕಿತ್ಸೆ ಪಡೆಯಲು ಬರುತ್ತಿದ್ದರಂತೆ. ಇವನ ಶಸ್ತ್ರಕ್ರಿಯೆಯಿಂದ ಕುರುಡರು ಕಣ್ಣು ಪಡೆದರು, ಕುಂಟರು ಊರುಗೋಲು ಎಸೆದು ನಡೆದಾಡಿದರು. ಪೌಲೋ ವಿಶ್ವವಿದ್ಯಾಲಯದ ಮತ್ತು ಮೆಡಿಕಲ್ ಅಕಾಡೆಮಿಯ ಸದಸ್ಯರು ಇವನ ಶಸ್ತ್ರಚಿಕಿತ್ಸೆಯ ವಿಧಾನವನ್ನು ಪ್ರತ್ಯಕ್ಷ ಪರಿಶೀಲಿಸಿದರು, ಮೂಕವಿಸ್ಮಿತರಾದರು. ಅವನ ಹೆಸರು ಜಿ. ಅರ್ಹಿಗೋ. ಅವನು ಚಿಕಿತ್ಸಾಲಯ ಸೇರಿದಾಗ ಡಾ। ಫ್ರಿಟ್ಸ್ ಎಂಬ ಸರ್ಜನ್ನನ ವ್ಯಕ್ತಿತ್ವ ಅವನಲ್ಲಿ ಆವಾಹನೆಯಾಗುತ್ತಿತ್ತು. ಜರ್ಮನ್ ಭಾಷೆ ಅರಿಯದ ಇವನು ಚಿಕಿತ್ಸೆಯಲ್ಲಿ ತೊಡಗಿದಾಗ ಪೋರ್ಚುಗೀಸ್ ಮಿಶ್ರಿತ ಜರ್ಮನ್ ಭಾಷೆಯಲ್ಲಿ ಸಂಭಾಷಣೆ ನಡೆಸುತ್ತಿದ್ದನಂತೆ. ಕ್ರೈಸ್ತ ಧರ್ಮಗುರುಗಳು ಇವನನ್ನು ವಿರೋಧಿಸಿದರು. ಕೊನೆಗೂ ಅವನಿಗೆ ಜೈಲುವಾಸವಾಯಿತು. ಅವನ ಅಭಿಮಾನಿಗಳು ಎಂಟು ಲಕ್ಷ ನಲವತ್ತು ಸಾವಿರ ಡಾಲರ್ ನಿಧಿ ಸಂಗ್ರಹಿಸಿ ಅವನಿಗೆ ಕಳಿಸಿದರು. ಆ ಹಣವನ್ನು ಅವನು ಹಿಂತಿರುಗಿಸಿದ. ರೋಗಿಗಳಿಂದ ಅವನು ಚಿಕ್ಕಾಸೂ ಬಯಸಿರಲಿಲ್ಲ. ೧೯೫೫ ರಿಂದ ೧೯೭೧ ರವರೆಗೆ ಅವನು ಹಲವಾರು ಶಸ್ತ್ರಚಿಕಿತ್ಸೆಗಳನ್ನು ಮಾಡಿದ. ೧೯೭೧ರ ಜನವರಿಯಲ್ಲಿ ರಸ್ತೆ ಅಪಘಾತದಲ್ಲಿ ಅವನು ಮಡಿದ. ಅವನ ಅಭಿಮಾನಿಗಳು ಸಹಸ್ರಸಹಸ್ರ ಸಂಖ್ಯೆಯಲ್ಲಿ ಅವನ ಅಂತ್ಯಯಾತ್ರೆಯಲ್ಲಿ ಭಾಗವಹಿಸುತ್ತ ಅಶ್ರುತರ್ಪಣ ಸಲ್ಲಿಸಿದರು. ಅವನ ಬಗ್ಗೆ ಸಚಿತ್ರ ಲೇಖನ 'ರೀಡರ್ಸ್ ಡೈಜೆಸ್ಟ್' (ಮೇ ೧೯೭೫ ರಲ್ಲಿ) ಪ್ರಕಟವಾಗಿತ್ತು. ಅವನ ಮೈಯಲ್ಲಿ ಆವಾಹಿತನಾಗಿದ್ದ ವ್ಯಕ್ತಿ ಯಾರೆಂದರೆ, ಎರಡನೆಯ ಮಹಾಯುದ್ಧದಲ್ಲಿ ಸರ್ಜನ್ ಆಗಿ ಸೇವೆ ಸಲ್ಲಿಸಬೇಕೆಂದು ಬಯಸಿದ ಡಾ। ಫ್ರಿಟ್ಸ್. ತನ್ನ ಅಕಾಲಿಕ ಮರಣದಿಂದ ಅತೃಪ್ತನಾದ ಅವನು ತನ್ನ ಆಸೆ ಈಡೇರಿಸಿಕೊಳ್ಳಲು ರೈತ ಅರ್ಹಿಗೋನ ದೇಹವನ್ನು ಬಳಸುತ್ತಿದ್ದನಂತೆ.

'ಹುಟ್ಟುವಾಗ ವ್ಯಕ್ತಿ ಎಲ್ಲಿಂದ ಬಂದ? ಸತ್ತಮೇಲೆ ಎಲ್ಲಿಗೆ ಹೋಗುತ್ತಾನೆ?' ಮರಣಾನಂತರ ಜೀವನ, ಜನ್ಮಾಂತರ ಮತ್ತು ಕರ್ಮವಾದ– ಇವುಗಳ ಅಡಿಪಾಯದ ಮೇಲೆ ಹಿಂದೂ, ಬೌದ್ಧ ಹಾಗೂ ಜೈನಧರ್ಮಗಳು ತಮ್ಮ ಸೌಧವನ್ನು ಕಟ್ಟಿವೆ. ಪಶ್ಚಿಮ ದೇಶದ ಧರ್ಮಗಳಲ್ಲಿ ಕರ್ಮ, ಜನ್ಮಾಂತರವಾದಗಳನ್ನು ಒಪ್ಪದಿದ್ದರೂ, ಮರಣಾನಂತರ ಜೀವಾತ್ಮನು ಸ್ವರ್ಗ ಅಥವಾ ನರಕದಲ್ಲಿ ವಾಸಮಾಡುತ್ತಾನೆ ಎಂಬ ಕಲ್ಪನೆಗಳಿವೆ.

ಕೆಲವು ವರ್ಷಗಳಿಂದೀಚೆ ಮನೋವಿಜ್ಞಾನಿಗಳೂ, ಮನೋರೋಗತಜ್ಞರೂ ಅತೀಂದ್ರಿಯ ಅನುಭವಗಳ ಬಗ್ಗೆ ಅಮೇರಿಕಾ ಮತ್ತು ರಶಿಯಾ ದೇಶಗಳಲ್ಲಿ ಸಾಕಷ್ಟು ಸಂಶೋಧನೆ ನಡೆಸಿದರು. ಸ್ವಿಟ್ಜರ್ಲೆಂಡಿನ ಮಹಿಳಾ ವೈದ್ಯೆ ಡಾ। ಎಲಿಜಬೆತ್ ಕುಬ್ಲೇರ್

ರೋಸ್ ಅವರು ಸಾವನ್ನಪ್ಪುವ ಮೊದಲು ರೋಗಿಗಳ ಮಾನಸಿಕ ಸ್ಥಿತಿಗತಿಗಳ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದಾರೆ. 'ಸಾವಿನ ಆಚೆಗೆ ಜೀವನವಿದೆ' ಎಂದು ಢಾಣಾಡಂಗುರವಾಗಿ ಹೇಳುತ್ತಾರೆ. ಅವರು ಹಲವಾರು ಸಂಗತಿಗಳನ್ನು ದಾಖಲಿಸಿದ್ದಾರೆ.

ಅಮೆರಿಕದ ಇಂಡಿಯಾನಾ ಆಸ್ಪತ್ರೆಯಲ್ಲಿ ೪೦ ವರ್ಷದ ಹೆಂಗಸೊಬ್ಬಳು ತುರ್ತು ಶಸ್ತ್ರಚಿಕಿತ್ಸೆಗೆ ಒಳಪಟ್ಟಾಗ ಅವಳು ಅಪೂರ್ವ ಅನುಭವ ಪಡೆದಳಂತೆ. ಅವಳು ದೇಹದ ಹೊರಗೆ ಬಂದು ಆ ಕೋಣೆಯ ಮೇಲ್ಭಾಗದಲ್ಲಿ, ಆಕಾಶದಲ್ಲಿ ಮೋಡವು ತೇಲುವಂತೆ ತೇಲುತ್ತ, ಮಂಚದಲ್ಲಿ ಮಲಗಿದ್ದ ತನ್ನ ಶರೀರವನ್ನು ಕಂಡಳಂತೆ. ಅಪೂರ್ವ ಶಾಂತಿ ಹಾಗೂ ಮುಕ್ತತೆಯ ಅನುಭವ ವನ್ನು ಪಡೆದಳಂತೆ. ಅವಳ ದೇಹದ ಶಸ್ತ್ರಕ್ರಿಯೆಯಲ್ಲಿ ತೊಡಗಿ ಹೆಣಗಾಡುತ್ತಿದ್ದ ಡಾಕ್ಟರರ ಚಟುವಟಿಕೆಗಳನ್ನು ಆಕೆ ಚೆನ್ನಾಗಿ ಪರೀಕ್ಷಿಸಬಲ್ಲವಳಾಗಿದ್ದಳು. ಅವರು ಆಡುವ ಮಾತುಗಳನ್ನು ಅವಳು ಕೇಳುತ್ತಿದ್ದಳು. ಒಬ್ಬ ಡಾಕ್ಟರ್ ನುಡಿದ ಹಾಸ್ಯದ ಚಟಾಕಿ ಯನ್ನೂ ಆಲಿಸಿದಳು. ವೈದ್ಯರೆಲ್ಲ ಸೇರಿ ಅವಳು ಸತ್ತಿದ್ದಾಳೆ ಎಂಬ ಹೇಳಿಕೆ ಇತ್ತರು. ಮೂರು ಗಂಟೆಗಳ ಬಳಿಕ ಅವಳು ತನ್ನ ದೇಹವನ್ನು ಪ್ರವೇಶಿಸಿದಳು. ಎಲ್ಲರಿಗೂ ಅಚ್ಚರಿ. ಮುಂದೆ ಅವಳು ಹದಿನೆಂಟು ತಿಂಗಳು ಬದುಕಿದ್ದಳು.

ಇಂತಹ ನೂರಾರು ಘಟನೆಗಳನ್ನು ಅಧ್ಯಯನ ಮಾಡಿದ ಡಾ। ಎಲಿಜಬೆತ್, 'ತಾನು ಮತಾಂಧಳಲ್ಲದ ಧಾರ್ಮಿಕಳು' ಎನ್ನುತ್ತಾಳೆ.

ಬುದ್ಧಿಭ್ರಮಣೆಯಾದ ವ್ಯಕ್ತಿಗಳು ಮಾತ್ರ ಅತೀಂದ್ರಿಯ ಅನುಭವಗಳನ್ನು ಪಡೆಯಲು ಸಾಧ್ಯ ಎಂಬ ಭಾವನೆ ಹಿಂದೆ ಇತ್ತು. ಕೆಲವು ಮಂದಿ ಮನೋವಿಜ್ಞಾನಿಗಳು ಅಂಥ ಭಾವನೆ ತಪ್ಪು ಎಂದು ಈಗ ಒಪ್ಪಿಕೊಂಡಿದ್ದಾರೆ. ಅಮೆರಿಕದ ಟ್ರಾನ್ಸ್ ಪರ್ಸನಲ್ ಸೈಕಾಲಜಿ ವಿಭಾಗದ ಸಂಶೋಧಕರು ತಮ್ಮ ಪತ್ರಿಕೆಗಳಲ್ಲಿ ಸಾಕಷ್ಟು ಮಾಹಿತಿ ನೀಡಿದ್ದಾರೆ. "ನಾವು ಯಾವು ದನ್ನು ಜೀವತತ್ತ್ವ ಅಥವಾ ಜೀವಾತ್ಮ ಎಂದು ಕರೆಯು ತ್ತೇವೋ, ಅದೊಂದು ನಿರ್ದಿಷ್ಟವಾದ ಶಕ್ತಿ ಮಾತ್ರವಲ್ಲ, ದೇಹದ ಅಳಿವಿನೊಂದಿಗೆ ನಾಶವಾಗದ, 'ಆತ್ಮ' ಎಂದು ಹಿಂದಿನ ಕಾಲದ ಜನರು ಕರೆಯುತ್ತಲಿದ್ದ ತಥ್ಯ ಎಂದು ತಿಳಿಯುವ ಕಾಲ ದೂರವಿಲ್ಲ" ಎಂಬುದು ಅವರ ಅಭಿಪ್ರಾಯವಾಗಿದೆ.

ದೇಹದಿಂದ ಮನಸ್ಸು ಬೇರೆಯಾಗಿರುವುದನ್ನು ತಜ್ಞರು ಕಾಣುತ್ತಿದ್ದಾರೆ. ಕೆಂಟುಕಿಯ ಆಷ್ಟನ್ ಪ್ರಯೋಗಶಾಲೆಯ ಟ್ವೆಮ್ಲೋ ಹಲವು ಪ್ರಯೋಗಗಳ ಬಳಿಕ 'ಆತ್ಮ'ದ ಅಸ್ತಿತ್ವದ ಬಗ್ಗೆ ನಿರ್ಭೀತಿಯಿಂದ ಮಾತನಾಡತೊಡಗಿದ್ದಾರೆ. ಜನ್ಮಾಂತರದ ನೆನಪುಗಳ ಹಲವಾರು ಉದಾಹರಣೆಗಳು ಇಲ್ಲಿವೆ:

ಅಂತೋನಿ ಕ್ರ್ಯಾನ್ಸಿ ಇಟಲಿಯ ಮಿಲಾನ್ ನಗರವಾಸಿ. ಆಗರ್ಭ ಶ್ರೀಮಂತ. ಹೆಂಡತಿ ಹಾಗೂ ಮಗಳೊಂದಿಗೆ ಆತ ಸುಖವಾಗಿ ಬಾಳುತ್ತಿದ್ದ. ಅವನ ಹನ್ನೆರಡು ವರ್ಷದ ಮಗಳನ್ನು ದುಷ್ಟರು ಅಪಹರಿಸಿದರು. ಕೊನೆಗೆ ದೊರೆತದ್ದು ಅವರ ಮಗಳಲ್ಲ, ಮಗಳ ಶವ. ಜೀವನದಲ್ಲಿ ಜುಗುಪ್ಸೆ ಉಂಟಾಗಿ ಅವರು ಮನಃಶಾಂತಿ ಪಡೆಯಲು ಭಾರತಕ್ಕೆ ಬಂದರು. ಶ್ರೀ ಸತ್ಯಸಾಯಿಬಾಬಾ ಅವರಿಂದ ಸಾಂತ್ವನ ಪಡೆದರು. "ನಿಮ್ಮ ಮಗಳು ಹಿಂದಿನ ಜನ್ಮದ ಕರ್ಮದಿಂದಾಗಿ ಅಪಮೃತ್ಯುವಿಗೆ ಈಡಾದಳು. ಮತ್ತೆ ಅವಳು ನಿಮ್ಮ ಮನೆಯಲ್ಲಿ ಹುಟ್ಟಿ ಬರಲಿದ್ದಾಳೆ" ಎಂದು ಬಾಬಾ ಆಶ್ವಾಸನೆ ನೀಡಿದರಂತೆ. ನಂತರ ಅವರಿಗೆ ಎರಡನೆಯ ಮಗಳು ಹುಟ್ಟಿದಳು. ಅವಳು ನೋಡುವುದಕ್ಕೆ ಮೊದಲನೆಯ ಮಗಳಂತೆಯೇ ಇದ್ದಳಂತೆ.

ಮುಂಬೈಯ ಸುಪ್ತಿಶಾಸ್ತ್ರಜ್ಞ ಪ್ರೊ. ಜೆ.ವಿ.ರಾವ್ ಅವರು ವೇದಿಕೆಯ ಮೇಲೆ ಪ್ರದರ್ಶನ ನೀಡುತ್ತಿದ್ದರು. ಒಮ್ಮೆ ಅವರು ಎಂಟು ವರ್ಷದ ಕೆಥೊಲಿಕ್ ಸಂಪ್ರದಾಯದ ತರುಣಿಯನ್ನು ವಶ್ಯಸುಪ್ತಿಗೆ ಒಳಪಡಿಸಿದರಂತೆ. ಅವಳಿಗೆ ಪೂರ್ವಜನ್ಮದ ಸ್ಮರಣೆಯಾಗಿ ಯಾವುದೋ ಭಾಷೆಯಲ್ಲಿ ಮಾತಾಡತೊಡಗಿದಳಂತೆ. ಮುಂದಿನ ಸಾಲಿನಲ್ಲಿ ಕುಳಿತಿದ್ದ ಪಾದ್ರಿಯೊಬ್ಬರು ವೇದಿಕೆಗೆ ಬಂದು, ಅವಳು ಆಡುತ್ತಿರುವ ಭಾಷೆ ಇಟಾಲಿಯನ್ ಎಂದರಂತೆ. ಹಿಂದಿನ ಜನ್ಮದಲ್ಲಿ ತಾನು ಗಂಡಾಗಿದ್ದ ವಿಷಯ, ಇಟೆಲಿಯಲ್ಲಿ ಬಸ್ ಅಪಘಾತದಲ್ಲಿ ಮರಣ ಹೊಂದಿದ ವಿಷಯ ಇವೆಲ್ಲವನ್ನೂ ಆಕೆ ತಿಳಿಸಿದಳು. ಅವಳು ಪುನಃ ಮೊದಲಿನ ಸ್ಥಿತಿಗೆ ಬಂದಾಗ ಅವಳು ಇಟಾಲಿ ಯನ್ ಅರಿತಿಲ್ಲವೆಂದೂ, ಭಾರತವನ್ನು ಬಿಟ್ಟು ಹೊರ ದೇಶಕ್ಕೆ ಹೋಗಿಲ್ಲವೆಂದೂ ತಿಳಿಯಿತು. ('ಮಿರರ್' ಪತ್ರಿಕೆಯ ೧೯೮೩ರ ಸೆಪ್ಟೆಂಬರ್ ಸಂಚಿಕೆಯಲ್ಲಿ ಇದರ ಬಗ್ಗೆ ಲೇಖನ ಪ್ರಕಟವಾಗಿದೆ.)

ಇದಕ್ಕಿಂತ ರೋಚಕವಾದ ಕತೆ ಮೃದುಲಾ ಶರ್ಮಾ ಎಂಬವಳದು. ಮೃದುಲಾ ಶರ್ಮಾ ಎಂಬ ಗೃಹಿಣಿ ಎಂ.ಎ. ಪದವೀಧರೆ. ಈಕೆ ಮೀರತ್ ವಿಶ್ವವಿದ್ಯಾಲಯದಿಂದ ರಾಜ್ಯಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾಳೆ. ಹಿಂದಿನ ಜನ್ಮದಲ್ಲಿ ಅವಳು ಮುನ್ನು ಆಗಿದ್ದಳು. ಆಗ ಬನಾರಸ್ ವಿಶ್ವವಿದ್ಯಾಲಯದಿಂದ ಹಿಂದಿ ಎಂ.ಎ. ಪಾಸಾಗಿದ್ದಳು. ಎರಡು ಡಿಗ್ರಿಗಳ ಮಧ್ಯದ ಅಂತರ ಒಂದು ಜೀವನ ಮಾತ್ರ! ೧೯೪೫ ರಲ್ಲಿ ಅವಳು ಡೆಹರಾಡೂನ್‌ನಲ್ಲಿ ತೀರಿಕೊಂಡಿದ್ದಳು. ಅದಕ್ಕೆ ದಾಖಲೆ ಇದೆ. ನಾಲ್ಕು ವರ್ಷಗಳ ನಂತರ, ೧೯೪೯ರಲ್ಲಿ ನಾಸಿಕದಲ್ಲಿ ಜನಿಸಿದಳು. ಹಿಂದಿನ ಜನ್ಮದ ತಾಯಿ ಸತ್ಯವತಿ ಶೆಟ್ಟಿ. ಆ ದಿನಗಳಲ್ಲಿ ಸಾಮಾಜಿಕ ಕಾರ್ಯಕರ್ತೆಯಾಗಿದ್ದಳು. ಈ ಜನ್ಮದ ತಾಯಿ ಶಾಂತಾ ಶಾಸ್ತ್ರಿ. ಇವಳು ಬ್ರಾಹ್ಮಣಳು. ಹಿಂದಿನ ತಾಯಿ ಬನಿಯಾ ಜಾತಿಯವಳು. ಮೃದುಲಾ ಎರಡು ವರ್ಷದ ಕೂಸು ಇರುವಾಗಲೇ ಅವಳಿಗೆ ಪೂರ್ವಜನ್ಮದ ಸ್ಮರಣೆ ಪ್ರಾರಂಭ ವಾಗಿತ್ತಂತೆ. ಪತಿಯ ಅಗಲಿಕೆಯ ತರುವಾಯ ಶಾಂತಾ ಶಾಸ್ತ್ರಿ ದೈವಯೋಗವೋ ಎಂಬಂತೆ ಡೆಹರಾಡೂನಿನ ಒಂದು ಶಾಲೆಯಲ್ಲಿ ಅಧ್ಯಾಪಕಿಯಾಗಿ ಸೇರಿ ಅಲ್ಲಿಯೇ ಮಗಳೊಂದಿಗೆ ವಾಸಿಸತೊಡಗಿದಳು.

ಒಂದು ದಿನ ಡೆಹರಾಡೂನಿನಲ್ಲಿ ನಡೆದ ಒಂದು ಧಾರ್ಮಿಕ ಸಭೆಗೆ ತಾಯಿಯ ಜೊತೆಗೆ ಮೃದುಲಾ ಹೋಗಿದ್ದಳು. ಆ ಸಭೆಯಲ್ಲಿ ಮೂಲೆಯಲ್ಲಿ ಕುಳಿತಿದ್ದ ವಯಸ್ಸಾದ ಮಹಿಳೆಯನ್ನು ಗುರುತಿಸಿದಳು. ಆ ವೃದ್ಧೆಯ ಬಳಿಯಲ್ಲಿ ಕುಳಿತ ಇನ್ನೊಬ್ಬ ಹೆಂಗಸಿಗೆ ಹೇಳಿದಳು, 'ನೀನು ನನ್ನ ತಂಗಿ'. ಅವಳಿಗೆ ಅಚ್ಚರಿ. 'ಇದು ಹೇಗೆ ಸಾಧ್ಯ? ನಾನು ದೊಡ್ಡವಳು, ನೀನಿನ್ನೂ ಚಿಕ್ಕ ಮಗು.' ಆಗ ಮೃದುಲಾ ಅಂದಳು, ನಾನು ನಿನ್ನ ಹಿರಿಯ ಅಕ್ಕ ಮುನ್ನೂ.' ಅವಳಿಗೆ ಪರಮಾಶ್ಚರ್ಯ. ತಾಯಿ ಸತ್ಯವತಿಗೆ ನಂಬಿಕೆಯಾಗಲಿಲ್ಲ. ಪರೀಕ್ಷಿಸಿ ನೋಡುವ ಕುತೂಹಲದಿಂದ ಮಗುವನ್ನು ಮನೆಗೆ ಕರೆದೊಯ್ದರು. ಮನೆಯವರನ್ನೆಲ್ಲ ಗುರುತಿಸಿದಳು. ತನ್ನ ಪುಸ್ತಕದ ಬೀರು ತೋರಿಸಿದಳು. ಅಲ್ಲಿಯ ಫ್ಯಾನ್ ನೋಡಿ ಹಿಂದೆ ಇದು ಇರಲಿಲ್ಲ ಎಂದಳು. ಕುಶಾಲಚಂದ ಎಂಬವರು ಆನಂದಸ್ವಾಮಿ ಆಗಿದ್ದರು. ಅವರನ್ನು ಗುರುತಿಸಿ, 'ಸ್ವಾಮಿ, ನೀವು ಯಾವಾಗಿನಿಂದ ಕಾವಿ ಬಟ್ಟೆ ತೊಡಲು ಪ್ರಾರಂಭಿಸಿದಿರಿ? ಮೊದಲು ಬಿಳಿಯ ಬಟ್ಟೆ ಧರಿಸುತ್ತಿದ್ದಿರಿ.' ಎಂದಾಗ ಅವರಿಗೆ ಅಚ್ಚರಿ. ಮರೆಯಿಂದ ಎಲ್ಲವನ್ನೂ ನೋಡುತ್ತ ಆಲಿಸುತ್ತ ನಿಂತಿದ್ದ ಹಿಂದಿನ ಜನ್ಮದ ತಂದೆ ಅಂದರು, 'ಮಗೂ, ನೀನು ಎಲ್ಲರನ್ನೂ ಗುರುತಿಸಿದೆ, ಆದರೆ ಮನೆಯಲ್ಲಿದ್ದ ನಿನ್ನ ಸೇವಕರನ್ನು ಗುರುತಿಸಲಿಲ್ಲ.' ಅವರನ್ನು ತಬ್ಬಿಕೊಂಡು ಮೃದುಲಾ ಹೇಳಿದಳು, 'ನೀವು ಸೇವಕರಲ್ಲ, ನನ್ನ ಅಪ್ಪ.' ಎಲ್ಲರಿಗೂ ಪರಮ ಸಂತೋಷವಾಯಿತು. ಅವರೆಲ್ಲ ಪ್ರೀತಿಯ ಹೊನಲನ್ನೇ ಹರಿಸಿದರು. ಇಬ್ಬರು ತಾಯಂದಿರ ಪ್ರೀತಿಯನ್ನು ಪಡೆದು ಬೆಳೆದಳು ಮೃದುಲಾ. ಅವಳ ಮದುವೆಯ ಸಮಯ ದಲ್ಲಿ ಹಿಂದಿನ ಜನ್ಮದ ತಂದೆತಾಯಿ ಅವಳಿಗೆ ಚಿನ್ನಾ ಭರಣ, ನಗದು ಹಣ, ಅಷ್ಟೇ ಅಲ್ಲ ಒಂದು ಬಂಗಲೆಯನ್ನು ಉಡುಗೊರೆಯಾಗಿ ಕೊಟ್ಟರಂತೆ.

ಇವೆಲ್ಲವೂ ಭ್ರಾಮಕ ಕಲ್ಪನೆಯೆಂದು, ಕತೆಯೆಂದು ತಳ್ಳಿಹಾಕ ಬಹುದಾಗಿತ್ತು. ಆದರೆ ವರ್ಜಿನಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅಯಾನ್ ಸ್ಟೀವನ್‌ಸನ್ ಇವಳನ್ನು ಕಾಣಲು ೧೯೭೦ರ ಮಾರ್ಚ್ ೧೮ಕ್ಕೆ ಭಾರತಕ್ಕೆ ಬಂದರು. ಇವಳನ್ನು ಚೆನ್ನಾಗಿ ಪರೀಕ್ಷಿಸಿ, 'ಇದು ಪುನರ್ಜನ್ಮಕ್ಕೊಂದು ಸ್ಪಷ್ಟವಾದ ಸಾಕ್ಷ್ಯಾಧಾರ' ಎಂದರು. ಪುನರ್ಜನ್ಮವಲ್ಲದೆ ಬೇರಾವ ಅರ್ಥ, ವಿವರಣೆಯನ್ನೂ ಇದಕ್ಕೆ ಕೊಡಲು ಸಾಧ್ಯವಿಲ್ಲ ಎಂದು ಮನ ಗಂಡ ಬಳಿಕ ಅವರು ತಮ್ಮ ದೇಶಕ್ಕೆ ಮರಳಿದರು.

ಮೃದುಲಾ ಶರ್ಮಾ ಐದು ವರ್ಷದ ಬಾಲಿಕೆಯಾಗಿದ್ದಾಗ ತನ್ನ ತಾಯಿಯೊಂದಿಗೆ ಹೋಗಿ ಹೃಷೀಕೇಶದ ಸ್ವಾಮಿ ಶಿವಾ ನಂದರನ್ನು ಭೇಟಿಯಾಗಿದ್ದಳು. ಸ್ವಾಮಿ ಶಿವಾನಂದರು ತಮ್ಮ ಬರಹದಲ್ಲಿ ಈ ವಿಚಾರ ಸೂಚಿಸಿದ್ದಾರಂತೆ. ಇಷ್ಟೆಲ್ಲ ವಿವರ ವಾಗಿ ಮೃದುಲಾ ಬಗ್ಗೆ ಬರೆಯಲು 'ದಿ ಟೈಮ್ಸ್ ಆಫ್ ಇಂಡಿಯಾ'ದ ೧೯೭೬ ರ ಅಕ್ಟೋಬರ್ ೩೧ರ (ಭಾನುವಾರ) ಸಂಚಿಕೆಯಲ್ಲಿ ಪ್ರಕಟಗೊಂಡ ಸಚಿತ್ರ ಲೇಖನವೇ ಆಧಾರ.

ಅತೀಂದ್ರಿಯ ವಿಜ್ಞಾನದ ಕೊಡುಗೆಗಳ ಬಗ್ಗೆ ಸೋವಿಯೆಟ್ ರಷ್ಯಾದಲ್ಲಿ ಕೂಡ ಬಹಳ ಅಭ್ಯಾಸ ನಡೆದಿದೆ. ಅಲ್ಲಿ ೧೫೨ರಷ್ಟು ಗ್ರಂಥಗಳು ಪ್ರಕಟವಾಗಿವೆ.

ಎಲುಬು, ರಕ್ತ, ಮಾಂಸ, ನರವ್ಯೂಹಗಳಿಂದ ಕೂಡಿದ ಮನುಷ್ಯ ಶರೀರದ ಹಿನ್ನೆಲೆಯಲ್ಲಿ, ಸಾಮಾನ್ಯ ದೃಷ್ಟಿಗೆ ಗೋಚರಿಸದ, ಭಾರತದಲ್ಲಿ ಪುರಾತನ ಕಾಲದಿಂದಲೂ ಯೋಗಿಗಳಿಗೆ ಗೋಚರಿಸಿವೆಯೆಂದು ಹೇಳಲಾದ, ಅತ್ಯಂತ ಸೂಕ್ಷ್ಮವಾದ ಚೈತನ್ಯಮಯ ಶರೀರವಿದೆ ಎಂಬ ಸೂಚನೆ ರಷ್ಯನ್ ಸಂಶೋಧಕರಿಗೆ ಸುಮಾರು ೧೯೩೯ರ ಹೊತ್ತಿಗೆ ಲಭಿಸಿತ್ತು. ಆಗಲೇ ದಕ್ಷಿಣ ರಷ್ಯಾದ ಕ್ಯೂಬಾನ್ ಪ್ರಾಂತದ ಕ್ರಸ್ನೋದರ್ ಎಂಬಲ್ಲಿ ಸಂಶೋಧನೆ ಪ್ರಾರಂಭವಾಗಿತ್ತು. ಮನುಷ್ಯದೇಹದಲ್ಲಿ ಸೂಕ್ಷ್ಮಾತಿಸೂಕ್ಷ್ಮ ರೂಪದಿಂದಿರುವ ಈ ಚೈತನ್ಯಶರೀರವನ್ನು ಗುರುತಿಸಲು ಅಗತ್ಯವಾದ ಕೆಲವೊಂದು ಉಪಕರಣಗಳನ್ನು ಸಜ್ಜುಗೊಳಿಸಲು ತಜ್ಞರನ್ನು ಹುಡುಕುತ್ತಿದ್ದರು. ಅವರಿಗೆ ಸಹಾಯಕನಾಗಿ ಬಂದ ತಾಂತ್ರಿಕಜ್ಞನೇ ಸಮ್ಯೋನ್ ಡೆವಿಡೊವಿಚ್ ಕಿರ್ಲಿಯನ್.

ಮನುಷ್ಯದೇಹದಿಂದ ಹೊರಹೊಮ್ಮುವ ಒಂದು ವಿಶಿಷ್ಟ ಚೈತನ್ಯವು ವಿದ್ಯುತ್ತಿನ ಪ್ರವಾಹವನ್ನು ಪ್ರಭಾವಗೊಳಿಸುವುದೆಂದು ತಜ್ಞರು ಹೇಳುತ್ತಾರೆ. ದೇಹದಿಂದ ಹೊರಹೊಮ್ಮುವ ಆ ಚೈತನ್ಯ ಅಥವಾ ಪ್ರಭಾವಲಯದ ಫೋಟೋ ತೆಗೆಯಲು ನಮ್ಮ ದೇಹವನ್ನು ಅಥವಾ ಯಾವುದಾದರೊಂದು ಅಂಗವನ್ನು ಅಧಿಕ ಶಕ್ತಿಯ ವಿದ್ಯುತ್ ಪ್ರವಾಹಕ್ಷೇತ್ರದ ಸಮೀಪ ಇರಿಸಬೇಕು. ಆಗ ಹೊರಹೊಮ್ಮುವ ಚೈತನ್ಯವು ವಿದ್ಯುತ್ ಕ್ಷೇತ್ರದ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಆಗ ಅವುಗಳ ಬಣ್ಣವೂ ಬದಲಿಸುತ್ತದೆ. ಕಿರ್ಲಿಯನ್ ಸಿದ್ಧಪಡಿಸಿದ ಪರಿಷ್ಕೃತ ಉಪಕರಣದಿಂದ ಅವುಗಳ ಸ್ಥಿತ್ಯಂತರ, ಗತಿವೈಚಿತ್ರ್ಯ, ವರ್ಣ ವೈವಿಧ್ಯಗಳನ್ನು ಕಾಣಬಹುದು. ಕಿರ್ಲಿಯನ್ ಉಪಕರಣ ವಿದ್ಯುತ್ ಅಲ್ಲದ 'ಚೈತನ್ಯ' ವನ್ನು ಒಂದು ರೀತಿ ವಿದ್ಯುತ್ತಾಗಿ ಪರಿವರ್ತಿಸಿ ನಮ್ಮ ದೃಷ್ಟಿಗೆ ನಿಲುಕುವಂತೆ ಮಾಡುತ್ತದೆ.

ಕಿರ್ಲಿಯನ್ ಉಪಕರಣದ ಮೂಲಕ ಈ ಸೂಕ್ಷ್ಮದೇಹದ ಅಥವಾ ಶಕ್ತಿದೇಹದ ರೋಮಾಂಚಕಾರಿ ಅದ್ಭುತ ದೃಶ್ಯವನ್ನು ವೀಕ್ಷಿಸಿದವರು ಅತೀಂದ್ರಿಯ ವಿಚಾರದಲ್ಲಿ ಸಾಮಾನ್ಯ ಕುತೂಹಲಿಗಳಾದ ಜನರಲ್ಲ. ಸೋವಿಯತ್ ದೇಶದ 'ಪ್ರಿಸೀಡಿಯಮ್ ಆಫ್ ದಿ ಅಕಾಡೆಮಿ ಆಫ್ ಸೈನ್ಸಸ್' ನ ಮೇಧಾವಿ ಸಂಶೋಧಕ ವಿಜ್ಞಾನಿಗಳು ಎನ್ನುತ್ತಾರೆ.

ಭಾರತೀಯರಿಗೆ ಅಸಡ್ಡೆ ಏಕೆ? ಜಗತ್ತಿನಲ್ಲಿ ಇಷ್ಟೊಂದು ಸಂಶೋಧನೆ ನಡೆಯುತ್ತಿರುವಾಗ, ಭಾರತದಲ್ಲಿ ಇಂದು ಆಂಗ್ಲ ವಿದ್ಯಾಭ್ಯಾಸ ಮಾಡಿದ ಯಾವ ವ್ಯಕ್ತಿಗಾದರೂ ಈ ಹಳೆಯ ಸಿದ್ಧಾಂತಗಳು ಮೂಢನಂಬಿಕೆಯ ಕಂತೆ, ಪಾಮರರನ್ನು ವಂಚಿಸಲು ಮಾಡಿದ ಸಂಚು ಎನ್ನುವ ಭಾವನೆ ರೂಢಮೂಲವಾಗುತ್ತಿದೆ. ಆಧುನಿಕ ವಿಜ್ಞಾನದ

ಬೆಳಕಿನಲ್ಲಿ ಪ್ರಾಕ್ತನ ಸಿದ್ಧಾಂತಗಳ ಸತ್ವ ಮತ್ತು ಮಹತ್ವಗಳನ್ನು ತಿಳಿದುಕೊಂಡು, ಅದನ್ನು ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಂಡರೆ, ಬದುಕಿಗೊಂದು ಸಾರ್ಥಕತೆ ಬಂದೀತು ಎಂಬುದನ್ನು ತಿಳಿಸಿಕೊಡುವ ಪ್ರಾಮಾಣಿಕ ಪ್ರಯತ್ನ ದುರ್ಲಭ ಎನ್ನುವಷ್ಟು ವಿರಳ.

ಇಂದು ಭಾರತೀಯರ ಯೋಗ, ತತ್ತ್ವಚಿಂತನೆ, ಸಂಗೀತ ಮತ್ತು ಕಲೆ– ಇವು ಇತರ ದೇಶದ ಮನಸ್ಸನ್ನು ಏಕೆ ಸೆಳೆಯುತ್ತವೆ? ಕೇವಲ ಹೊಸತನದ ಕ್ಷಣಿಕ ಕುತೂಹಲ, ಉದ್ವೇಗಕ್ಕಾಗಿ ಮಾತ್ರ ಅಲ್ಲ. ಈ ದೇಶದ ಪುರಾತನ ಋಷಿಗಳು ಮನಸ್ಸಿನ ಆಳಕ್ಕೆ ಮುಳುಗಿ, ಜೀವನದ ಅರ್ಥ ಉದ್ದೇಶಗಳನ್ನು ಕಂಡುಕೊಂಡರು. ಜನತೆಗೆ ಕೆಲವೊಂದು ಶಾಶ್ವತ ಮೌಲ್ಯಗಳನ್ನು ನೀಡಿದರು. ವಿಜ್ಞಾನದ ಪ್ರಗತಿಯ ದೇಶಗಳಲ್ಲಿ ಮನಸ್ಸಿನ ಆಳಕ್ಕೆ ಮುಳುಗಿ ಅದರ ರಹಸ್ಯವನ್ನು ಕಂಡುಹಿಡಿಯುವ ಪ್ರಯತ್ನ ನಡೆದಿದೆ.

ಮ್ಯಾಕ್ಸ್‌ಮುಲ್ಲರ್ ಅವರ ಅಭಿಪ್ರಾಯದಂತೆ ಯೋಗಶಾಸ್ತ್ರಕ್ಕೆ ಸುಮಾರು ಆರು ಸಾವಿರ ವರ್ಷಗಳ ಇತಿಹಾಸವಿದೆ. ಗೌತಮನು ಬುದ್ಧನಾಗುವ ಮೊದಲು ಅರಣ್ಯಗಳಲ್ಲಿ ಅಲೆಯುತ್ತಿರುವಾಗ ಅಸಂಖ್ಯ ಸಾಧಕ ತಪಸ್ವಿಗಳನ್ನು ಕಂಡ ವಿಚಾರವೂ ತಿಳಿದುಬಂದಿದೆ.

ನಮ್ಮ ಭಾರತೀಯ ತತ್ತ್ವಶಾಸ್ತ್ರಜ್ಞರು ಅನುಸರಿಸಿದ ಸತ್ಯಾನ್ವೇಷಣೆಯ ಕ್ರಮ – ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ ಎಂಬ ಮೂರು ಬಗೆಯ ಪ್ರಮಾಣಗಳು.

ಪರಮ ಸಾಕ್ಷಾತ್ಕಾರದ ಸಾಧನೆಯಲ್ಲಿ ಆಪ್ತವಾಕ್ಯ ಅಥವಾ ಶಬ್ದಪ್ರಮಾಣ, ಯುಕ್ತಿ ಅಥವಾ ತರ್ಕದ ಮೂಲಕ ವಿಚಾರದ ಒರೆಗಲ್ಲಿನಲ್ಲಿ ವಿಮರ್ಶಿಸುವ ವಿಧಾನ ಮತ್ತು ಸ್ವಂತ ಬದುಕಿನಲ್ಲಿ ಆ ಅನುಭವ – ಈ ಮೂರೂ ವಿಧಾನಗಳು ಸೇರಿಕೊಂಡಿವೆ. ಯುಕ್ತಿ–ತರ್ಕಗಳನ್ನು, ಸ್ವಾನುಭವವನ್ನು ಬಿಟ್ಟು ಕೇವಲ ಶಬ್ದಪ್ರಮಾಣವನ್ನೇ ಅಧ್ಯಯನ ಮಾಡುವ ವ್ಯಕ್ತಿ ಮತಾಂಧನಾಗುವ ಸಂಭವವಿದೆ.

ಪಾಶ್ಚಾತ್ಯ ಸಂಸ್ಕೃತಿ ಮತ್ತು ಸಮಾಜ ಉಳಿಯಬೇಕಾದರೆ ಕರ್ಮಸಿದ್ಧಾಂತದ ಅರಿವನ್ನು ಅಲ್ಲಿಯ ಜನಮಾನಸದಲ್ಲಿ ಪ್ರಚಾರಗೊಳಿಸಬೇಕೆಂದು ಲೇಖಕ ಪಾಲ್ ಬ್ರಂಟನ್ ಒಮ್ಮೆ ಹೇಳಿದ್ದ. ಚರ್ಚ್ ಹಾಗೂ ಕ್ರೈಸ್ತ ಧರ್ಮಾಧಿಕಾರಿಗಳೆಲ್ಲ ಕರ್ಮಸಿದ್ಧಾಂತವನ್ನು ಮೂಢ ನಂಬಿಕೆ ಎಂದು ವಿರೋಧಿಸಿದ್ದರೂ, ಒಂದು ಅಂದಾಜಿನ ಪ್ರಕಾರ ಅಮೇರಿಕಾ ದೇಶದ ನಾಲ್ವರಲ್ಲಿ ಒಬ್ಬರು ಈ ಸಿದ್ಧಾಂತವನ್ನು ಒಪ್ಪುತ್ತಾರೆ.

ಬ್ರಿಟನ್ನಿನ ಸಂಡೇ ಟೆಲಿಗ್ರಾಫ್ ಪತ್ರಿಕೆ ನಡೆಸಿದ ಅಧ್ಯಯನದ ಪ್ರಕಾರ, ಕಳೆದ ಹತ್ತು ವರ್ಷಗಳಲ್ಲಿ ಜನಸಾಮಾನ್ಯರ ನಂಬಿಕೆಯ ಪ್ರಮಾಣ (ಕರ್ಮ ಹಾಗೂ ಜನ್ಮಾಂತರ ಸಿದ್ಧಾಂತಗಳ ಬಗ್ಗೆ) ಶೇಕಡಾ ಹದಿನೆಂಟರಿಂದ ಇಪ್ಪತ್ತೆಂಟಕ್ಕೆ ಏರಿದೆಯಂತೆ.

ಕ್ರೈಸ್ತಮತದ ಯುನಿಟೇರಿಯನ್ ಪಂಥಕ್ಕೆ ಸೇರಿದ ಧರ್ಮಗುರು ವಿಲಿಯಂ ಆರ್ ಅಲ್‌ಗರ್ ಎಂಬವರು ಕರ್ಮಸಿದ್ಧಾಂತ ಹಾಗೂ ಜನ್ಮಾಂತರವಾದವನ್ನು ತಲೆಬುಡವಿಲ್ಲದ ಸಿದ್ಧಾಂತವೆಂದು ಪ್ರತಿಪಾದಿಸಲು ಹೊರಟು, ಅದರ ಬಗ್ಗೆ ಅಧ್ಯಯನ ಮಾಡುತ್ತ ತಮ್ಮ ಇಡೀ ಜೀವನವನ್ನೇ ಅದಕ್ಕಾಗಿ ಸವೆಸಿದರಂತೆ. ಕೊನೆಗೆ ಆದದ್ದೇ ಬೇರೆ– ಅವರು ಆ ಸಿದ್ಧಾಂತದ ಪ್ರತಿಪಾದಕರೇ ಆದರಂತೆ. ಅವರ ಉದ್ಗ್ರಂಥ 'ಭವಿಷ್ಯ ಜೀವನದ ವಿಮರ್ಶಾತ್ಮಕ ಇತಿಹಾಸ' ಉನ್ನತ ಮಟ್ಟದ ಪಾಂಡಿತ್ಯಕ್ಕೆ ಅದ್ವಿತೀಯ ಮಾದರಿ ಎಂದು ಹೊಗಳಲ್ಪಟ್ಟ ಗ್ರಂಥ. 'ಕರ್ಮ, ಜನ್ಮಾಂತರ ಇವು ಯುಕ್ತಿಯುಕ್ತವಾದ ಅದ್ಭುತ ಸಿದ್ಧಾಂತ. ಅದನ್ನು ಮೂಢನಂಬಿಕೆ ಎಂದು ಅಲ್ಲಗಳೆಯುವುದು ಮೂರ್ಖತನ' ಎಂದು ಅವರು ಹೇಳಿದ್ದಾರೆ. *

ಹುಟ್ಟು–ಸಾವನ್ನು ಮೀರಿದ ಸಂಬಂಧ




೧೮೮೬ ರಲ್ಲಿ ಸುರೇಶಚಂದ್ರ ದತ್ತನೆಂಬ ಭಕ್ತನೊಬ್ಬ, ಶ್ರೀರಾಮಕೃಷ್ಣರಿಂದ ದೀಕ್ಷೆ ಪಡೆಯುವ ಸಲುವಾಗಿ ಆಗ ಅವರು ವಾಸವಾಗಿದ್ದ ಕಾಶೀಪುರದ ಉದ್ಯಾನ ಮನೆಗೆ ಬಂದಿದ್ದ. ಆದರೆ ಶ್ರೀರಾಮಕೃಷ್ಣರ ಆರೋಗ್ಯ ತುಂಬಾ ಕೆಟ್ಟಿದ್ದುದ್ದನ್ನು ಕಂಡು, ಅವನು ಅವರ ಬಳಿ ದೀಕ್ಷೆಗಾಗಿ ಪ್ರಾರ್ಥಿಸಿಕೊಳ್ಳಲಿಲ್ಲ.

ಶ್ರೀ ರಾಮಕೃಷ್ಣರ ಮಹಾಸಮಾಧಿಯ ನಂತರ ಅವನಿಗೆ ಅತ್ಯಂತ ದುಃಖ, ಪಶ್ಚಾತ್ತಾಪಗಳುಂಟಾದವು. ಅವನು ರಾತ್ರಿ ಹೊತ್ತನ್ನು ಗಂಗಾನದಿಯ ತೀರದಲ್ಲಿ ಪ್ರಾರ್ಥಿಸುತ್ತ, ಧ್ಯಾನಿಸುತ್ತ ಕಳೆಯತೊಡಗಿದ. ಒಂದು ರಾತ್ರಿ ಅವನು ಗಂಗಾತೀರದಲ್ಲಿ ಅಳುತ್ತ, ಪ್ರಾರ್ಥನೆ ಮಾಡಿಕೊಂಡು ಮಲಗಿ ನಿದ್ರಿಸಿಬಿಟ್ಟಿದ್ದ. ಮುಂಜಾನೆ ಏಳುತ್ತಲೇ ನೋಡುತ್ತಾನೆ, ಶೀರಾಮಕೃಷ್ಣರು ತಮ್ಮ ದೇದೀಪ್ಯಮಾನವಾದ ಶರೀರದೊಂದಿಗೆ ನೀರಿನಿಂದೆದ್ದು ಬರುತ್ತಿದ್ದಾರೆ! ಅವನ ಬಳಿಗೆ ಬಂದ ಅವರು, ಅವನ ಕಿವಿಯಲ್ಲಿ ಮಂತ್ರವೊಂದನ್ನು ಹೇಳಿಬಿಟ್ಟರು. ಇನ್ನೇನು, ಸುರೇಶಚಂದ್ರ ಅವರ ಪಾದಗಳಿಗೆ ನಮಸ್ಕರಿಸಿ, ಅವರ ಪಾದಧೂಳಿಯನ್ನು ತೆಗೆದುಕೊಳ್ಳುವಷ್ಟರಲ್ಲಿ ಶ್ರೀರಾಮಕೃಷ್ಣರು ಮರೆಯಾಗಿಬಿಟ್ಟರು. ಶ್ರೀರಾಮಕೃಷ್ಣರು ದೇಹತ್ಯಾಗ ಮಾಡಿದ ನಂತರವೂ ಈ ರೀತಿ ಭಕ್ತರಿಗೆ ಮಂತ್ರದೀಕ್ಷೆ ನೀಡಿದ್ದಿದೆ.

Sri Ramakrishna Saves' ಗ್ರಂಥದಿಂದ

ಶ್ರೀಮದ್ಭಾಗವತ ಸಾರ



ಎ. ಮುರಳೀಧರ

ದಶಮ ಸ್ಕಂಧ

ಭಾಗ–೨

ಶ್ರೀಕೃಷ್ಣಲೀಲೆ ಮತ್ತು ಕಂಸವಧೆ

ಶ್ರೀಕೃಷ್ಣ ಮಣ್ಣು ತಿಂದಾಗ: ಗೋಪಾಲಕರನ್ನು ಕರೆದುಕೊಂಡು ಕೃಷ್ಣ ಬಲರಾಮರು ಹೊರಗಡೆ ಆಟವಾಡುತ್ತಿದ್ದರು. ಓರ್ವ ಬಾಲಕನು ಯಶೋದೆಯ ಮನೆಗೆ ಬಂದು, "ಅಮ್ಮ, ನಿನ್ನ ಮಗ ಕೃಷ್ಣ ಮಣ್ಣು ತಿಂದ" ಎಂದನು. ಕೂಡಲೇ ಹೊರಟ ಯಶೋದೆಯು ಮಗನಾಡುತ್ತಿದ್ದ ಜಾಗಕ್ಕೆ ಬಂದಳು. ಕೃಷ್ಣನ ರಟ್ಟೆಯನ್ನು ಹಿಡಿದು, "ಮಣ್ಣು ತಿಂದೆಯಾ ಮೂರ್ಖ!" ಎಂದು ಬೈದಳು. ಪಕ್ಕದಲ್ಲಿದ್ದ ಬಲರಾಮ, "ಹೌದು, ಕೃಷ್ಣ ಮಣ್ಣನ್ನು ತಿಂದ" ಎಂದು ಹೇಳಿದನು. ಕೋಪಗೊಂಡ ಯಶೋದೆಯು ಕೃಷ್ಣನನ್ನು ಹೊಡೆಯಲು ಕೈ ಎತ್ತಿದಳು. "ಇಲ್ಲ, ನಾನು ಮಣ್ಣು ತಿನ್ನಲಿಲ್ಲ; ಅಮ್ಮ, ಇವರೆಲ್ಲ ಸುಳ್ಳು ಹೇಳುತ್ತಿದ್ದಾರೆ" ಎಂದು ಅಮಾಯಕ ನಂತೆ ಹೇಳಿದ ಕೃಷ್ಣ. ಅವನ ಮಾತಿಗೆ ಯಶೋದೆ, "ಹಾಗಾದರೆ ಬಾಯನ್ನು ತೆರೆದು ತೋರಿಸು" ಎಂದು ಗದರಿಸಿದಳು. ಕೃಷ್ಣನು ಬಾಯಿ ತೆರೆದು ಅಮ್ಮನ ಮುಂದೆ ನಿಂತನು. ಕೃಷ್ಣನ ಬಾಯಿಯನ್ನು ನೋಡಿದ ಯಶೋದೆ ದಂಗಾದಳು. ಅದರಲ್ಲಿ ಸ್ಥಾವರ, ಜಂಗಮಾತ್ಮಕ ಬ್ರಹ್ಮಾಂಡವನ್ನು ಅವಳು ಕಂಡಳು. ಆಕಾಶ, ದಶದಿಕ್ಕುಗಳು, ಸಮುದ್ರಗಳು, ದ್ವೀಪಗಳು, ನದಿಗಳು, ಪರ್ವತಗಳಿಂದ ಕೂಡಿದ ಭೂಮಂಡಲ, ಸೂರ್ಯ ಚಂದ್ರರು, ನಕ್ಷತ್ರ, ತ್ರಿಲೋಕಗಳು, ದಶಾವತಾರ, ಸಮಸ್ತ ಜೀವ ಸಂಕುಲವನ್ನೇ ಕಂಡ ಯಶೋದೆ ಮೈಮರೆತು ನಿಂತಳು. "ಅಮ್ಮ.." ಎಂದು ಕೃಷ್ಣ ಕೂಗಿದಾಗಲೇ ಅವಳು ಎಚ್ಚರ ಗೊಂಡಳು. ಕೃಷ್ಣನ ಬಾಲ್ಯವನ್ನು ಕಾಣುವ ಸೌಭಾಗ್ಯಕ್ಕೂ ಕಾರಣ ಅವಳು ತನ್ನ ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದ ಫಲವೇ ಆಗಿದೆ.

ಯಶೋದೆ ಮತ್ತು ನಂದಗೋಪರು ಹಿಂದಿನ ಜನ್ಮದಲ್ಲಿ ಅಷ್ಟವಸುಗಳಾದ ದ್ರೋಣ ಮತ್ತು ಅವನ ಪತ್ನಿ ಧಾರಾದೇವಿಯರಾಗಿದ್ದರು. ಬ್ರಹ್ಮನ ಆಜ್ಞೆಯ ಮೇರೆಗೆ ಅವರು ಭೂಲೋಕದಲ್ಲಿ ಜನಿಸಬೇಕೆಂದು ತೀರ್ಮಾನಿಸಿದರು. ಅವರು ಯಾವಾಗಲೂ ಭಗವಂತನ ಮೇಲೆ ಪ್ರೀತಿ ಮೋಹಗಳನ್ನು ಹೊಂದಿರಬೇಕೆಂಬ ಕೋರಿಕೆಯನ್ನು ಬ್ರಹ್ಮನ ಮುಂದೆ ಇಟ್ಟಿದ್ದರು. ಬ್ರಹ್ಮದೇವನು "ಹಾಗೆಯೇ ಆಗಲಿ" ಎಂದು ಹೇಳಿದನು. ಬ್ರಹ್ಮದೇವರ ಮಾತಿನ ಮೇರೆಗೆ ಶ್ರೀಹರಿಯು ದ್ವಾಪರಯುಗದಲ್ಲಿ ವಸುದೇವ ದೇವಕಿಯರ ಮಗನಾಗಿದ್ದರೂ, ದ್ರೋಣ ಮತ್ತು ಧಾರಾದೇವಿಯರು ದ್ವಾಪರಯುಗದಲ್ಲಿ ನಂದಗೋಪ ಮತ್ತು ಯಶೋದೆಯರಾಗಿ ಜನಿಸಿದಾಗ ಶ್ರೀಹರಿಯು ಅವರ ಬಳಿಯಲ್ಲೇ ಬಾಲ್ಯವನ್ನು ಕಳೆದನು.

ನಳಕೂಬರ ಮತ್ತು ಮಣಿಗ್ರೀವರ ಮುಕ್ತಿ: ಹಾಲನ್ನು ಕಾಯಿಸಲು ಯಶೋದೆಯು ಒಲೆಯ ಮೇಲಿಟ್ಟಳು. ಅಷ್ಟರಲ್ಲಿ ಆಟವಾಡಲು ಹೋಗಿದ್ದ ಪುಟ್ಟ ಕೃಷ್ಣನು, "ಹಸಿವೆಯಾಗಿದೆ, ಎದೆಹಾಲು ಕೊಡು" ಎಂದು ತಾಯಿಯನ್ನು ಕೇಳಿದನು. ಹಠ ಮಾಡಿದ ಕೃಷ್ಣನಿಗೆ ಹಾಲುಣಿಸಲು ಯಶೋದೆಯು ಅವನನ್ನು ತೊಡೆಯ ಮೇಲೆ ಮಲಗಿಸಿಕೊಂಡಳು. ಅಷ್ಟರಲ್ಲೇ ಹಾಲು ಉಕ್ಕಿ ನೆಲದ ಮೇಲೆ ಚೆಲ್ಲಿತ್ತು. ಕೃಷ್ಣನಿಂದ ಬಿಡಿಸಿಕೊಂಡ ಯಶೋದೆ ಒಲೆಯ ಹತ್ತಿರ ಹೋದಳು. ಇತ್ತ ಸಿಟ್ಟಿನಿಂದ ಕೃಷ್ಣನು ಅಲ್ಲೇ ಇದ್ದ ಕಡೆಗೋಲಿನಿಂದ ಮಜ್ಜಿಗೆ ಗಡಿಗೆಯನ್ನು ಹೊಡೆದನು. ಅಲ್ಲಿದ್ದ ಮಜ್ಜಿಗೆಯೆಲ್ಲ ಚೆಲ್ಲಿತು. ಕೃಷ್ಣ ಅದರಲ್ಲಿದ್ದ ಬೆಣ್ಣೆಯನ್ನು ತಿಂದು, ಮೈಯಲ್ಲಾ ಬಳಿದುಕೊಂಡನು. ಅಮ್ಮನಿಗೆ ಹೆದರಿ ಅಲ್ಲಿಯೇ ಅವಿತನು.

ಹಾಲಂತೂ ಹೋಯಿತು; ಮಗನಿಗೆ ಎದೆಹಾಲು ಕೊಡಲೆಂದು ಕೃಷ್ಣನಿರುವ ಜಾಗಕ್ಕೆ ಯಶೋದೆ ಬಂದಳು. ಅಲ್ಲಿ ಕೃಷ್ಣನಿರಲಿಲ್ಲ. ಮಜ್ಜಿಗೆ ಮನೆಯ ತುಂಬಾ ಹರಡಿತ್ತು. ಇದೆಲ್ಲಾ ಕೃಷ್ಣನ ತುಂಟಾಟವೇ ಇರಬೇಕೆಂದುಕೊಂಡಳು. ಹೀಗೆಯೇ ಬೇರೆಯ ಗೋಪಿಕಾಸ್ತ್ರೀಯರ ಮನೆಯಲ್ಲೂ ಕೃಷ್ಣನು ತುಂಟಾಟ ಮಾಡುವುದು ನಿಜಸಂಗತಿ ಎಂದುಕೊಂಡು, ಅವಿತುಕೊಂಡಿದ್ದ ಕೃಷ್ಣನನ್ನು ಹುಡುಕಿ, ಒರಳುಗಲ್ಲಿಗೆ ಕಟ್ಟಿ ಹಾಕಿದಳು.

ತಾಯಿ ಅತ್ತ ಸಾಗಿದೊಡನೆ ಕೃಷ್ಣನು ಒರಳುಗಲ್ಲನ್ನು ಎಳೆದುಕೊಂಡು ರಸ್ತೆಗೆ ಬಂದನು. ಹಾಗೆಯೇ ಬರುತ್ತಾ ಮನೆಯ ಮುಂದಿದ್ದ ಎರಡು ವೃಕ್ಷಗಳ ಮಧ್ಯದಿಂದ ಮುಂದೆ ಸಾಗಿದನು. ಆ ಎರಡು ಮರಗಳ ನಡುವಿನಿಂದ ಹಾದುಬಂದ ಒರಳುಗಲ್ಲು ಮರದ ಬುಡಕ್ಕೆ ತಾಗಿತು. ಕೃಷ್ಣನು ರಭಸದಿಂದ ಎಳೆದಾಗ ಆ ಎರಡೂ ವೃಕ್ಷಗಳು ಭಯಂಕರ ಸಪ್ಪಳ ಮಾಡುತ್ತಾ ಬುಡಸಹಿತ ಕಿತ್ತುಬಿದ್ದವು. ಆ ವೃಕ್ಷಗಳಿಂದ ಇಬ್ಬರು ಯಕ್ಷರು ಪ್ರತ್ಯಕ್ಷರಾಗಿ ಕೃಷ್ಣನಿಗೆ ನಮಸ್ಕರಿಸಿ, ತಮ್ಮ ಶಾಪ ವಿಮೋಚನೆ ಮಾಡಿದ್ದಕ್ಕೆ ಸ್ತುತಿಸಿ, ತಮ್ಮ ಲೋಕಕ್ಕೆ ತೆರಳಿದರು. ಅವರು ನಳಕೂಬರ ಮತ್ತು ಮಣಿಗ್ರೀವರೆಂಬ ಯಕ್ಷರು; ನಾರದರ ಶಾಪದ ಫಲವಾಗಿ ವೃಕ್ಷವಾಗಿದ್ದರು. ಇದೀಗ ಕೃಷ್ಣನ ಕೃಪೆಯಿಂದ ಮುಕ್ತಿ ಹೊಂದಿದರು.

ಮರ ಬಿದ್ದ ರಭಸಕ್ಕೆ ನಂದಗೋಕುಲದಲ್ಲಿದ್ದ ಎಲ್ಲರೂ ಅವನ ಬಳಿ ಬಂದರು. ವಿಷಯ ತಿಳಿದ ಯಶೋದೆ ನಂದಗೋಪರೂ ಅಲ್ಲಿಗೆ ಬಂದರು. ತಮ್ಮ ಮಗನ ವಿಚಾರವಾಗಿ, 'ನಮ್ಮ ಮಗ ಸಾಮಾನ್ಯನಲ್ಲ, ಅವನು ದೇವರ ಅವತಾರವೇ ಆಗಿರಬೇಕು' ಎಂದುಕೊಂಡರು. ಅವರು ಅನಂತರ ಒರಳಿಗೆ ಕಟ್ಟಿದ ಹಗ್ಗವನ್ನು ಬಿಚ್ಚಿದರು.

ಒಮ್ಮೆ ಮುದುಕಿಯೊಬ್ಬಳು ಹಣ್ಣು ಮಾರುತ್ತಾ ಯಶೋದೆಯ ಮನೆಯ ಮುಂದೆ ಬಂದಳು. ಕೃಷ್ಣನು ಧಾನ್ಯವನ್ನು ಕೊಟ್ಟು ಹಣ್ಣನ್ನು ಕೇಳಿದನು. ಆ ಅಜ್ಜಿಯು ಕೃಷ್ಣನ ಮೋಹಕ ಮಾತುಗಳಿಗೆ ಮರುಳಾಗಿ ಬುಟ್ಟಿಯಲ್ಲಿದ್ದ ಎಲ್ಲಾ ಹಣ್ಣುಗಳನ್ನು ಕೊಟ್ಟಳು. ಕ್ಷಣಮಾತ್ರದಲ್ಲಿ ಆಕೆಯ ಬುಟ್ಟಿಯಲ್ಲಿ ವಜ್ರ ವೈಢೂರ್ಯಗಳೇ ತುಂಬಿಬಿಟ್ಟವು. ಅಜ್ಜಿಯು ಅದನ್ನು ಹೊರಲಾರದೆ ತೆಗೆದುಕೊಂಡು ಹೋದಳು. ಗೋಕುಲದ ಪ್ರಜೆಗಳಿಗೆ ದಿನದಿನವೂ ಕೃಷ್ಣನ ತುಂಟತನದ ಅನುಭವವಾಗುತ್ತಿತ್ತು.

ವೃಂದಾವನ ಲೀಲೆ: ನಂದಗೋಕುಲದಲ್ಲಿ ನಡೆಯುತ್ತಿದ್ದ ವಿಪತ್ತುಗಳ ಸರಮಾಲೆಯನ್ನು ಕಂಡು ಅಲ್ಲಿನ ಜನರು ಭಯಭೀತರಾದರು. ಅವರು ಅವರಲ್ಲೇ ವಿಚಾರವಿನಿಮಯ ಮಾಡಿಕೊಂಡರು. ಅವರಲ್ಲಿ ಹಿರಿಯನಾದ ಮತ್ತು ವೃದ್ಧನಾದ ಉಪನಂದನು, "ಈ ಜಾಗವು ಕ್ಷೇಮವಾಗಿಲ್ಲ. ಆದ್ದರಿಂದ ನಾವೆಲ್ಲರೂ ಪಕ್ಕದಲ್ಲಿನ ವೃಂದಾವನಕ್ಕೆ ಹೋಗೋಣ. ಅದು ಪರ್ವತ ಪ್ರದೇಶದಲ್ಲಿದ್ದು, ಮನೋಹರ ಸ್ಥಳವಾಗಿದೆ. ದನಕರುಗಳಿಗೆ ಸಾಕಷ್ಟು ಮೇವೂ ಸಿಗುತ್ತದೆ. ಸುತ್ತಲೂ ರಮಣೀಯವಾದ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ ಯಮುನಾ ನದಿ ಹರಿಯುತ್ತಿದೆ. ಪವಿತ್ರ ಗೋವರ್ಧನ ಪರ್ವತವೂ ನಮ್ಮ ವಾಸಕ್ಕೆ ಸುಖಕರವಾಗಿರುತ್ತದೆ" ಎಂದನು. ಅವನ ಮಾತಿಗೆ ಎಲ್ಲರೂ ಒಪ್ಪಿಗೆ ಸೂಚಿಸಿದರು. ಗೊತ್ತಾದ ಒಂದು ದಿನ ಎಲ್ಲರೂ ತಮ್ಮ ತಮ್ಮ ಸಾಮಾನುಗಳನ್ನು ಕಟ್ಟಿಕೊಂಡು, ಎತ್ತಿನ ಬಂಡಿಯಲ್ಲಿ ಕುಳಿತು ವೃಂದಾವನಕ್ಕೆ ಬಂದರು. ಅಲ್ಲಿ ತಮಗೆ ಬೇಕಾದ ಹಾಗೆ ವಸತಿಯನ್ನು ಕಟ್ಟಿಕೊಂಡು, ಅಲ್ಲಿನ ಜೀವನಕ್ಕೆ ಹೊಂದಿಕೊಂಡರು.

ಬಲರಾಮಕೃಷ್ಣರು ತಮ್ಮ ಬಾಲ್ಯವನ್ನು ಕಳೆದು ಪ್ರೌಢಾವಸ್ಥೆಗೆ ಬಂದರು. ತಮ್ಮ ಗೆಳೆಯರೊಂದಿಗೆ ದಿನವೂ ಆಕಳು, ಕರು ಹೊಡೆದುಕೊಂಡು ಬೆಟ್ಟದ ತಪ್ಪಲಿಗೆ ಬಂದು, ಅರಣ್ಯವನ್ನೆಲ್ಲಾ ಸುತ್ತಿ ಮನೆಗೆ ಬರುವುದು ಪರಿಪಾಠವಾಯಿತು. ಗೋಕುಲವನ್ನು ಬಿಟ್ಟು ನಂದ–ಉಪನಂದರು ಮತ್ತು ಗೋಕುಲದ ಜನರು ಊರು ಬಿಟ್ಟು ವೃಂದಾವನ ಸೇರಿಕೊಂಡ ಸುದ್ದಿಯನ್ನು ತಿಳಿದು ಕಂಸನು ಅಲ್ಲಿಗೆ ವತ್ಸಕಾಸುರ ಎಂಬ ದೈತ್ಯನನ್ನು ಕರೆಸಿ, ಕೃಷ್ಣನನ್ನು ಕೊಲ್ಲಲು ಕಳುಹಿಸಿದನು. ಆ ವತ್ಸಕಾಸುರನು ದನದ ರೂಪದಲ್ಲಿ ಹಸುವಿನ ಮಂದೆಯನ್ನು ಸೇರಿಕೊಂಡನು. ಇದು ಕೃಷ್ಣನಿಗೆ ತಿಳಿಯಿತು. ಬಲರಾಮನನ್ನು ಕರೆದು, "ಅಣ್ಣಾ, ಯಾವುದೋ ಹೊಸ ದನ ಇಲ್ಲಿಗೆ ಬಂದಿದೆ. ಅದು ಎಷ್ಟೊಂದು ಚೆನ್ನಾಗಿದೆ" ಎಂದು ಅದರ ಹಿಂದುಗಡೆ ಬಂದನು. ಇದೇ ಸರಿಯಾದ ಸಮಯವೆಂದುಕೊಂಡು ದನದ ವೇಷದಲ್ಲಿದ್ದ ವೃತಾಸುರನು ತನ್ನ ಕಾಲಿನಿಂದ ಕೃಷ್ಣನನ್ನು ಒದೆಯಲು ಕಾಲುಗಳನ್ನು ಹಾರಿಸಿದನು. ಕೂಡಲೇ ಕೃಷ್ಣನು ಅದರ ಕಾಲುಗಳನ್ನು ಹಿಡಿದು–ಕೊಂಡು ಗಿರಗಿರನೆ ತಿರುಗಿಸಿ, ನೆಲಕ್ಕೆ ಅಪ್ಪಳಿಸಿದನು. ವತ್ಸಕಾಸುರನು ಅರಣ್ಯವೇ ನಡುಗುವಂತೆ ಕಿರುಚುತ್ತಾ ತನ್ನ ದೈತ್ಯ ರೂಪದಿಂದ ಪ್ರಾಣಬಿಟ್ಟನು.

ನಂತರ ಕಂಸನು ಕಳುಹಿಸಿದ ಬಕಾಸುರನು ಕೃಷ್ಣನನ್ನು ಕೊಲ್ಲಲು ಬಕಪಕ್ಷಿಯ ರೂಪದಲ್ಲಿ ಬಂದನು. ಕೃಷ್ಣನು ಅದರ ಚುಂಚವನ್ನು ಹಿಡಿದು, ಆತನ ದೇಹವನ್ನು ಸೀಳಿದನು. ಬಕಾಸುರನ ತಮ್ಮನಾದ ಅಘಾಸುರನು ಕೃಷ್ಣನನ್ನು ನುಂಗಲು ಹೆಬ್ಬಾವಿನ ರೂಪದಲ್ಲಿ ಬಂದು, ಗೋಪಾಲಕರು ನಡೆದಾಡುವ ದಾರಿಯಲ್ಲಿ ಭೂಮಿ–ಆಗಸದತ್ತೆರಕ್ಕೆ ಬಾಯಿ ತೆರೆದು ಕುಳಿತನು. ಇದನ್ನು ಗಮನಿಸಿದ ಕೃಷ್ಣನು ದನ, ಕರು, ಗೋಪಾಲಕರನ್ನು ತಡೆದು ತಾನೇ ಅವನ ಬಾಯಲ್ಲಿ ಹೊಕ್ಕನು. ಅವನ ದೇಹವನ್ನು ಎರಡಾಗಿ ಸೀಳಿ, ಆತನನ್ನು ಸಂಹರಿಸಿದನು.

ಅಲ್ಲಿಯೇ ಅರಣ್ಯಪ್ರದೇಶದಲ್ಲಿ ತಾಳೆಗಿಡಗಳ ತೋಪಿನಲ್ಲಿದ್ದ ಧೇನುಕನೆಂಬ ದೈತ್ಯ ಮತ್ತು ಆತನ ಪರಿವಾರವನ್ನು ಬಲರಾಮ ಕೃಷ್ಣರು ನಾಶಮಾಡಿ, ಆ ತೋಪಿನಲ್ಲಿದ್ದ ಹಣ್ಣನ್ನು ತಿಂದು ಬೇರೆಯವರೆಲ್ಲ ಅಲ್ಲಿಗೆ ಹೋಗಲು ಆ ಸ್ಥಳವನ್ನು ಮುಕ್ತವಾಗಿಸಿದರು.

ಕಾಳಿಯ ಮರ್ದನ: ಎಂದಿನಂತೆ ದನಕಾಯಲು ಹೋಗಿದ್ದ ಗೋಪಾಲಕರಿಗೆ ನೀರಡಿಕೆಯಾಗಿ, ನೀರು ಕುಡಿಯಲು ಯಮುನಾ ನದಿಗೆ ಬಂದರು. ಅಲ್ಲಿನ ನೀರನ್ನು ಕುಡಿದ ಕೆಲವು ಮಂದಿ ಗೋಪಾಲಕರು ಮತ್ತು ದನಕರುಗಳು ಮೂರ್ಛೆಗೊಂಡರು. ಮೂರ್ಛೆಗೊಂಡವರನ್ನು ಎಚ್ಚರಗೊಳಿಸಿದ ಕೃಷ್ಣನು ನದಿಯನ್ನು ಸೂಕ್ಷ್ಮವಾಗಿ ಗಮನಿಸಿದನು. ಅದರಲ್ಲಿ

ನೂರಾರು ಹೆಡೆಗಳುಳ್ಳ ವಿಷಸರ್ಪವು ಸೇರಿಕೊಂಡಿದ್ದುದನ್ನು ಅವನು ಕಂಡನು. ಅದು ನದಿಯನ್ನು ವಿಷಮಯ ವಾಗಿಸಿತ್ತು. ಕಾಳಿಯನು ಗರುಡನ ಭಯದಿಂದಾಗಿ ತನ್ನ ಪರಿವಾರದೊಂದಿಗೆ ಅಲ್ಲಿಗೆ ಬಂದು ಸೇರಿಕೊಂಡಿತ್ತು. ಅದರ ಉಪಟಳದಿಂದ ವೃಂದಾವನವನ್ನು ರಕ್ಷಿಸಬೇಕೆಂದು ಕೃಷ್ಣನು ನಿರ್ಧರಿಸಿದನು.

ಕೃಷ್ಣನು ತುಂಬಿ ಹರಿಯುತ್ತಿದ್ದ ನದಿಗೆ ಧುಮುಕಿದನು. ಅಲ್ಲಿದ್ದ ಗೋಪಾಲಕರು ಊರ ಹಿರಿಯರನ್ನು ಕರೆದುಕೊಂಡು ಬಂದರು. ನದಿಗೆ ಧುಮುಕಿದ ಕೃಷ್ಣನನ್ನು ಕಂಡು ಕಾಳಿಂಗ ಸರ್ಪವು ಬುಸುಗುಡುತ್ತಾ, ವಿಷಕಾರುತ್ತಾ ಮೇಲೆ ಬಂದಿತ್ತು. ಕೃಷ್ಣನನ್ನು ಬಿಗಿಯಾಗಿ ಹಿಡಿದು ಪಾತಾಳಕ್ಕೆ ಕರೆದೊಯ್ದಿತು. ನಂತರ ಕೃಷ್ಣನು ಹೆಡೆಯ ಮೇಲೆ ತನ್ನ ಭಾರವಾದ ಹೆಜ್ಜೆಗಳನ್ನು ಇಡುತ್ತಾ ನರ್ತಿಸತೊಡಗಿದನು. ಕೃಷ್ಣ ಕಾಲ್ತುಳಿತಕ್ಕೆ ಕಾಳಿಂಗಸರ್ಪವು ಬಸವಳಿದು, ಕೃಷ್ಣನಿಗೆ ಶರಣಾಯಿತು. ತನ್ನನ್ನು ಗರುಡನ ಭಯದಿಂದ ಕಾಪಾಡಬೇಕೆಂದು ಕೋರಿತು. ನನ್ನ ಹೆಜ್ಜೆಯ ಗುರುತು ನಿನ್ನ ತಲೆಯ ಮೇಲಿರುವುದರಿಂದ ಗರುಡನು ನಿನ್ನನ್ನು ಏನೂ ಮಾಡುವುದಿಲ್ಲ; ನೀನು ನಿನ್ನ ಸ್ವಂತ ಸ್ಥಳಕ್ಕೆ ಹೊರಡು ಎಂದು ಕೃಷ್ಣನು ಹೇಳಿದನು. ನಂತರ ಕೃಷ್ಣನು ನೀರಿನಿಂದ ಮೇಲೆ ಬಂದನು. ಎಲ್ಲರಿಗೂ ಸಂತಸ ವಾಯಿತು.

ಗೋಪಿಕಾಸ್ತ್ರೀಯರ ವಸ್ತ್ರಾಪಹರಣ: ಮದುವೆಯಾಗದ ಕನ್ಯೆಯರು ನಮಗೆ ಉತ್ತಮ ಪತಿ ದೊರೆಯಬೇಕೆಂದು ಕಾತ್ಯಾಯಿನಿ ವ್ರತವನ್ನು ಅಂದಿನ ದಿನಗಳಲ್ಲಿ ಮಾಡುತ್ತಿದ್ದರು. ಗೋಪಿಕಾಸ್ತ್ರಿಯರು ಮಾರ್ಗಶಿರ ಮಾಸದಲ್ಲಿ ಒಂದು ತಿಂಗಳು ಈ ವ್ರತವನ್ನು ಆಚರಿಸುತ್ತಿದ್ದರು. ಎಲ್ಲರೂ ಅರುಣೋದಯಕ್ಕೆ ಎದ್ದು, ಯಮುನೆಯಲ್ಲಿ ಸ್ನಾನ ಮಾಡಿ, ಕಾತ್ಯಾಯಿನಿ ಮೂರ್ತಿಯನ್ನು ಸ್ಥಾಪಿಸಿ, ಅದನ್ನು ಪೂಜಿಸಿ, ನಂದಗೋಪನ ಮಗನಾದ ಕೃಷ್ಣನೇ ತಮಗೆ ಪತಿಯಾಗಬೇಕೆಂದು ಹಂಬಲಿಸಿ ವ್ರತವನ್ನು ಮಾಡುತ್ತಿದ್ದರು. ಅವರು ದಿಗಂಬರರಾಗಿ ಸ್ನಾನ ಮಾಡುತ್ತಿದ್ದರು. ಇದನ್ನೆಲ್ಲ ಗಮನಿಸಿದ ಕೃಷ್ಣನು ಸ್ನಾನ ಮಾಡುವಾಗ ಒಂದು ದಿನ ಅವರ ವಸ್ತ್ರಗಳನ್ನೆಲ್ಲಾ ತೆಗೆದುಕೊಂಡು ಮರದ ಮೇಲಿರಿಸಿ, ತಾನು ಅಲ್ಲೇ ಕುಳಿತನು. ಅವರೆಲ್ಲರೂ ಮೇಲೆ ಬಂದು ನೋಡಿದಾಗ ವಸ್ತ್ರಗಳು ಕಾಣಲಿಲ್ಲ. ಮತ್ತೆ ಪುನಃ ನೀರಿಗಿಳಿದರು. ಸುತ್ತಲೂ ಗಮನಿಸಿದಾಗ ಕೃಷ್ಣನು ನಗುತ್ತಾ ಮರದ ಮೇಲೆ ಕೊಳಲನ್ನು ಊದುತ್ತಿದ್ದನು. ಅವರೆಲ್ಲರೂ ಕೃಷ್ಣನನ್ನು ಗಂಡನಾಗಿ ಪಡೆಯಬೇಕೆಂದು ತೀರ್ಮಾನಿಸಿದ್ದರು. ಮದುವೆಯಾಗದ ಕಾರಣ ಆತನೆದುರು ನಗ್ನರಾಗಿ ಬರಲು ನಾಚಿದರು. ಕೃಷ್ಣನು ಅವರಿಗೆ ಬುದ್ಧಿ ಹೇಳಿ, ಇನ್ನು ಮುಂದೆ ನಗ್ನರಾಗಿ ಸ್ನಾನ ಮಾಡಬಾರದೆಂದು ತಿಳಿಸಿದನು. ನಂತರ ಶರತ್ಕಾಲದ ರಾತ್ರಿಯಲ್ಲಿ ಅವರೊಂದಿಗೆ ರಾಸಕ್ರೀಡೆಯಾಡಿ, ಅವರಿಗೆಲ್ಲಾ ಮುಕ್ತಿಯನ್ನು ಕರುಣಿಸಿದನು.

ಒಮ್ಮೆ ಅರಣ್ಯದಲ್ಲಿದ್ದಾಗ ಗೋಪಾಲಕರಿಗೆ ಹಸಿವಾಯಿತು. ತಂದಿದ್ದ ಆಹಾರಬುತ್ತಿಯು ಖಾಲಿಯಾಗಿತ್ತು. ಅವರೆಲ್ಲರೂ "ಹಸಿವೆಯಾಗುತ್ತಿದೆ, ಏನು ಮಾಡುವುದು" ಎಂದು ಕೃಷ್ಣನನ್ನು ಕೇಳಿದರು. ಅದಕ್ಕೆ ಕೃಷ್ಣನು, "ಅದೋ ಅಲ್ಲಿ ಬ್ರಾಹ್ಮಣರು ಯಜ್ಞ ಮಾಡುತ್ತಿದ್ದಾರೆ. ಅಲ್ಲಿ ತಿನ್ನಲು ಏನಾದರೂ ಸಿಗುವುದು"



ಎಂದನು. ಗೋಪಾಲಕರು ಅಲ್ಲಿಗೆ ತೆರಳಿದರು. ಆಹಾರ ಬೇಡಿ ಬಂದ ಬಾಲಕರಿಗೆ ಮತ್ತು ಕೃಷ್ಣನಿಗೆ ಅದನ್ನು ಕೊಡುವ ಮನಸ್ಸಿದ್ದರೂ, ಆ ಬ್ರಾಹ್ಮಣರು ಕಂಸನ ಭಯದಿಂದಾಗಿ, "ಯಜ್ಞಕಾರ್ಯ ಇನ್ನೂ ಮುಗಿದಿಲ್ಲ, ನೀವೆಲ್ಲರೂ ಇಲ್ಲಿಂದ ಕೂಡಲೇ ಹೊರಡಿ" ಎಂದು ಗದರಿಸಿ ಕಳುಹಿಸಿದರು.

ಸಪ್ಪೆ ಮೋರೆ ಹಾಕಿಕೊಂಡು ಬಂದ ಗೋಪಾಲಕರನ್ನು ಕಂಡ ಕೃಷ್ಣನು, "ನೀವು ಬ್ರಾಹ್ಮಣರನ್ನು ಕೇಳಬಾರದಿತ್ತು. ಹಿಂದುಗಡೆ ಬ್ರಾಹ್ಮಣ ಸ್ತ್ರೀಯರಿದ್ದಾರೆ. ಅವರ ಬಳಿ ಹೋಗಿ ಕೇಳಿರಿ" ಎಂದು ಹೇಳಿದನು. ಅಂತೆಯೇ ಅವರು ಅಲ್ಲಿಗೆ ಹೋಗಿ ಬ್ರಾಹ್ಮಣ ಸ್ತ್ರೀಯರನ್ನು ಕೇಳಿದಾಗ ಅವರೆಲ್ಲರೂ ಆಗತಾನೇ ತಯಾರಿಸಿದ್ದ ಬಿಸಿ ಬಿಸಿಯಾದ ಅಡುಗೆಯನ್ನು ತಲೆಯ ಮೇಲೆ ಹೊತ್ತುಕೊಂಡು ಬಂದು, ಕೃಷ್ಣನಿಗೆ ಮತ್ತು ಉಳಿದ ಗೋಪಾಲಕರಿಗೆ ಉಣಬಡಿಸಿದರು. ಅನಂತರ ಅವರೆಲ್ಲರೂ ಹಿಂತಿರುಗಿ ಹೋದರು. ಕೃಷ್ಣನು ಬ್ರಾಹ್ಮಣಸ್ತ್ರೀಯ ರೂಪ ತಾಳಿ, ಬ್ರಾಹ್ಮಣರು ನಡೆಸುತ್ತಿದ್ದ ಯಜ್ಞ ಕಾರ್ಯಕ್ಕೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಂಡನು.

ಕಂಸ ವಧೆ: ಕಂಸನ ಆಸ್ಥಾನಕ್ಕೆ ಬಂದ ನಾರದರು ಕಂಸನನ್ನು ಕಂಡು, "ಗೋಕುಲದಲ್ಲಿ ಬೆಳೆಯುತ್ತಿರುವ ಕೃಷ್ಣನೇ ನಿನ್ನ ತಂಗಿಯ ಎಂಟನೇ ಮಗು" ಎಂದು ಅವನಿಗೆ ಹೇಳಿದರು. "ಆತನೂ, ಅವನ ಅಣ್ಣನಾದ ಬಲರಾಮ – ಇಬ್ಬರೂ ಬಲಾಢ್ಯರಾಗಿದ್ದಾರೆ. ನೀನು ಕಳುಹಿಸಿಕೊಟ್ಟ ವೀರರೆಲ್ಲಾ ನಾಮಾವಶೇಷರಾದರು" ಎಂದರು. ಅದಕ್ಕೆ ಕಂಸನು, ಆತನನ್ನು ಸಂಹರಿಸಲು ತಾನು ಈಗಲೇ ಹೊರಡುವೆನೆಂದನು. ಅದಕ್ಕೆ



ನಾರದರು, "ಶಕ್ತಿಯಿಂದಲ್ಲ, ಅದನ್ನು ಯುಕ್ತಿಯಿಂದ ಸಾಧಿಸು" ಎಂದು ಹೇಳಿ ಹೊರಟುಹೋದರು.

ಕಂಸನು ತನ್ನ ಆಸ್ಥಾನದಲ್ಲಿದ್ದ ಚಾಣೂರ ಮತ್ತು ಮುಷ್ಟಿಕರೆಂಬ ದೈತ್ಯ ಮಲ್ಲರನ್ನು ಕರೆಸಿದನು. ಅವರಿಗೆ, "ಬಲರಾಮ ಕೃಷ್ಣರನ್ನು ಇಲ್ಲಿಗೆ ಕರೆಸುತ್ತೇನೆ. ನೀವು ಅವರಿಬ್ಬರನ್ನೂ ಮಲ್ಲ ಯುದ್ಧದಲ್ಲಿ ಸೋಲಿಸಿ ಕೊಲ್ಲಬೇಕು" ಎಂದನು. ವಸುದೇವ, ದೇವಕಿಯರನ್ನು ಪುನಃ ಸೆರೆಯಲ್ಲಿಟ್ಟನು. ಇದಕ್ಕೂ ಮೊದಲೇ ಮದೋನ್ಮತ್ತ ಆನೆಯನ್ನು ಕೃಷ್ಣಬಲರಾಮರ ಮೇಲೆ ಹಾಯಿಸಿ ಕೊಲ್ಲಬಹುದೆಂದೂ ಕಂಸನು ಯೋಚಿಸಿದನು. ಯಾದವರಿಗೆ ಪ್ರಿಯನಾದ ಅಕ್ರೂರನನ್ನು ಅರಮನೆಗೆ ಕರೆಸಿ, "ನಾನು ಧನುರ್ಯಾಗ ಎಂಬ ಯಜ್ಞವನ್ನು ಮಾಡುತ್ತಿದ್ದೇನೆ. ಆದ್ದರಿಂದ ಯಾದವರನ್ನು ಕೃಷ್ಣ, ಬಲರಾಮರ ಸಮೇತ ಕರೆದುಕೊಂಡು ಬಾ" ಎಂದು ರಮಿಸಿ ಕಳುಹಿಸಿದನು.

ಅಕ್ರೂರನಿಗೆ ಶ್ರೀಕೃಷ್ಣನು ಸಾಕ್ಷಾತ್ ಭಗವಂತನ ಅವತಾರ ಎಂದೂ, ಬಲರಾಮನು ಆದಿಶೇಷನ ಅವತಾರ ಎಂದೂ ತಿಳಿದಿತ್ತು. ಅವರ ಮಹಿಮೆ ಹಿರಿಮೆಯನ್ನು ನೆನೆಸುತ್ತಾ ವೃಂದಾವನ ಪ್ರವೇಶ ಮಾಡಿದನು. ದನಗಳ ಗುಂಪಿನಲ್ಲಿದ್ದ ಕೃಷ್ಣ, ಬಲರಾಮರನ್ನು ಕಂಡು ಅವನು ಸಂತೋಷಗೊಂಡನು. ಅವನು ಅವರ ಹತ್ತಿರ ಬಂದನು. ಆನಂದದಿಂದ ಅವನ ಗಂಟಲಲ್ಲಿ ಮಾತೇ ಹೊರಡಲಿಲ್ಲ. ಕೃಷ್ಣ ಬಲರಾಮರಿಗೆ ಅಕ್ರೂರನು ವಂದಿಸಿದನು. ಅವರು ಅವನನ್ನು ಪ್ರೀತಿಯಿಂದ ಅಲಂಗಿಸಿದನು. ಆದರಪೂರ್ವಕವಾಗಿ ಮನೆಗೆ ಕರೆತಂದು, ಅವನನ್ನು ಸತ್ಕರಿಸಿ ಉಪಚರಿಸಿದರು.

ಕಂಸನು ನಡೆಸುತ್ತಿರುವ ಯಜ್ಞ ಮತ್ತು ಅವರನ್ನು ಕರೆದುಕೊಂಡು ಬರಲು ಹೇಳಿರುವ ವಿಷಯವನ್ನು ತಿಳಿದ ಕೃಷ್ಣಬಲರಾಮರು, "ನಾವು ಕೂಡ ಕಂಸನನ್ನು ನೋಡಬೇಕಿದೆ; ಕೂಡಲೇ ಅಲ್ಲಿಗೆ ಹೊರಡೋಣ" ಎಂದು ನಿರ್ಧರಿಸಿದರು. ಆತನೊಂದಿಗೆ ಗೋಪಾಲಕರು ಮತ್ತು ಇತರರು ಮಥುರಾ ಪಟ್ಟಣಕ್ಕೆ ಬಂದು, ಅಲ್ಲಿನ ಉದ್ಯಾನವನವೊಂದರಲ್ಲಿ ತಂಗಿದರು.

ಮರುದಿನ ಪುರಪ್ರವೇಶ ಮಾಡಿದ ಬಲರಾಮಕೃಷ್ಣರು ದಾರಿಯಲ್ಲಿ ನಡೆದುಬರುತ್ತಿದ್ದಾಗ ಉಪ್ಪರಿಗೆಯಲ್ಲಿದ್ದ ಸ್ತ್ರೀಯರು, ವೃದ್ಧರು, ಮತ್ತಿತರರು ಅವರನ್ನು ನೋಡಿ ಆನಂದಿಸುತ್ತಿದ್ದರು. ಅರಮನೆಯ ಪೋಷಾಕನ್ನು ಧರಿಸಲು ಕೊಡಲು ಒಪ್ಪದ ಅಗಸನನ್ನು ಕೊಂದು, ರಾಜಪೋಷಾಕನ್ನು ಧರಿಸಿದರು. ಇವರಿಬ್ಬರಿಗಾಗಿ ಹೂಮಾಲೆಯನ್ನು ಸಿದ್ಧಪಡಿಸಿಕೊಂಡಿದ್ದ ಸುಧಾಮನೆಂಬ ಹೂಗಾರನಿಂದ ಹೂಮಾಲೆಯನ್ನು ಸ್ವೀಕರಿಸಿದರು. ಕುರೂಪಿಯಾದ ತ್ರಿವಕ್ರೆಯು ಕಂಸನಿಗಾಗಿ ಗಂಧವನ್ನು ತೆಗೆದುಕೊಂಡು ಹೋಗುತ್ತಿದ್ದಳು. ಅವಳು ಕೃಷ್ಣ–ಬಲರಾಮರಿಬ್ಬರನ್ನು ಕಂಡು ಅವರ ಅಂದ ಮತ್ತು ಗಾಂಭೀರ್ಯಕ್ಕೆ ಮರುಳಾಗಿ, ಗಂಧವನ್ನು ಅವರಿಗೆ ಅರ್ಪಿಸಿದಳು. ತ್ರಿವಕ್ರೆಯು ಕೂರೂಪಿಯಾಗಿದ್ದು, ಗೂನು ಬೆನ್ನಿನವಳಾಗಿ ಬಗ್ಗಿ ನಡೆಯುತ್ತಿದ್ದಳು. ಈಕೆಯನ್ನು ಉದ್ಧರಿಸಬೇಕೆಂದು ಶ್ರೀಕೃಷ್ಣನು ತೀರ್ಮಾನಿಸಿದನು. ಆಕೆಯ ಮುಖವನ್ನು ಹಿಡಿದು ಮೇಲೆತ್ತಿದನು. ಬಾಗಿದ್ದ ಆಕೆಯ ಶರೀರ ನೆಟ್ಟಗಾಯಿತು. ಕುರೂಪಿಯಾಗಿದ್ದವಳು ಸುಂದರಿಯಾಗಿ ಬದಲಾದಳು. ಆಕೆಯು ಸಂತಸಗೊಂಡು ತನ್ನ ಬದುಕನ್ನು ಕೃಷ್ಣನ ಸೇವೆಗಾಗಿ ಮೀಸಲಿಟ್ಟಳು.

ನಂತರ ಇಬ್ಬರೂ ಯಾಗ ಮಂಟಪಕ್ಕೆ ಬಂದರು. ಬಲರಾಮ, ಕೃಷ್ಣರು ಅಲ್ಲಿ ಪೂಜಿಸಿ ಇಟ್ಟಿದ್ದ ಶಿವಧನುಸ್ಸನ್ನು ಮುರಿದು ಹಾಕಿದರು. ಆ ಮುರಿದು ಬಿದ್ದ ಧನುಸ್ಸಿನ ಶಬ್ದವು ಸಿಡಿಲಿನಂತೆ ನಗರಕ್ಕೆಲ್ಲಾ ಕೇಳಿಸಿತು. ಅಲ್ಲಿದ್ದ ರಾಜಭಟರು, ಸೈನಿಕರು ಅವರಿಬ್ಬರ ಮೇಲೆ ಯುದ್ಧಕ್ಕೆ ಬಂದರು. ಕೃಷ್ಣ, ಬಲರಾಮರು ತಾವು ಮುರಿದ ಬಿಲ್ಲಿನಿಂದಲೇ ಅವರೆಲ್ಲರನ್ನೂ ಕೊಂದರು.

ಪುರಪ್ರವೇಶ ಮಾಡಿದ ಕ್ಷಣದಿಂದ ಬಲರಾಮ, ಕೃಷ್ಣರಿಂದ ನಡೆಯುತ್ತಿದ್ದ ಘಟನೆಗಳನ್ನು ನೋಡಿದ ಕಂಸನು, ಅದರಲ್ಲೂ ಮುರಿದ ಶಿವಧನುಸ್ಸಿನ ಶಬ್ದವನ್ನು ಕೇಳಿ ಮರಣಭಯದಿಂದ ತತ್ತರಿಸಿದನು. ಇದುವರೆಗೂ ಎಲ್ಲರ ಪಾಲಿಗೆ ಮರಣಭಯವನ್ನು ತಂದೊಡ್ಡುತ್ತಿದ್ದ ಕಂಸನಿಗೆ ಮರಣದ ಭಯದ ಅರಿವು ಉಂಟಾಗಿ, ಅದು ಅವನನ್ನು ಕಂಗೆಡಿಸಿತು. ಅವನು ಮದೋನ್ಮತ್ತ ಆನೆಯನ್ನು ಬಲರಾಮಕೃಷ್ಣರಿಬ್ಬರ ಮೇಲೆ ಹಾಯಿಸುವಂತೆ ಹೇಳಿದನು. ಬಲರಾಮ ಕೃಷ್ಣರು ಆನೆಯನ್ನು ಸಂಹರಿಸಿ, ಅರಮನೆಯಲ್ಲಿ ಮಲ್ಲಯುದ್ಧದ ಜಾಗಕ್ಕೆ ಬಂದರು. ಅಲ್ಲಿ ಕಂಸನು ಸಿಂಹಾಸನದ ಮೇಲೆ ಕುಳಿತಿದ್ದನು. ಅಷ್ಟರಲ್ಲಿ ಊರ ಜನರೆಲ್ಲರೂ ಅಲ್ಲಿ ಬಂದು ಸೇರಿದರು. ಬಲರಾಮ, ಕೃಷ್ಣರು ಮಲ್ಲಯುದ್ಧಕ್ಕಾಗಿ ಬಂದ ಚಾಣೂರ, ಮುಷ್ಟಿಕರಿಬ್ಬರನ್ನೂ ದರದರನೆ ಎಳೆದುತಂದು ನೆಲಕ್ಕೆ ಬೀಸಿ ಒಗೆದರು. ಕೃಷ್ಣನು ಕಂಸನತ್ತ ಓಡಿ ಆತನನ್ನು ಹಿಡಿದು ನೆಲಕ್ಕೆ ಒಗೆದನು. ಕಂಸನ ಪ್ರಾಣಪಕ್ಷಿಯು ಹಾರಿಹೋಯಿತು. *

ಭಾಗವತವನ್ನು ಕುರಿತು ಶ್ರೀರಾಮಕೃಷ್ಣರು

ಒಂದು ದಿನ ದಕ್ಷಿಣೇಶ್ವರದ ರಾಧಾಕಾಂತ ದೇವಾಲಯದಲ್ಲಿ ಭಾಗವತ ಪ್ರವಚನವನ್ನು ಕೇಳಿದ ಶ್ರೀರಾಮಕೃಷ್ಣರು ಭಾವಸಮಾಧಿ ಹೊಂದಿ, ಶ್ರೀಕೃಷ್ಣನ ಮನಮೋಹಕ ರೂಪದ ದರ್ಶನ ಅವರಿಗಾಯಿತು. ಕೃಷ್ಣನ ಪಾದಪದ್ಮಗಳಿಂದ ಹೊರಬಂದ ಬೆಳಕಿನ ಕಿರಣವೊಂದು ಮೊದಲು ಭಾಗವತ ಗ್ರಂಥವನ್ನು, ಬಳಿಕ ತಮ್ಮನ್ನು ಸ್ಪರ್ಶಿಸಿದ್ದನ್ನು ಅವರು ಕಂಡರು. ಈ ಮೂಲಕ ಆ ದಿವ್ಯ ಕಿರಣಗಳು ಭಗವಂತ, ಭಾಗವತ, ಭಕ್ತ – ಈ ಮೂರನ್ನೂ ಬೆಸೆದಿವೆ ಎಂದು ಅರಿತುಕೊಂಡ ಅವರು, ಈ ದರ್ಶನದ ನಂತರ ಹೇಳುತ್ತಿದ್ದರು: "ಭಗವಾನ್, ಭಕ್ತ, ಭಾಗವತ – ಈ ಮೂರೂ ನಿಜವಾಗಿಯೂ ಒಂದೇ ಎಂದು ನಾನು ಅರಿತುಕೊಂಡೆ."

ಪುಸ್ತಕ ಪರಿಚಯ

ಕಾರುಣ್ಯನಿಧಿ ಶ್ರೀಮಾತೆ ಶಾರದಾದೇವಿ



ಲೇಖಕರು : ಶ್ರೀಮತಿ ಎ.ಪಿ.ಮಾಲತಿ

ಪ್ರಕಾಶಕರು: ಸಾಹಿತ್ಯ ನಂದನ, ನಂ.೯, ೪ನೇ 'ಇ' ವಿಭಾಗ, ೧೦ 'ಎ' ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು – ೫೬೦ ೦೧೦

ಪುಟಗಳು : ೧೬೮ ಬೆಲೆ: ₹ ೯೦

ಕಾರುಣ್ಯನಿಧಿ ಶ್ರೀಮಾತೆ ಶಾರದಾದೇವಿಯವರ ಜೀವನಗಾಥೆ ಬರೆಯುವುದು ಬಹು ಸಾಹಸದ ಕೆಲಸವೇ ಸರಿ. ಲೇಖಕಿ ಎ.ಪಿ.ಮಾಲತಿಯವರು ಶ್ರೀಮಾತೆಯವರ ಮೇಲಣ ಅಪಾರ ಭಕ್ತಿ, ಶ್ರದ್ಧೆಯಿಂದ ಈ ಕೆಲಸ ಮಾಡಿದ್ದಾರೆ. ಈಗಾಗಲೇ ಅನೇಕ ಸ್ವಾಮೀಜಿಗಳು ಪ್ರಕಟಿಸಿರುವ ಶ್ರೀಮಾತೆಯವರನ್ನು ಕುರಿತ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು, ಸರಳವಾಗಿ ಚಿಕ್ಕದಾಗಿ ಶ್ರೀಮಾತೆಯವರ ಬಗ್ಗೆ ಬರೆದಿರುವುದು ನಿಜಕ್ಕೂ ಮೆಚ್ಚಬೇಕಾದ ಅಂಶ. ಇನ್ನು ಶ್ರೀಮಾತೆಯವರ ಬಗ್ಗೆ ಲೇಖಕಿಯವರಿಗೆ ಇರುವ ಶ್ರದ್ಧೆ, ಭಕ್ತಿ, ವ್ಯಾಕುಲತೆಗಳ ಬಗ್ಗೆ ಅವರೇ ಮೊದಲ ಮಾತಿನಲ್ಲಿ, 'ಶ್ರೀಮಾತೆಯವರೇ ನನ್ನನ್ನು ಸಂಪೂರ್ಣ ಆವರಿಸಿ ಕೈ ಹಿಡಿದು ಬರೆಸಿದ್ದಾರೆ' ಎಂದು ಹೇಳಿದ್ದಾರೆ. ಗುರುದೇವ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆ ಶಾರದಾದೇವಿಯವರ ಬಗ್ಗೆ ಎಷ್ಟು ಓದಿದರೂ, ಅವರ ನೆನಪುಗಳು ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುವಂತೆ, ಈ ಪುಸ್ತಕವೂ ಕೂಡ ಸುಲಭವಾಗಿ ಓದಿಸಿಕೊಂಡು ಹೋಗುವ ಗುಣ ಹೊಂದಿದೆ ಮತ್ತು ದಿವ್ಯದ್ವಯರ ವಿಷಯ ಮತ್ತೆ ಮತ್ತೆ ನೆನಪಿಸುವಂತೆ ಮಾಡುತ್ತದೆ. ಈ ಕೃತಿಯನ್ನು ಓದಿದಾಗ ಶ್ರೀಗುರುದೇವರ ಹಾಗೂ ಶ್ರೀಮಾತೆಯವರ ಜೀವನಗಂಗೆಯಲ್ಲಿ ಮಿಂದು ಕೃತಾರ್ಥರಾದೆವೆಂದು ಅನ್ನಿಸಬಹುದು. ಶ್ರೀಮಾತೆಯವರ ಜೀವನ, ಪ್ರೀತಿ, ಭಕ್ತರ ಮೇಲಿನ ಮಮತೆ, ಅವರ ಸರಳತೆಗಳಿಗೆ ಲೇಖಕಿ ಹೆಚ್ಚು ಮಹತ್ವ ನೀಡಿರುವುದು ಶ್ಲಾಘನೀಯ.

ಈ ಪುಸ್ತಕ ಶ್ರೀಮಾತೆ ಶಾರದಾದೇವಿಯವರ ಬಗ್ಗೆ ಹೆಚ್ಚು ತಿಳಿಯದಿದ್ದವರಿಗೆ ಓದಲು ಆಸಕ್ತಿ ಹುಟ್ಟಿಸಿ, ಅವರ ಬಗ್ಗೆ ಇನ್ನೂ ಹೆಚ್ಚು ತಿಳಿಯುವ, ಓದುವ ಹಂಬಲವನ್ನು ಖಂಡಿತ ಮೂಡಿಸುತ್ತದೆ. ಪುಸ್ತಕದ ರಕ್ಷಾಕವಚದಲ್ಲಿ ಮುದ್ರಿಸಿರುವ ಶ್ರೀಮಾತೆಯವರ ಚಿತ್ರ ಭಕ್ತಿ, ಪ್ರೇಮ ಹುಟ್ಟಿಸುವಂತಿದೆ. ಅವರ ಧ್ಯಾನಮುದ್ರೆ ಆಕರ್ಷಕವಾಗಿ ಬಂದಿದೆ. ಒಟ್ಟಿನಲ್ಲಿ ಇದೊಂದು ಸಂಗ್ರಹಯೋಗ್ಯವಾದ ಪುಸ್ತಕವೆನ್ನುವುದರಲ್ಲಿ ಎರಡು ಮಾತಿಲ್ಲ.

ಕಮಲಾದೇವಿ ಚಟ್ಟೋಪಧ್ಯಾಯ – ಒಂದು ವಿಸ್ಮಯ



ಲೇಖಕಿ : ಶ್ರೀಮತಿ ಸೇವಂತಿ ಡಿ. ರೈ

ಪ್ರಕಾಶಕರು : ಲಲಿತ್ ಕಲ್ಯಾಣ್, ನಂ. ೪೭೬, ೨ನೇ ಮುಖ್ಯರಸ್ತೆ, ಐ ಬ್ಲಾಕ್, ರಾಮಕೃಷ್ಣನಗರ, ಮೈಸೂರು – ೫೭೦ ೦೨೨

ಪುಟ : ೧೬೪ ಬೆಲೆ: ₹ ೧೫೦/–

ಪದ್ಮವಿಭೂಷಣ, ಪದ್ಮಭೂಷಣ, ಮ್ಯಾಗ್ಸೆಸೆ ಮುಂತಾದ ಅನೇಕ ಪ್ರಶಸ್ತಿಗಳನ್ನು ಪಡೆದ, ಬಹುಮುಖ ಪ್ರತಿಭೆಯಿಂದ ಹೆಸರಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ನಮ್ಮ ದೇಶದ ಅನರ್ಘ್ಯ ಸ್ತ್ರೀರತ್ನ. ಇವರ ಜೀವನಗಾಥೆಯೇ ಒಂದು ವಿಸ್ಮಯ. ಸ್ವಾತಂತ್ರ್ಯ ಸಂಗ್ರಾಮ, ಗಾಂಧೀಜಿ ಮುಂತಾದವರ ಒಡನಾಟ, ಬಡಜನ, ಮಹಿಳೆಯರ ಪರವಾದ ಹೋರಾಟ, ಕಾರ್ಮಿಕ ಸಂಘಟನೆ, ಧೈರ್ಯ, ಪ್ರಾಮಾಣಿಕತೆ, ಲಲಿತಕಲೆಗಳ ಆರಾಧನೆ ಇವುಗಳನ್ನು ಲೇಖಕಿ ವಿಸ್ತಾರವಾಗಿ ಹೃದಯ ಮುಟ್ಟುವಂತೆ ವಿವರಿಸಿದ್ದಾರೆ.

ದಕ್ಷಿಣ ಕನ್ನಡದಲ್ಲಿ ಜನಿಸಿದ ಕಮಲಾದೇವಿಯವರ ವಿಷಯದ ಜೊತೆಗೆ ಅಲ್ಲಿನ ಸಾಮಾಜಿಕ ಜೀವನ, ಸಾರಸ್ವತ–ಗೌಡ ಸಾರಸ್ವತರ ಹಿನ್ನೆಲೆ, ಜೀವನ ರೀತಿನೀತಿಗಳು, ತುಳುನಾಡ ಭೌಗೋಳಿಕ ವಿವರಣೆ, ಚಾರಿತ್ರಿಕ ವಿಚಾರಗಳು, ಹವಾಮಾನ, ನೀರು, ವ್ಯವಸಾಯ, ಜನರ ಸಂಪ್ರದಾಯಗಳು ಇವುಗಳ ಬಗ್ಗೆ ವಿವರವಾದ ಮಾಹಿತಿ ನೀಡಿದ್ದಾರೆ.

ಕಮಲಾದೇವಿಯವರಂಥ ಮಹಾನ್ ಚೇತನದ ಬಗ್ಗೆ ಬರೆಯಲು ಎಲ್ಲಾ ಐತಿಹ್ಯಗಳನ್ನು, ಇತರರು ಬರೆದ ಬರವಣಿಗೆಗಳನ್ನು ಕಲೆಹಾಕಿ, ಲೇಖಕಿ ತಮ್ಮ ಸ್ವಂತ ಕಥನಗುಣವನ್ನು ಈ ಬರವಣಿಗೆಯ ಮೂಲಕ ಚೆನ್ನಾಗಿ ತೋರಿಸಿದ್ದಾರೆ.

ಈ ಪುಸ್ತಕಕ್ಕೆ ಕಮಲಾದೇವಿ ಚಟ್ಟೋಪಧ್ಯಾಯ – ಒಂದು ವಿಸ್ಮಯ ಎಂದು ಇಟ್ಟಿರುವ ಹೆಸರು ಸಾರ್ಥಕವೆನಿಸುತ್ತದೆ.

ಒಟ್ಟಿನಲ್ಲಿ ಮಹಿಳೆ ಮನಸ್ಸಿದ್ದರೆ, ಯಾವ ತೊಂದರೆಯೇ ಇರಲಿ, ಆಕೆ ಏನನ್ನಾದರೂ ಮಾಡಬಲ್ಲಳು ಎಂಬುದಕ್ಕೆ ಕಮಲಾದೇವಿ ಒಂದು ಉದಾಹರಣೆ. ಮಹಾತ್ಮಾ ಗಾಂಧೀಜಿಯವರ ಒಡನಾಟ, ದಂಡೀಯಾತ್ರೆ, ಸ್ವಾತಂತ್ರ್ಯ ಚಳುವಳಿ, ಸೆರೆವಾಸ, ಇವನ್ನೆಲ್ಲಾ ಓದುತ್ತಾ ಹೋದಂತೆ, ಓದುಗರಲ್ಲಿ ದೇಶಪ್ರೇಮದ ಕಿಚ್ಚು ಹೆಚ್ಚುವಂತಿದೆ. ಮಹಿಳೆ ಅಬಲೆಯಲ್ಲ, ಸಬಲಳು ಎಂಬ ಮಾತನ್ನು ನಿಜ ಮಾಡಬೇಕೆನ್ನಿಸುವಂತಿದೆ. ಒಟ್ಟಾರೆ ಒಂದು ಸೊಗಸಾದ, ಅತ್ಯುತ್ತಮವಾದ, ಮುಖ್ಯವಾಗಿ ಎಲ್ಲ ಮಹಿಳೆಯರೂ ಓದಲೇಬೇಕಾದ ಪುಸ್ತಕ. ಸುಮಾರು ೧೫೦ ಪುಟಗಳಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾದ್ಯಾಯರವರ ಸಂಪೂರ್ಣ ವ್ಯಕ್ತಿ ಚಿತ್ರಣವನ್ನು ಸುಂದರವಾಗಿ ನಿರೂಪಿಸಿದ್ದಾರೆ. ಭಾವಚಿತ್ರಗಳು ಸುಂದರವಾಗಿವೆ. ಅವುಗಳು ಕಮಲಾದೇವಿಯವರನ್ನು ನೆನೆಪಿಸಿಕೊಳ್ಳಲು ಅನುಕೂಲವಾಗಿದೆ. ಎಲ್ಲ ದೃಷ್ಟಿಯಿಂದಲೂ ಈ ಪುಸ್ತಕವನ್ನು ಬರೆದಿರುವ ಶ್ರೀಮತಿ ಸೇವಂತಿ ಡಿ. ರೈಯವರು ಅಭಿನಂದನಾರ್ಹರು.

–ಉಷಾ

ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು



ಡಾ. ಕೆ. ಅನಂತರಾಮು

ಶ್ರೀಕೃಷ್ಣ ತುಲಾಭಾರ

ನಾನು ಪ್ರೀತಿಸುತ್ತಿರುವ ಪುರುಷನು ಸಾಮಾನ್ಯನಲ್ಲ, ಅವನು ಪಂಚಭೂತಗಳಿಂದಾಗಿರುವ ಸಾಮಾನ್ಯ ಶರೀರನಲ್ಲ. ಅವನು ಸಾಕ್ಷಾತ್ ಭಗವಂತನೇ ಆಗಿದ್ದಾನೆ ಎಂಬ ಭಾವನೆ ಬಂದಾಗ ಮಾತ್ರವೇ ನಾವು ಅವನನ್ನು ಪರಿಪೂರ್ಣವಾಗಿ ಪ್ರೀತಿಸುವುದು ಸಾಧ್ಯವಾಗುತ್ತದೆ. "ನನ್ನ ಗಂಡನೇ ನನಗೆ ದೇವರು" ಎಂದು ಭಾವಿಸಿದಾಗ, ಹೆಂಡತಿಯು ಅವನನ್ನು ಪರಿಪೂರ್ಣವಾಗಿ ಪ್ರೀತಿಸಲು ಸಾಧ್ಯವಾಗುತ್ತದೆ. ಹಾಗೆಯೇ "ನನ್ನ ಹೆಂಡತಿಯೇ ನನಗೆ ದೇವರು" ಎಂದು ಭಾವಿಸಿದಾಗ, ಗಂಡನು ಅವಳನ್ನು ಪರಿಪೂರ್ಣವಾಗಿ ಪ್ರೀತಿಸುವುದು ಸಾಧ್ಯವಾಗುತ್ತದೆ. ನಾವು ಯಾರನ್ನು ಪ್ರೀತಿಸುತ್ತೇವೆಯೋ ಅವರನ್ನು ಗೌರವಿಸುವುದು, ಪೂಜಿಸುವುದಲ್ಲದೆ ಬೇರೆ ಯೋಚನೆಯೇ ಅಲ್ಲಿರುವುದಿಲ್ಲ. ಪ್ರೇಮವೆಂಬುದು ಭಗವಂತನ ಸ್ವರೂಪವೇ ಆಗಿದೆ. ಆ ಪ್ರೇಮವೆಂಬ ಶಕ್ತಿಯೇ ಸೂರ್ಯಚಂದ್ರತಾರಾವಳಿಗಳನ್ನೆಲ್ಲ ಚಲಿಸುವಂತೆ ಮಾಡುತ್ತದೆ. ಆ ಪ್ರೇಮಶಕ್ತಿಯೇ ಸ್ತ್ರೀಪುರುಷರು, ಪಶುಪಕ್ಷಿಗಳು ಮತ್ತು ಸೃಷ್ಟಿಯ ಪ್ರತಿಯೊಂದರ ಅಂತರಾಳದಲ್ಲಿಯೂ ಇದ್ದುಕೊಂಡಿರುವ ತತ್ತ್ವವಾಗಿದೆ. ಸುತ್ತಲೂ ಹಬ್ಬಿಹರಡಿಕೊಂಡಿರುವ ಪ್ರಪಂಚದ ಹಿಂದೆ ಇರುವುದು ಅನಂತಪ್ರೇಮವೆಂಬ ಏಕಮಾತ್ರ ಕ್ರಿಯೋತ್ತೇಜಕ ಶಕ್ತಿಯೇ ಆಗಿದೆಯೆಂದು ವಿವೇಕಾನಂದರು ಹೇಳುತ್ತ ಪತಿಯೇ ದೇವರೆಂದು ಪ್ರೀತಿಸಿದ ರುಕ್ಮಿಣಿಯ ವೃತ್ತಾಂತವನ್ನು ಉಲ್ಲೇಖಿಸಿದ್ದಾರೆ. ಆ ವೃತ್ತಾಂತದ ವಿವರಗಳನ್ನು ಸ್ವಲ್ಪ ಸ್ಫುಟಗೊಳಿಸಿಕೊಂಡರೆ ವಿವೇಕಾನಂದರ ಚಿಂತನೆ ನಮಗೆ ಮನಮುಟ್ಟುತ್ತದೆ.

ಶ್ರೀಕೃಷ್ಣನ ರಾಣಿಯರಲ್ಲಿ ರುಕ್ಮಿಣಿ ಮತ್ತು ಸತ್ಯಭಾಮೆಯರು ಹೆಚ್ಚು ಪ್ರಸಿದ್ಧರಾಗಿದ್ದರು. ಸತ್ಯಭಾಮೆಯು ತನ್ನ ರೂಪವಿಲಾಸದಿಂದ ಕೃಷ್ಣನನ್ನು ಒಲಿಸಿಕೊಳ್ಳಲು ಯತ್ನಿಸುತ್ತಿದ್ದರೆ, ರುಕ್ಮಿಣಿಯು ತನ್ನ ಭಕ್ತಿವಿಲಾಸದಿಂದ ಅವನನ್ನು ಒಲಿಸಿಕೊಂಡಿದ್ದಳು. ರುಕ್ಮಿಣಿಯನ್ನು ಕಂಡರೆ ಸತ್ಯಭಾಮೆಗೆ ಅಷ್ಟಕ್ಕಷ್ಟೆ! ಒಮ್ಮೆ ನಾರದಮುನಿಗಳು ಶ್ರೀಕೃಷ್ಣನ ಅರಮನೆಯನ್ನು ಹೊಕ್ಕು, ತಾವು ಇಂದ್ರಲೋಕದಿಂದ ತಂದಿದ್ದ ಪಾರಿಜಾತ ಕುಸುಮದ ಪ್ರಸಾದವನ್ನು ಶ್ರೀಕೃಷ್ಣನ ಕೈಗಿತ್ತರು. ಅದನ್ನು ಕೃಷ್ಣನು ರುಕ್ಮಿಣಿಯ ಮುಡಿಗೇರಿಸಿಬಿಟ್ಟನು. ಅದನ್ನು ಸತ್ಯಭಾಮೆ ಸಹಿಸಿಕೊಳ್ಳಲಿಲ್ಲ. ಕೊನೆಗೆ ಆ ಪಾರಿಜಾತವೃಕ್ಷವನ್ನೇ ಇಂದ್ರಲೋಕದಿಂದ ತಂದು, ಸತ್ಯಭಾಮೆಯ ಮನೆಯಂಗಳದಲ್ಲಿ ನೆಟ್ಟುನಿಲ್ಲಿಸಬೇಕಾಯಿತು. ಆದರೇನು, ಆ ಪಾರಿಜಾತ ವೃಕ್ಷದ ಪುಷ್ಪವೆಲ್ಲ ರುಕ್ಮಿಣಿಯ ಮನೆಯಂಗಳದಲ್ಲಿ ಉದುರುತ್ತಿತ್ತು!

ಒಮ್ಮೆ ಸತ್ಯಭಾಮೆಯು ನಾರದರನ್ನು ಕುರಿತು "ಮಹರ್ಷಿಗಳೇ, ಜನ್ಮಜನ್ಮಾಂತರಕ್ಕೂ ಶ್ರೀಕೃಷ್ಣನೇ ನನಗೆ ಗಂಡನಾಗಬೇಕೆಂಬ ಹಂಬಲವಿದೆ; ಅದು ಈಡೇರಲು ಏನಾದರೂ ದಾರಿಯಿದೆಯೆ?" ಎಂದು ಕೇಳಿದಳು. ಅದಕ್ಕೆ ನಾರದರು "ಓಹೋ, ಇದೆ ತಾಯೆ, ನೀನು ಪುಣ್ಯಕವೆಂಬ ವ್ರತವನ್ನಾಚರಿಸಿ, ಅದರ ಮುಕ್ತಾಯದಲ್ಲಿ ಶ್ರೀಕೃಷ್ಣನನ್ನು ಯಾರಾದರೂ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟುಬಿಡು. ಆಗ ನಿನ್ನ ಹಂಬಲಕ್ಕೆ ಬೆಂಬಲ ದೊರಕುತ್ತದೆ" ಎಂದರು. ಸರಿಯೆ, ವ್ರತ ನಡೆದೇ ಹೋಯಿತು. ಅ ಹೊತ್ತಿಗೆ ಸರಿಯಾಗಿ ಅಲ್ಲಿಗೆ ಬಂದ ನಾರದರಿಗೇ ಪತಿದೇವರನ್ನು ದಾನ ಮಾಡಿದ್ದೂ ಆಗಿಹೋಯಿತು. ಆಗ ಶ್ರೀಕೃಷ್ಣನು ನಾರದರನ್ನು ಕುರಿತು, "ಈಗ ನಾನು ಏನು ಮಾಡಬೇಕು ಸ್ವಾಮಿ" ಎಂದು ಕೇಳಿದನು. ಅದಕ್ಕೆ ನಾರದರು "ಏನು ಮಾಡಬೇಕು ಎನ್ನುತ್ತೀಯಲ್ಲಪ್ಪಾ, ಇನ್ನು ಅರಮನೆಯಲ್ಲಿ ಇರುವಂತಿಲ್ಲ, ಹಿಡಿದುಕೋ ಈ ತಂಬೂರಿ, ನಡೆ ಹಾಡುತ್ತಾ ನನ್ನ ಹಿಂದೆ, ನೀನಿನ್ನು ನನ್ನ ಅನುಚರನಲ್ಲವೆ?" ಎಂದರು.

ಆಗ ಸತ್ಯಭಾಮೆಗೆ ಸಿಡಿಲೆರಗಿದಂತಾಯಿತು, ದಿಕ್ಕು ತೋಚದಾಯಿತು. "ಇದೆಂತಹ ಕೆಲಸ ಮಾಡಿಬಿಟ್ಟೆ" ಎಂದು ತನ್ನ ತಪ್ಪಿನ ಅರಿವಾಯಿತು. "ಈಗ ನೀವೇ ಏನಾದರೂ ಮಾರ್ಗ ತೋರಿಸಿ ನಾರದರೇ, ಸ್ವಾಮಿಯನ್ನು ಕಳೆದುಕೊಳ್ಳಲುಂಟೇ" ಎಂದು ಅಂಗಲಾಚಿದಳು. ಆಗ ನಾರದರು "ನಾನೇನೋ ಕೃಷ್ಣನನ್ನು ನಿನಗೇ ಮರಳಿಸಿ ಬಿಡುತ್ತೇನೆ. ಆದರೆ ದಾನವಾಗಿ ಕೊಟ್ಟುದನ್ನು ಮರಳಿ ಪಡೆದರೆ 'ದತ್ತಾಪಹಾರ' ಎಂಬ ದೋಷ ನಿನಗೆ ಅಂಟಿಕೊಳ್ಳುತ್ತದೆಯಲ್ಲ, ಅದಕ್ಕೇನು ಮಾಡುತ್ತೀಯೆ ತಾಯೆ" ಎಂದರು. "ಅದಕ್ಕೂ ನೀವೇ ಏನಾದರೂ ಪರಿಹಾರ ಸೂಚಿಸಬೇಕು ನಾರದರೆ" ಎಂದು ಸತ್ಯಭಾಮೆ ಅವರಿಗೇ ಶರಣಾದಳು. ಆಗ ನಾರದರು "ತಾಯೆ, ತುಲಾಭಾರದ ಮೂಲಕ ಕೃಷ್ಣನ ತೂಕಕ್ಕೇ ಸಮನಾಗುವ ನಿನ್ನ ಆಭರಣಗಳನ್ನು ತೂಗಿಸಿ ನನಗೆ ದಾನಮಾಡು, ನಾನು ನಿನಗೆ ಕೃಷ್ಣನನ್ನು ಹಿಂದಕ್ಕೆ ಕೊಡುತ್ತೇನೆ. ಆಗ ದೋಷವೆಲ್ಲ ಪರಿಹಾರವಾಗುತ್ತದೆ" ಎಂದು ಸಲಹೆಕೊಟ್ಟರು.

ಸತ್ಯಭಾಮೆಗೆ ಹೋದ ಜೀವ ಬಂದಂತಾಯಿತು. ಲಗುಬಗೆಯಿಂದ ಕೃಷ್ಣನನ್ನು ತಕ್ಕಡಿಯ ಒಂದು ತಟ್ಟೆಯಲ್ಲಿ ಕೂರಿಸಿ,

ತನ್ನ ಸ್ವರ್ಣಾಭರಣಗಳನ್ನೆಲ್ಲ ತಂದು ತಂದು ಇನ್ನೊಂದು ತಟ್ಟೆಗೆ ಅಡಕಿದಳು. ಅವಳ ಆಭರಣವೆಲ್ಲ ಬರಿದಾಯಿತೇ ಹೊರತು, ಕೃಷ್ಣನ ತೂಕಕ್ಕೆ ಅದು ಸಮನಾಗಲಿಲ್ಲ. "ಈಗ ನೀವೇ ಏನಾದರೂ ಮಾಡಬೇಕು ನಾರದರೇ" ಎಂದು ಸತ್ಯಭಾಮೆಯು ತಲೆಯ ಮೇಲೆ ಕೈಹೊತ್ತು ಕುಳಿತುಬಿಟ್ಟಳು. ಆಗ ನಾರದರು, "ರುಕ್ಮಿಣಿಯನ್ನೊಮ್ಮೆ ಕೇಳಿ ನೋಡು ತಾಯೆ, ಅವಳ ಆಭರಣಗಳನ್ನೂ ತೂಗಿಸು" ಎಂದರು. ಸತ್ಯಭಾಮೆಗೆ ಅದು ಇಷ್ಟವಿಲ್ಲದಿದ್ದರೂ ಪತಿದೇವರನ್ನು ಕಳೆದುಕೊಳ್ಳಬೇಕಲ್ಲಾ ಎಂಬ ಸಂಕಟದಿಂದ ಅಸಹಾಯಕಳಾಗಿ, "ನೀನೂ ಬಾ ರುಕ್ಮಿಣಿ, ಸಹಾಯ ಮಾಡು" ಎಂದಳು.

ಆಗ ರುಕ್ಮಿಣಿಯು "ಹದಿನಾಲ್ಕು ಲೋಕಗಳ ಸಂಪತ್ತನ್ನೆಲ್ಲ ತಂದು ಸುರಿದರೂ ಈ ಸ್ವಾಮಿಗೆ ಸಮನಾಗಿ ಅದು ತೂಗಬಲ್ಲದೇ ಅಕ್ಕ, ಜಗತ್ತಿಗೆಲ್ಲ ಸೇರಿದ ಅವನನ್ನು ನಾನೇ ಕಟ್ಟಿಹಾಕಿಕೊಳ್ಳುತ್ತೇನೆಂದರೆ, ಅದು ನಡೆಯುವುದುಂಟೇ ಅಕ್ಕ, ಅದೆಲ್ಲ ಈಗ ಬೇಡ" ಎನ್ನುತ್ತ ರುಕ್ಮಿಣಿಯು ಒಂದು ತುಳಸೀಪತ್ರದ ಮೇಲೆ 'ಶ್ರೀಕೃಷ್ಣ' ಎಂದು ಬರೆದು, ಸತ್ಯಭಾಮೆಯ ಆಭರಣಗಳು ತುಂಬಿದ್ದ ತಟ್ಟೆಯೊಳಕ್ಕೆ ಹಾಕುತ್ತ "ದೇವದೇವೋತ್ತಮನೆ, ದೇವತಾಸಾರ್ವಭೌಮನೆ, ಅಖಿಲಾಂಡ ಕೋಟಿ ಬ್ರಹ್ಮಾಂಡನಾಯಕನೇ, ನಿನ್ನಲ್ಲಿ ಎಳ್ಳನಿತು ಭಕ್ತಿ ನನ್ನ ಹೃದಯದಲ್ಲೇನಾದರೂ ಇದ್ದರೆ ನೀನು ಸಮನಾಗಿ ತೂಗಿಬಿಡು ಸ್ವಾಮಿ" ಎಂದು ನಮಸ್ಕರಿಸಿ ಮೇಲೆದ್ದಳು. ಒಂದು ಕೃಷ್ಣನಾಮವೇ ಸಾಕಾಗಿ, ತಕ್ಕಡಿ ಸಮನಾಗಿ ತೂಗಿಬಿಟ್ಟಿತು, ಮೀರಿಬಿಟ್ಟಿತು, ತೂಗಾಡಿಬಿಟ್ಟಿತು. ಆಗಲೇ ಸತ್ಯಭಾಮೆಯ ಗರ್ವರಸವೆಲ್ಲ ಸೋರಿಬಿಟ್ಟಿತು.

ನಾನು ಒಬ್ಬ ದೊಡ್ಡ ಮನುಷ್ಯ, ನಾನು ಅಂಥವನು, ಇಂಥವನು ಎಂಬೀ ಅಹಂಕಾರಗಳೆಲ್ಲ ಹೋಗದ ಹೊರತು ಭಗವಂತನ ಸಾಕ್ಷಾತ್ಕಾರ ಪಡೆದುಕೊಳ್ಳಲಾಗುವುದಿಲ್ಲ. 'ಅಹಂ' ಎಂಬ ಗುಡ್ಡವನ್ನು 'ಭಕ್ತಿ' ಎಂಬ ನೀರಿನಿಂದ ನೆನೆಯಿಸಿ ನೆಲಸಮ ಮಾಡಿಬಿಡಬೇಕು ಎಂಬ ಪರಮಹಂಸರ ವಾಣಿಯನ್ನು ಈ ಸಂದರ್ಭಕ್ಕೆ ಜೋಡಿಸಿಕೊಂಡು, ಸತ್ಯಭಾಮೆಯನ್ನೂ ರುಕ್ಮಿಣಿಯನ್ನೂ ನೋಡಬೇಕು.

'ಶ್ರೀರಾಮಕೃಷ್ಣ ವಚನವೇದ'ದಲ್ಲಿಯೇ ತುಲಾಭಾರದ ಈ ದೃಷ್ಟಾಂತವು ಬಂದಿದೆ. ಪರಮಹಂಸರು ಭಾವಾವಿಷ್ಟರಾಗಿ ಒಬ್ಬರೇ ನಡೆದುಹೋಗುತ್ತಿದ್ದಾಗ ಆಯತಪ್ಪಿ ನೆಲಕ್ಕೆ ಬಿದ್ದು ಅವರ ಎಡಗೈ ತೋಳಿನ ಕೀಲು ಜಾರಿ ನೋವಿಗೆ ತುತ್ತಾದರು. ಅದನ್ನು ಸರಿಪಡಿಸಲು ಮಧುಸೂದನ ಎಂಬ ವೈದ್ಯನು ದಬ್ಬೆಯ ತುಂಡುಗಳು, ಬಟ್ಟೆಯ ಪಟ್ಟಿಗಳ ಸಹಿತವಾಗಿ ಬಂದನು. ಅವನನ್ನು ನೋಡುತ್ತ ಪರಮಹಂಸರು ಬಾಲಕನಂತೆ ನಗುತ್ತ "ನೀನು ಇಹಪರಗಳ ಮಧುಸೂದನನಪ್ಪಾ" ಎಂದು ಅಕ್ಕರೆಯ ಮಾತನಾಡಿದರು. ಅದಕ್ಕೆ ವೈದ್ಯನು "ಮಧುಸೂದನ ಎಂಬ ಹೆಸರಿನ ಹೊರೆಯನ್ನಷ್ಟೇ ನಾನು ಹೊತ್ತುಕೊಂಡಿದ್ದೇನೆ ಮಹಾರಾಜ್" ಎಂದು ವಿನೀತಭಾವದಿಂದ ಹೇಳಿದನು. ಆಗ ಪರಮಹಂಸರು "ಹೆಸರಿನ ಮಹಿಮೆಯೇನೂ ಕಡಿಮೆ



ಯೆಂದು ತಿಳಿಯಬೇಡ. ಭಗವಂತನಿಗೂ ಅವನ ಹೆಸರಿಗೂ ವ್ಯತ್ಯಾಸವೇನಿಲ್ಲ" ಎನ್ನುತ್ತ ತುಲಾಭಾರದ ಕಥೆಯನ್ನು ಆಗಲೇ ಹೇಳಿಬಿಟ್ಟರು. "ಸತ್ಯಭಾಮೆಯು ಚಿನ್ನ, ರತ್ನ, ಮಾಣಿಕ್ಯ ಇವುಗಳಿಂದ ಶ್ರೀಕೃಷ್ಣನನ್ನು ತುಲಾಯಂತ್ರದಲ್ಲಿ ತೂಗಲು ಪ್ರಯತ್ನಮಾಡಿದಾಗ, ಆಕೆ ತಕ್ಕಡಿತಟ್ಟೆಗಳನ್ನು ಒಂದು ಸಮ ತೂಕಕ್ಕೆ ತರಲಾಗಲಿಲ್ಲ. ಆಗ ರುಕ್ಮಿಣಿ ತುಳಸಿ ಎಲೆಯ ಮೇಲೆ ಕೃಷ್ಣನ ಹೆಸರನ್ನು ಬರೆದು, ತೂಕದ ತಟ್ಟೆಗೆ ಹಾಕಿದಳು. ಒಡನೆ ತೂಕ ಸರಿಹೋಗಿಬಿಟ್ಟಿತು" ಎಂದು ನಗುತ್ತಲೇ ಹೇಳುತ್ತ, ನಗುತ್ತಲೇ ತೋಳಿಗೆ ಪಟ್ಟಿಹಾಕಿಸಿಕೊಂಡರು.

ಸನಾತನ ಹಿಂದೂಧರ್ಮಕ್ಕೆ ಸೇರಿದ ಜನರು ಶಬ್ದಗಳಿಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ವೇದಗಳು ಶಬ್ದಮಯವಾಗಿದ್ದು, ಅವುಗಳನ್ನು ಶ್ರುತಿ ಎಂದು ಕರೆಯುತ್ತಾರೆ. ಗುರು ಉಚ್ಚರಿಸಿದ ಶಬ್ದರಾಶಿಯನ್ನೇ ತಾನೂ ಎಚ್ಚರದಿಂದ ಕೇಳಿಸಿಕೊಂಡು ಕಲಿತುಕೊಳ್ಳುವುದೇ ಶ್ರುತಿ. ಅಲ್ಲಿ ಶಬ್ದಗಳ ಉಚ್ಚಾರಣೆ ನಿರ್ದಿಷ್ಟವಾದ ಏರಿಳಿತಗಳಲ್ಲಿಯೇ ಆಗಬೇಕು. ಆ ಶಬ್ದಗಳೇ ದೇವರು. ಹಾಗೆಯೇ ರಾಮ, ಕೃಷ್ಣ, ಶಿವ, ದುರ್ಗ ಎಂಬ ಶಬ್ದಗಳೇ ದೇವರು. ಸನಾತನ ಮನಸ್ಸಿನಲ್ಲಿರುವ ಭಾವನೆಯ ವಿಷಯೀಕರಣವೇ ದೇವರು. ನಮಗಿಂತ ನಮ್ಮ ಹೆಸರು ಅನಂತವಾಗಿ ಪೂರ್ಣವಾಗಿದೆ. ಹಾಗೆಯೇ ದೇವರ ಹೆಸರು, ದೇವರಿಗಿಂತ ದೊಡ್ಡದು ಎಂದು ವಿವೇಕಾನಂದರು ಈ ತುಲಾಭಾರದ ಸನ್ನಿವೇಶವನ್ನು ವಿಶ್ಲೇಷಣೆ ಮಾಡಿದ್ದಾರೆ. ಆದ್ದರಿಂದಲೇ ಕೃಷ್ಣನ ತೂಕಕ್ಕಿಂತ ಅವನ ನಾಮದ ತೂಕವೇ ಹೆಚ್ಚಾಗಿಹೋಯಿತು. *

ಗುರುಪೂರ್ಣಿಮೆ

ಎಚ್.ಎಲ್.ಸೀತಾದೇವಿ

ಭಾರತದೆಲ್ಲೆಡೆ ಹಲವು ರೀತಿಯಿಂದ ಆಚರಿಸಲ್ಪಡುತ್ತಿರುವ ಗುರುಪೂರ್ಣಿಮೆ ನಮ್ಮ ಸಂಸ್ಕೃತಿಯ ಶ್ರದ್ಧೆ, ವಿಶ್ವಾಸಗಳ ದ್ಯೋತಕವಾಗಿದೆ. ಈ ವಿಶಿಷ್ಟ ಹಬ್ಬವನ್ನು ಕುರಿತು ವಿಚಾರಪೂರ್ಣ ಲೇಖನವನ್ನು ಬರೆದಿರುವ ಲೇಖಕಿ 'ಆಕಾಶವಾಣಿ'ಯಲ್ಲಿ ವಾರ್ತಾವಾಚಕಿಯಾಗಿ, 'ಕನ್ನಡಪ್ರಭ' ದೈನಿಕದಲ್ಲಿ ಉಪಸಂಪಾದಕಿಯಾಗಿ ಸೇವೆ ಸಲ್ಲಿಸಿದ್ದರು.

ಅಚತುರ್ವದನೋ ಬ್ರಹ್ಮ ದ್ವಿಬಾಹುರಪರೋ ಹರಿಃ ।
ಅಫಾಲಲೋಚನಃ ಶಂಭುಃ ಭಗವಾನ್ ಬಾದರಾಯಣಃ ॥

ಆಷಾಢಮಾಸದ ಹುಣ್ಣಿಮೆ ತುಂಬಾ ಪವಿತ್ರವಾದ ದಿನ. ಗುರುವಿಗೆ ಕೃತಜ್ಞತೆ ಸಲ್ಲಿಸುವ ದಿನ. ನಮ್ಮ ಪರಂಪರೆಯಲ್ಲಿ ಗುರುವಿಗೆ ವಿಶೇಷವಾದ ಸ್ಥಾನವಿದೆ. ತಂದೆ, ತಾಯಿಗಳ ನಂತರದ ಸ್ಥಾನ ಗುರುವಿನದು. 'ಮಾತೃ ದೇವೋ ಭವ, ಪಿತೃ ದೇವೋ ಭವ, ಆಚಾರ್ಯ ದೇವೋ ಭವ' ಎನ್ನುವ ನಾಡು ನಮ್ಮದು. ಆಚಾರ್ಯ ಎಂದರೆ ಯಾರು?

ಆಚಿನೋತಿ ಚ ಶಾಸ್ತ್ರಾರ್ಥಂ ಆಚಾರೇ ಸ್ಥಾಪಯತ್ಯಪಿ।
ಸ್ವಯಮಾಚರತೇ ಯಸ್ಮಾತ್ ತಸ್ಮಾತ್ ಆಚಾರ್ಯ ಉಚ್ಯತೇ॥

ಶಾಸ್ತ್ರಗಳ ಅರ್ಥವನ್ನು ವಿಶ್ಲೇಷಿಸಿ, ರೂಢಿಗೆ ತರುವವನು ಆಚಾರ್ಯ. ಅವರು ರೂಢಿಗೆ ತಂದು ಸುಮ್ಮನಾಗುವುದಿಲ್ಲ, ಸ್ವತಃ ಪಾಲಿಸಿ, ಮೇಲ್ಪಂಕ್ತಿ ಹಾಕುವುದರಿಂದಲೇ ಆವರು ಆಚಾರ್ಯರು ಎನಿಸಿಕೊಳ್ಳುತ್ತಾರೆ.

ಆಚಾರ್ಯ, ಗುರು ಎಂಬುದಕ್ಕೆ ವಿವೇಕ ಚೂಡಾಮಣಿಯಲ್ಲಿ ಒಂದು ಒಳ್ಳೆಯ ವ್ಯಾಖ್ಯಾನವಿದೆ. **'ಅಧಿಗತ ತತ್ತ್ವಃ ಶಿಷ್ಯ ಹಿತಾಯ ಉದ್ಯತಃ ಸತತಮ್'** ಎನ್ನುತ್ತದೆ ಅದು. ಅಂದರೆ ತತ್ತ್ವಜ್ಞಾನವನ್ನು ಪಡೆದವನು, ನಿತ್ಯನಿರಂತರವಾಗಿ ಶಿಷ್ಯರ ಹಿತವನ್ನು ಬಯಸುವವನೇ ಗುರು. ಸ್ವಾರ್ಥ ಬಿಟ್ಟು, ಸಮಷ್ಟಿಯ ಹಿತಕ್ಕಾಗಿ ತುಡಿಯುವವನೇ ಗುರು.

ಗುರು, ಶಿಷ್ಯರು ನೇರ ಸಂಪರ್ಕದಲ್ಲಿ ಇಲ್ಲದಿರಬಹುದು. ಆದರೆ ಶಿಷ್ಯನಿಗೆ ಗುರುವಿನಲ್ಲಿ ಅಚಲವಾದ ಭಕ್ತಿ, ಶ್ರದ್ಧೆಗಳಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಏಕಲವ್ಯನೇ ಉದಾಹರಣೆ. ಹಸ್ತಿನಾಪುರದ ಸಮೀಪದಲ್ಲಿ ಒಂದು ಕಾಡು. ಅಲ್ಲೊಬ್ಬ ಬೇಡ, ಹಿರಣ್ಯಧನುಷ. ಅವನಿಗೊಬ್ಬ ಮಗ, ಅವನೇ ಏಕಲವ್ಯ. ಅವನಿಗೆ ಬಿಲ್ವಿದ್ಯೆಯಲ್ಲಿ ವಿಶೇಷವಾದ ಆಸಕ್ತಿ. ಹುಟ್ಟಿದ್ದೇ ಬೇಡರ ಕುಲದಲ್ಲಿ. ಆದ್ದರಿಂದ ಅಲ್ಪಸ್ವಲ್ಪ ಧನುರ್ವಿದ್ಯೆ ಗೊತ್ತಿತ್ತು. ಆದರೆ ಅದರಲ್ಲೇ ಪರಿಣತಿ ಪಡೆಯುವುದು ಅವನ ಹೆಬ್ಬಯಕೆಯಾಗಿತ್ತು. ಅದ್ವಿತೀಯ ಬಿಲ್ಲುಗಾರರಾದ ಆಚಾರ್ಯ ದ್ರೋಣರಿಂದಲೇ ಅದನ್ನು ಕಲಿಯುವ ಆಸೆ. ಆಚಾರ್ಯರ ಬಳಿಗೆ ಹೋಗಿ, ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಕೋರಿದ. ಅವರು ಒಪ್ಪಲಿಲ್ಲ. ಆದರೆ ಅವರನ್ನೇ ತನ್ನ ಗುರುವೆಂದುಕೊಂಡ ಏಕಲವ್ಯ ಕಾಡಿಗೆ ಹಿಂದಿರುಗಿ, ಗುರು ದ್ರೋಣಾಚಾರ್ಯರ ಪ್ರತಿಮೆಯನ್ನು ಮಾಡಿ, ಅದನ್ನು ಪೂಜಿಸಿ, ಸ್ವತಃ ಅಭ್ಯಾಸಕ್ಕೆ ತೊಡಗಿದ. ಹೀಗಿರುವಾಗ ಒಂದು ದಿನ ಪಾಂಡವರು ಬೇಟೆಗಾಗಿ ಅದೇ ಕಾಡಿಗೆ ಬಂದರು. ಅವರ ಜೊತೆ ಬಂದಿದ್ದ ಬೇಟೆ ನಾಯಿ ಒಂದೇಸಮನೆ ಬೊಗಳುತ್ತಿತ್ತು. ಬಿಲ್ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದ ಏಕಲವ್ಯನ ಏಕಾಗ್ರತೆಗೆ ಅದರಿಂದ ಭಂಗ ಉಂಟಾಯಿತು. ಅವನು ಶಬ್ದವೇಧಿಯಂತೆ ಒಂದರ ಹಿಂದೊಂದರಂತೆ ಏಳು ಬಾಣಗಳನ್ನು ಬಿಟ್ಟು, ನಾಯಿಯ ಬಾಯಿ ತುಂಬಿಸಿ ಬಿಟ್ಟ. ಅದು ಬೊಗಳಲಾರದೆ ಕುಂಯಿಗುಡುತ್ತಾ ಪಾಂಡವರ ಬಳಿಗೆ ಹಿಂದಿರುಗಿತು. ಅದನ್ನು ಕಂಡ ಅರ್ಜುನನಿಗೆ ತೀರಾ ವಿಸ್ಮಯವಾಯಿತು. ಅವನು ಈ ಅಸಾಮಾನ್ಯ ಬಿಲ್ಲುಗಾರ ಯಾರೆಂದು ಹುಡುಕಿಕೊಂಡು ಬಂದ. ಬೇಡರ ಬಾಲಕನನ್ನು 'ನಿನ್ನ ಗುರು ಯಾರು?' ಎಂದು ಪ್ರಶ್ನಿಸಿದ. 'ದ್ರೋಣಾಚಾರ್ಯರು' ಎಂಬ ಉತ್ತರ ಬಂತು. ಇದು, ಗುರುವಿನ ಪರೋಕ್ಷ ಅನುಗ್ರಹಕ್ಕೆ ಅತ್ಯುತ್ತಮ ಉದಾಹರಣೆ. ಗುರುಕಟಾಕ್ಷ ವಿದ್ದರೆ ಯಾವುದೂ ಅಸಾಧ್ಯವಲ್ಲ.

ನಮ್ಮದು ಅವಿಚ್ಛಿನ್ನವಾದ ಗುರು–ಶಿಷ್ಯ ಪರಂಪರೆ. ಗುರು ಅವ್ಯಾಜ ಕರುಣಾಮೂರ್ತಿ. ಅರ್ಪಣಾಭಾವದಿಂದ ಸಂಪೂರ್ಣ ಶರಣಾದರೆ, ಗುರು ಜ್ಞಾನದರ್ಶಿಯಾಗುತ್ತಾನೆ. ಒಬ್ಬನೇ ಗುರು ಎಲ್ಲ ಜನರ ಶ್ರೇಯಸ್ಸಿಗೆ ಹೇಗೆ ಕಾರಣನಾಗುತ್ತಾನೆ ಎಂದರೆ, ಒಬ್ಬನೇ ಸೂರ್ಯ ಲಕ್ಷೋಪಲಕ್ಷ ಕಮಲಗಳು ಅರಳಲು ಕಾರಣನಾಗುವುದಿಲ್ಲವೇ ಹಾಗೆಯೇ. ಮನಸ್ಸಿನಲ್ಲಿ ಧ್ಯಾನಿಸಿದರೂ ಸಾಕು, ಗುರು ಸನ್ಮಾರ್ಗದರ್ಶಿಯಾಗುತ್ತಾನೆ.

ಗುರುಪೂರ್ಣಿಮೆಯನ್ನು ವ್ಯಾಸಪೂರ್ಣಿಮಾ ಎಂದೂ ಹೇಳುತ್ತಾರೆ. ಬ್ರಹ್ಮವಿದ್ಯೆಯನ್ನು ಉಪದೇಶಿಸಿದ ಗುರುಪರಂಪರೆಗೆ ಪೂಜೆ ಸಲ್ಲಿಸುವ ದಿನ ಇದು. ಆಚಾರ್ಯ ಪರಂಪರೆಯಲ್ಲಿ ಅಗ್ರಗಣ್ಯರು ವೇದವ್ಯಾಸರು. ಜ್ಞಾನಸಾಗರ, ವಿದ್ಯಾಸಮುದ್ರ ಇತ್ಯಾದಿ ಬಿರುದಾಂಕಿತರು. ಅವರ ತಂದೆ ಧರ್ಮಶಾಸ್ತ್ರ ಕೋವಿದರಾಗಿದ್ದ ಪರಾಶರ ಮಹರ್ಷಿಗಳು. ಅವರು ಒಮ್ಮೆ ಯಮುನಾ ನದಿಯನ್ನು ದಾಟಬೇಕಾಗಿತ್ತು. ದಾಶರಾಜ ಧರ್ಮಾರ್ಥವಾಗಿ ಜನರನ್ನು ನದಿ ದಾಟಿಸುತ್ತಿದ್ದ. ಒಮ್ಮೊಮ್ಮೆ ಅವನ ಮಗಳೂ ಆ ಕೆಲಸ ಮಾಡುತ್ತಿದ್ದಳು. ಅವಳ ಹೆಸರು ಸತ್ಯವತಿ. ಅವಳ ಮೈಯಲ್ಲಿ ಮೀನಿನ ವಾಸನೆ ಬರುತ್ತಿದ್ದುದರಿಂದ ಅವಳನ್ನು ಮತ್ಸ್ಯಗಂಧಿ ಎಂದೂ ಕರೆಯುತ್ತಿದ್ದರು. ಅಂದು ಅವಳೇ ದೋಣಿ ನಡೆಸುತ್ತಿದ್ದಳು. ಆಕಸ್ಮಿಕವಾಗಿ ಪರಾಶರ ಮುನಿಗಳಿಗೂ, ಆಕೆಗೂ ಸಮಾಗಮವಾಯಿತು. ಆಕೆ ಗರ್ಭವತಿಯಾಗದೆ ಪುತ್ರವತಿಯಾದಳು. ಹಾಗೆ ಹುಟ್ಟಿದ್ದು ವ್ಯಾಸ ಮಹರ್ಷಿಗಳು. ಅವರು ಹುಟ್ಟುತ್ತಲೇ ದೊಡ್ಡವರಾದರು. ಕಪ್ಪಗಿದ್ದುದರಿಂದ ಅವರನ್ನು ಕೃಷ್ಣ ಎಂದೂ, ದ್ವೀಪದಲ್ಲಿ ಹುಟ್ಟಿದ್ದರಿಂದ ದ್ವೈಪಾಯನ ಎಂದೂ ಕರೆಯುತ್ತಾರೆ.

ವ್ಯಾಸರು, ತಂದೆ ಪರಾಶರ ಮಹರ್ಷಿಗಳಿಂದಲೇ ವೇದ, ವೇದಾಂತಗಳು, ಧರ್ಮಶಾಸ್ತ್ರಗಳನ್ನು ಕಲಿಯುತ್ತಾರೆ. ಮಗ

ಸರ್ವವಿದ್ಯಾಪಾರಂಗತನಾದ ಎನಿಸಿದ ಕೂಡಲೇ ಪರಾಶರರು ತಪಸ್ಸು ಮಾಡಲು ಹಿಮಾಲಯದತ್ತ ಹೊರಡುತ್ತಾರೆ. ವ್ಯಾಸರೂ ಅವರನ್ನು ಅನುಸರಿಸಿಕೊಂಡು ಬದರಿಯವರೆಗೂ ಹೋಗುತ್ತಾರೆ. ಬದರಿಕಾಶ್ರಮದಲ್ಲಿ ನೆಲೆಸಿ, ವೇದಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸುತ್ತಾರೆ, ಅಷ್ಟಾದಶ ಪುರಾಣಗಳು, ಬ್ರಹ್ಮಸೂತ್ರಗಳು ಹಾಗೂ ಪಂಚಮವೇದ ಎನ್ನಲಾದ ಮಹಾಭಾರತವನ್ನು ರಚಿಸುತ್ತಾರೆ. ಬದರಿಯಲ್ಲಿ ಬಹುಕಾಲ ನೆಲೆಸಿದ್ದರಿಂದ ಅವರನ್ನು ಬಾದರಾಯಣ ಎಂದೂ, ವೇದಗಳನ್ನು ವಿಂಗಡಿಸಿದ್ದರಿಂದ ವೇದವ್ಯಾಸ ಎಂದೂ ಕರೆಯುತ್ತಾರೆ. ಬದರಿಯಲ್ಲಿ ಅವರಿದ್ದ ಗುಹೆ, 'ವ್ಯಾಸಗುಹೆ' ಎಂದು ಇಂದಿಗೂ ಪ್ರಸಿದ್ಧವಾಗಿದೆ. ಇಂಥ ಮಹತ್ ಕಾರ್ಯವನ್ನು ಅವರು ಪೂರ್ಣಗೊಳಿಸಿದ್ದು ಆಷಾಢ ಹುಣ್ಣಿಮೆಯ ದಿನ. ಆದ್ದರಿಂದಲೇ ಅದನ್ನು ವ್ಯಾಸಪೂರ್ಣಿಮೆ ಎನ್ನುವುದು.

ವ್ಯಾಸರು ಸಾಕ್ಷಾತ್ ಪರಶಿವನಿಂದಲೇ 'ಸರ್ವರಿಗೂ ಗುರು' ಎಂದು ಸನ್ಮಾನಿತರಾದವರು. ಆ ಬಗ್ಗೆ ಒಂದು ಸ್ವಾರಸ್ಯಕರವಾದ ಕಥೆ ಇದೆ. ಒಮ್ಮೆ ವ್ಯಾಸರು ಕುಟೀರದಲ್ಲಿ ವಿಶ್ರಮಿಸಿಕೊಳ್ಳುತ್ತಿರುವಾಗ ನಾರದರ ಆಗಮನವಾಗುತ್ತದೆ. ವ್ಯಾಸರು ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಅತಿಥಿ ಸತ್ಕಾರ ಮಾಡುವುದಿಲ್ಲ. ಅವರು ಕೀರ್ತಿಮದದಲ್ಲಿರುವುದು ನಾರದರ ಗಮನಕ್ಕೆ ಬರುತ್ತದೆ. ಅವರು ವ್ಯಾಸರಿಗೆ, 'ನೀವು ಬ್ರಹ್ಮಸೂತ್ರ, ಅಷ್ಟಾದಶ ಪುರಾಣ, ಮಹಾಭಾರತ ಇತ್ಯಾದಿ ಇತ್ಯಾದಿ ಗ್ರಂಥಗಳ ರಚನೆಯಿಂದ ದಣಿದಿದ್ದೀರಿ. ಒಂದಿಷ್ಟು ಯಾತ್ರೆ ಮಾಡಿ, ಮನಸ್ಸಿಗೆ ಉಲ್ಲಾಸವಾಗುತ್ತದೆ' ಎಂದು ಸಲಹೆ ಮಾಡುತ್ತಾರೆ. ವ್ಯಾಸರಿಗೂ ಸರಿ ಎನಿಸಿ, ಯಾತ್ರೆ ಆರಂಭಿಸುತ್ತಾರೆ. ಆದರೆ ಯಾವ ಊರಿನಲ್ಲೂ ಜನ ಅವರನ್ನು ಗಮನಿಸುವುದೇ ಇಲ್ಲ. ಅವರು ನಿರೀಕ್ಷಿಸಿದ್ದಂಥ ಸ್ವಾಗತ ದೊರೆಯುವುದಿಲ್ಲ. ಹೋಗಲಿ, ಈ ಜನಕ್ಕೆ ನನ್ನ ಬೆಲೆ ಗೊತ್ತಿಲ್ಲ ಎಂದುಕೊಂಡು ಕಾಶಿಗೆ ಹೋಗುತ್ತಾರೆ. ಅಲ್ಲೂ ಅದೇ ಪರಿಸ್ಥಿತಿ. ಒಂದೆಡೆ ಹಸಿವು, ಬಾಯಾರಿಕೆ, ಇನ್ನೊಂದೆಡೆ ತಮಗಾದ ಗರ್ವಭಂಗ. ಇದರಿಂದ ಬೇಸತ್ತ ವ್ಯಾಸರು, 'ಕಾಶೀವಾಸಿಗಳಿಗೆ ಯಾವತ್ತೂ ವಿದ್ಯೆ, ಧನ, ಭಕ್ತಿ ಇಲ್ಲದೆ ಹೋಗಲಿ' ಎಂದು ಶಾಪ ಕೊಡಲು ಉದ್ಯುಕ್ತರಾಗುತ್ತಾರೆ. ಆಗ ಒಂದು ಮನೆಯಿಂದ ಒಬ್ಬ ಗೃಹಿಣಿ ಹೊರಕ್ಕೆ ಬಂದು, 'ದಯವಿಟ್ಟು ಹಾಗೆ ಮಾಡಬೇಡಿ. ಬನ್ನಿ, ನಮ್ಮ ಮನೆಯಲ್ಲಿ ಊಟ ಮಾಡಿ ವಿಶ್ರಮಿಸಿಕೊಳ್ಳಿ' ಎಂದು ಆಹ್ವಾನಿಸುತ್ತಾಳೆ. ವ್ಯಾಸರು ಶಿಷ್ಯ ಪರಿವಾರ ಸಮೇತ ಅವರ ಮನೆಗೆ ಹೋಗುತ್ತಾರೆ. ಆ ಮಹಿಳೆ ಎಲ್ಲರಿಗೂ ಬಾಳೆ ಎಲೆಗಳನ್ನು ಹಾಕಿ, ಊಟ ಮಾಡಿ ಎಂದು ಉಪಚರಿಸುತ್ತಾಳೆ. ನೋಡಿದರೆ ಎಲೆಯಲ್ಲಿ ಏನೂ ಇಲ್ಲ. 'ಇದೇನಿದು ವಿಚಿತ್ರ' ಎಂದುಕೊಂಡು ವ್ಯಾಸರು ಆಪೋಶನ ತೆಗೆದುಕೊಂಡ ತಕ್ಷಣ ಅವರ ಎಲೆಯಲ್ಲಿ ಅವರು ಬಯಸಿದ ಭಕ್ಷ್ಯ-ಭೋಜ್ಯಗಳೆಲ್ಲಾ ಪ್ರತ್ಯಕ್ಷವಾಗುತ್ತವೆ. ಅವರ ಶಿಷ್ಯ ಪರಿವಾರಕ್ಕೂ ಅದೇ ಅನುಭವವಾಗುತ್ತದೆ. ಆ ಗೃಹಿಣಿ ಬೇರೆ ಯಾರೂ ಅಲ್ಲ, ಸ್ವತಃ ಅನ್ನಪೂರ್ಣೇಶ್ವರೀ ದೇವಿ. ಪಾರ್ವತೀ-ಪರಮೇಶ್ವರರು ವ್ಯಾಸರಿಗೆ ದರ್ಶನವಿತ್ತು, 'ಸರ್ವಗುರು' ಎಂಬ ಬಿರುದನ್ನು ದಯಪಾಲಿಸುತ್ತಾರೆ.

ನಂತರ ವ್ಯಾಸರು ಧರ್ಮಪ್ರಸಾರಕ್ಕಾಗಿ ಇಡೀ ಭರತಖಂಡದಲ್ಲೆಲ್ಲಾ ಸಂಚರಿಸಿದರು. ಸಂತೋಷವಾಗಿರಲು ಅರ್ಥ, ಕಾಮಗಳು ಅಗತ್ಯ. ಆದರೆ ಅದನ್ನು ಧರ್ಮಮಾರ್ಗ, ನ್ಯಾಯಮಾರ್ಗದಿಂದ ಸಂಪಾದಿಸಿ; ಅಡ್ಡದಾರಿ ಹಿಡಿಯಬೇಡಿ ಎಂದು ಅವರು ಬೋಧಿಸಿದರು.

ಆಧ್ಯಾತ್ಮಿಕ ತತ್ತ್ವಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ, ಸೂತ್ರರೂಪದಲ್ಲಿ ರಚಿಸಿದರು. ಅದೇ ಬ್ರಹ್ಮಸೂತ್ರ. ಅದು ಉಪನಿಷತ್ತುಗಳ ಸಾರಸಂಗ್ರಹ. ಅದು ಉಪನಿಷತ್ತುಗಳನ್ನು ಆಧರಿಸಿದ್ದರಿಂದ ವೇದಾಂತ ಸೂತ್ರಗಳು, ವೇದಾಂತದ ಗುರಿ ಬ್ರಹ್ಮಜ್ಞಾನವಾದ್ದರಿಂದ ಬ್ರಹ್ಮಸೂತ್ರಗಳು, ಶರೀರದಲ್ಲಿರುವ ಆತ್ಮಸ್ವರೂಪವನ್ನು ವಿಶ್ಲೇಷಿಸುವುದರಿಂದ ಶಾರೀರಿಕ ಸೂತ್ರಗಳು, ಸಂನ್ಯಾಸಿಗಳಿಗೆ ಅತ್ಯಗತ್ಯವಾದ್ದರಿಂದ ಭಿಕ್ಷುಸೂತ್ರಗಳು, ವ್ಯಾಸರು ರಚಿಸಿದ್ದರಿಂದ ವ್ಯಾಸಸೂತ್ರಗಳು ಅಥವಾ ಬಾದರಾಯಣ ಸೂತ್ರಗಳು ಎಂದೂ ಪ್ರಖ್ಯಾತವಾಗಿದೆ.

ವೇದೋಪನಿಷತ್ತುಗಳು, ಬ್ರಹ್ಮಸೂತ್ರಗಳು ಎಲ್ಲರಿಗೂ ಅರ್ಥವಾಗುವುದಿಲ್ಲ ಎಂದು ಮನಗಂಡಿದ್ದರಿಂದಲೇ ವ್ಯಾಸರು ಪಂಚಮವೇದವಾದ ಮಹಾಭಾರತವನ್ನು ರಚಿಸಿದರು. ಅದು ಸತ್ಯ-ಅಸತ್ಯ, ಹಿಂಸೆ-ಅಹಿಂಸೆ, ಪ್ರೀತಿ-ದ್ವೇಷ, ಧರ್ಮ-ಅಧರ್ಮ, ಹೀಗೆ ದ್ವಂದ್ವಗಳ ಘರ್ಷಣೆಯ ಕಥೆ. ಕೊನೆಗೆ **'ಸತ್ಯಮೇವ ಜಯತೇ, ನಾನೃತಮ್'** ಎಂಬ ವೇದವಾಣಿಗೆ ನಿದರ್ಶನವಾಗಿ ನಿಲ್ಲುತ್ತದೆ. ಜನ ಹೇಗಿರಬೇಕು, ಹೇಗಿರಬಾರದು ಎಂಬ ವಿಧಿ-ನಿಷೇಧಗಳನ್ನು ಹೇಳುವ ವಿಶ್ವಮಾನ್ಯ ಕೃತಿ ಮಹಾಭಾರತ. ಆರಂಭದಲ್ಲೇ ವ್ಯಾಸರು **'ಧರ್ಮಾನ್ ವಕ್ಷ್ಯಾಮಿ ಶಾಶ್ವತಾನ್'** ಎಂದಿದ್ದಾರೆ. ಮಾನವ ಜೀವನಕ್ಕೆ ಧರ್ಮವೇ ಅಡಿಗಲ್ಲು. ಅದಕ್ಕಿಂತ ದೊಡ್ಡಬಂಧು ಬೇರೆ ಯಾವುದೂ ಇಲ್ಲ ಎಂಬುದನ್ನು ಸಾರಿಸಾರಿ ಹೇಳಿದವರು ವ್ಯಾಸ ಮಹರ್ಷಿಗಳು. ಬದುಕಿನುದ್ದಕ್ಕೂ ಲೋಕಹಿತವನ್ನೇ ಬಯಸಿದವರು ಅವರು. ಜನತೆಯ ಶ್ರೇಯಸ್ಸು-ಪ್ರೇಯಸ್ಸುಗಳಿಗಾಗಿ ಜೀವನ ಧರ್ಮ, ಮಾನವನ ಧ್ಯೇಯ, ಲೋಕನೀತಿಗಳು ಹೇಗಿರಬೇಕೆಂಬುದನ್ನು ಬೋಧಿಸಿದರು.

ವ್ಯಾಸ ಮಹರ್ಷಿಗಳು ಚಿರಂಜೀವಿ. ಆ ವಿಶ್ವಗುರುವಿಗೆ ಭಕ್ತಿ, ಶ್ರದ್ಧೆಯಿಂದ ಕೃತಜ್ಞತೆ ಸಲ್ಲಿಸಲು ಆಷಾಢ ಹುಣ್ಣಿಮೆಯ ದಿನ, ಸಂನ್ಯಾಸಿಗಳು, ಯತಿಗಳು ಚಾತುರ್ಮಾಸ್ಯ ವ್ರತ ಸಂಕಲ್ಪ ಮಾಡುತ್ತಾರೆ.


ಚಾತುರ್ಮಾಸ್ಯಸಮಂ ನಾಸ್ತಿ ವ್ರತಂ ಲೋಕೇ ಚ ಪಾವನಮ್ ।
ಶೃಣ್ವಂತು ಸಾಧವೋ ಭಕ್ತಾಃ ವ್ರತಂ ಇಷ್ಟಾರ್ಥಸಾಧನಮ್ ॥

ಎನ್ನುವಂತೆ ಚಾತುರ್ಮಾಸ್ಯಕ್ಕೆ ಸಮನಾದ ವ್ರತ, ಬೇರೆ ಯಾವುದೂ ಇಲ್ಲ. ಈ ವ್ರತಾಚರಣೆಯಿಂದ ಸಕಲ ಇಷ್ಟಾರ್ಥ ಸಾಧನೆಯಾಗುತ್ತದೆ. ಅಂದು ಮೊದಲು ವ್ಯಾಸರಿಗೆ ಪೂಜೆ ಮಾಡಿ, ಐವರು ಆಚಾರ್ಯರುಗಳ ಷಟ್ ಪಂಚಕಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ಅಲ್ಲಿಂದ ಮುಂದಿನ ನಾಲ್ಕು ತಿಂಗಳು ಭಗವಂತನ ಉಪಾಸನೆ, ಆರಾಧನೆ, ಸಾಧನೆಗಳಿಗೆ ಪ್ರಶಸ್ತವಾದ ದಿನಗಳೆಂದು ಪರಿಗಣಿತವಾಗಿವೆ. ಈ ಅವಧಿಯಲ್ಲಿ ಶಾಸ್ತ್ರಾಧ್ಯಯನ, ಭಗವನ್ನಾಮ ಸ್ಮರಣೆ, ಸತ್ಸಂಗಗಳನ್ನು ಶ್ರದ್ಧಾ ಭಕ್ತಿಗಳಿಂದ ಮಾಡಿದರೆ ಖಂಡಿತವಾಗಿಯೂ ಒಳ್ಳೆಯದಾಗುತ್ತದೆ. *

ದೂರ್ವಾಸರ ಶಾಪ


ಕಥೆ : ಆರ್.ವಿ.　　　　ಚಿತ್ರ : ಶಂಕರ್

1 ಅತ್ರಿಮುನಿಗಳ ಮಗನಾದ ದೂರ್ವಾಸನು ಕೋಪವೇ ಮೂರ್ತಿವೆತ್ತಂತಿದ್ದನು. ಅವನಿಗೆ ಒಬ್ಬ ಶಿಷ್ಯನಿದ್ದ. ಅವನ ಹೆಸರು ಬೃಹತ್ಸೇನ. ಅವನ ಪತ್ನಿ ಹೇಮಲತಾ. ಒಂದು ದಿನ . . . .





2 ದೂರ್ವಾಸಮುನಿ ಸ್ನಾನ ಮಾಡಲು ಹೋಗಿದ್ದರು . ಬೃಹತ್ಸೇನ ಅಗ್ನಿಕಾರ್ಯಕ್ಕೆ ಅಣಿಮಾಡುತ್ತಿದ್ದ. ಅವನಿಗೆ ತಲೆನೋವು ಮಿತಿಮೀರಿದ್ದರಿಂದ, ಅವನು ಕಣ್ಣುಮುಚ್ಚಿ ಬಿದಿರಿನ ಕೊಳವೆಯಿಂದ ಒಲೆ ಊದುತ್ತಿದ್ದ.

3 ಸ್ನಾನ ಮುಗಿಸಿದ ನಂತರ ದುರ್ವಾಸರು ಅಗ್ನಿಯ ಮುಂದೆ ನಿತ್ಯಕರ್ಮ ಮಾಡಲು ಕುಳಿತರು. ಕಣ್ಣುಮುಚ್ಚಿದ್ದ ಬೃಹತ್ಸೇನನಿಗೆ ಇದು ಗೊತ್ತಾಗಲಿಲ್ಲ. ಅವನು ಒಲೆ ಊದಿದಾಗ. . . .




3 ಕೋಪಗೊಂಡ ದೂರ್ವಾಸರು ಶಿಷ್ಯನಿಗೆ ಶಾಪ ಕೊಟ್ಟರು.




5
ಬೃಹತ್ಸೇನ ತನ್ನ ಅಪಚಾರಕ್ಕೆ ಕಾರಣ ತಿಳಿಸಿ, ಗುರುಗಳಿಗೆ ಮನವರಿಕೆ ಮಾಡಲು ಯತ್ನಿಸಿದ; ಅವರ ಕ್ಷಮೆ ಬೇಡಿದ. ಆದರೆ ದೂರ್ವಾಸರ ಕೋಪ ತಣಿಯಲಿಲ್ಲ. ಬೃಹತ್ಸೇನ ದುಃಖಿಸುತ್ತಾ ಭಾರವಾದ ಹೃದಯದಿಂದ ತನ್ನ ಕುಟೀರಕ್ಕೆ ಮರಳಿದ.
6
ಪ್ರಭು, ನೀವು ಅಳುವುದೇಕೆ ? ಏನಾಯಿತು ?
7
ಗುರುಗಳ ಆಶ್ರಮದಲ್ಲಿ ನಡೆದದ್ದನ್ನೆಲ್ಲ ಬೃಹತ್ಸೇನ ತನ್ನ ಪತ್ನಿಗೆ ವಿವರಿಸಿ ಹೇಳಿ ಅಳತೊಡಗಿದ.
ನಾವು ಗುರುಗಳ ಬಳಿಗೆ ಹೋಗಿ, ಅವರನ್ನು ಕಂಡು ಮಾತನಾಡೋಣ.
8
ಅವರಿಬ್ಬರೂ ದೂರ್ವಾಸರ ಬಳಿಗೆ ಹೋದರು. ಹೇಮಲತಾ ಅವರಿಗೆ ಕೈಮುಗಿದು ಪ್ರಾರ್ಥಿಸಿಕೊಂಡಳು.
ನೀವು ನಮ್ಮ ಹೆತ್ತವರಿಗಿಂತ ಮಿಗಿಲು. ನನ್ನ ಪತಿ ಅರಿಯದೆ ಮಾಡಿದ ತಪ್ಪನ್ನು ಕ್ಷಮಿಸಿ. ನೀವು ನಮ್ಮ ಮೇಲೆ ಕೃಪೆ ತೋರಬೇಕು.

9 ಕರುಳು ಕರಗಿಸುವಂತೆ ಆಕೆ ಮಾಡಿದ ಪ್ರಾರ್ಥನೆ ದೂರ್ವಾಸರ ಹೃದಯವನ್ನು ಕರಗಿಸಲಿಲ್ಲ. ದೂರ್ವಾಸರ ತೊಡೆಗೆ ಉಂಟಾಗಿದ್ದ ಸಣ್ಣಗಾಯವೆಲ್ಲಿ – ಗುರುಶಾಪದಿಂದ ತನ್ನ ಪತಿಯ ಹೃದಯದಲ್ಲಿ ಉಂಟಾಗಿರುವ ಘೋರ ಯಾತನೆಯಲ್ಲಿ! ಅವುಗಳ ನಡುವಿನ ಅಂತರವನ್ನು ಕಂಡು ಹೇಮಲತಾ ಕಿಡಿಕಿಡಿಯಾದಳು. ಹೇಮಲತಾ ಅಗ್ನಿದೇವನನ್ನು ಭಕ್ತಿಯಿಂದ ಪ್ರಾರ್ಥಿಸಿದಳು.




10 ಪತಿವ್ರತೆಯಾದ ಹೇಮಲತಾಳ ಆಣತಿಗೆ ಅಗ್ನಿ ತಲೆಬಾಗಿದ. ಅದರ ಪರಿಣಾಮವಾಗಿ ಎಲ್ಲ ಯಜ್ಞಯಾಗಗಳ, ಮನೆ ಮನೆಗಳ ಬೆಂಕಿ ತಣ್ಣಗಾದವು. ಪರಶಿವನ ತ್ರಿಶೂಲದ ಬೆಂಕಿಯೂ ತಣ್ಣಗಾಯಿತು. ತ್ರಿಮೂರ್ತಿಗಳೆಲ್ಲ ದೂರ್ವಾಸರ ಮುಂದೆ ಪ್ರತ್ಯಕ್ಷರಾದರು.

11 ದೂರ್ವಾಸರು ಶಿವನ ದರ್ಶನದಿಂದ ಚಕಿತರಾದರು.







13 ದೂರ್ವಾಸರ ಮಾತುಗಳನ್ನು ಕೇಳಿ ಶಿವ ನಸುನಕ್ಕ.




14 ಬೃಹತ್ಸೇನ ಯಾವುದೇ ತಪಸ್ಸನ್ನು ಆಚರಿಸದಿದ್ದರೂ, ತ್ರಿಮೂರ್ತಿಗಳು ಅವನಿಗೆ ದರ್ಶನವಿತ್ತ ವಿಚಾರವನ್ನು ಶಿವ ದೂರ್ವಾಸನಿಗೆ ತಿಳಿಸಿದ. ಅದನ್ನು ಕೇಳಿ ದೂರ್ವಾಸನಿಗೂ ನಿಶ್ಚಿಂತೆಯಾಯಿತು.



15



16




ಗ್ರಂಥ ಬಿಡುಗಡೆ ಸಮಾರಂಭ

'ಸಂಕ್ಷಿಪ್ತ ಹಿಂದೂಧರ್ಮ ವಿಶ್ವಕೋಶ' – ಸಂಪುಟ ೪

(ಲೇಖಕರು: ಸ್ವಾಮಿ ಹರ್ಷಾನಂದ)

ಬಹಳ ಕಾಲದಿಂದ ನಿರೀಕ್ಷಿಸುತ್ತಿದ್ದ 'ಸಂಕ್ಷಿಪ್ತ ಹಿಂದೂಧರ್ಮ ವಿಶ್ವಕೋಶ' ದ ನಾಲ್ಕನೆಯ ಸಂಪುಟದ ಬಿಡುಗಡೆ ಸಮಾರಂಭವು ದಿನಾಂಕ ೨೫ ಮೇ, ೨೦೧೪ ರಂದು ಬೆಂಗಳೂರು ರಾಮಕೃಷ್ಣ ಮಠದಲ್ಲಿ ನೆರವೇರಿತು. ಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರು ರಚಿಸಿದ ಈ ವಿಶ್ವಕೋಶದ ಮೂರು ಸಂಪುಟಗಳು ಈಗಾಗಲೇ ಪ್ರಕಟವಾಗಿದ್ದು, ಅವುಗಳ ಅನುಬಂಧರೂಪದಲ್ಲಿ ಈ ನಾಲ್ಕನೇ ಸಂಪುಟವು ಇದೀಗ ಬಿಡುಗಡೆಗೊಂಡಿತು. ಈ ಅವಿಸ್ಮರಣೀಯ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸುಪ್ರಿಂಕೋರ್ಟ್ ನ್ಯಾಯಾಧೀಶರಾದ ನ್ಯಾಯಮೂರ್ತಿ ಶ್ರೀ ಹೆಚ್.ಎಲ್. ದತ್ತು ಅವರು ಸಂಪುಟವನ್ನು ಬಿಡುಗಡೆಗೊಳಿಸಿದರು. ಉದಕಮಂಡಲ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜೀ ಮಹಾರಾಜ್ ಅವರು ಅಧ್ಯಕ್ಷತೆ ವಹಿಸಿದ್ದರು.



ಚಳ್ಳಕೆರೆ ಸಹೋದರರಾದ ಶ್ರೀ ಎಂ.ಎಸ್. ವೇಣುಗೋಪಾಲ್ ಹಾಗೂ ಶ್ರೀ ಎಂ.ಎಸ್. ಶ್ರೀನಿವಾಸನ್ ಅವರ ವೇದಮಂತ್ರ ಪಠಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸ್ವಾಗತ ಕೋರಿ ಭಾಷಣ ಮಾಡಿದ ಸ್ವಾಮಿ ಶಾಂತಿಮಯಾನಂದಜಿ ಅವರು ಮುಖ್ಯ ಅತಿಥಿ ಹಾಗೂ ಕಾರ್ಯಕ್ರಮದ ಅಧ್ಯಕ್ಷರನ್ನು ಪರಿಚಯಿಸಿ, ಬಿಡುಗಡೆಗೊಂಡ ಕೃತಿಯ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟರು.

ಗ್ರಂಥಬಿಡುಗಡೆ ಮಾಡಿ ಮಾತನಾಡಿದ ನ್ಯಾಯಮೂರ್ತಿ ಶ್ರೀ ಹೆಚ್.ಎಲ್. ದತ್ತು ಅವರು ತಮ್ಮ ನೆನಪುಗಳನ್ನು ಹಂಚಿಕೊಳ್ಳುತ್ತ, ಹೇಗೆ ಸರ್ವೋಚ್ಚ ನ್ಯಾಯಾಲಯದ ಮೊಕದ್ದಮೆಯೊಂದರ ತೀರ್ಪು ನೀಡುವ ಸಂದರ್ಭದಲ್ಲಿ ಈ ವಿಶ್ವಕೋಶದ ಮೂರು ಸಂಪುಟಗಳ ಪರಿಚಯ ತಮಗಾಯಿತು ಎಂಬುದನ್ನು ವಿವರಿಸಿದರು. ಅನಂತರ ಕೃತಿಯನ್ನು ಓದಿದಾಗ ಹಿಂದೂಧರ್ಮವನ್ನು ಕುರಿತು ತಮಗಿದ್ದ ತಿಳುವಳಿಕೆ ಇನ್ನಷ್ಟು ವಿಸ್ತಾರಗೊಂಡಿತೆಂದೂ, ಆ ಮೂಲಕ ಪ್ರಾಚೀನ ಸನಾತನ ಧರ್ಮದ ಮಹತ್ವ ಹಾಗೂ ವೈಶಿಷ್ಟ್ಯವನ್ನು ತಾವು ಮನಗಾಣುವಂತಾಯಿತೆಂದೂ ತಿಳಿಸಿದರು. ಮುಂದೆ ಈ ಮೂರು ಸಂಪುಟಗಳು ತಮಗೆ ಸ್ಫೂರ್ತಿಯ ಸೆಲೆಯಾದುದಲ್ಲದೆ, ಅವು ತಮ್ಮ ದಿನನಿತ್ಯದ ಓದಿನ ಅಂಗವಾಯಿತು ಎಂದರು. ಹಲವು ನೈಜಘಟನೆಗಳನ್ನು ವಿವರಿಸುತ್ತ, 'ಹಿಂದೂಧರ್ಮವೆಂದರೆ ಅದೊಂದು ಜೀವನತತ್ತ್ವ; ಪ್ರತಿಯೊಬ್ಬ ವ್ಯಕ್ತಿ ಉತ್ತಮ ಮಾನವನಾಗಲು ಅಗತ್ಯವಾದ ಎಲ್ಲ ಸತ್ವಗಳನ್ನೂ ಅದು ಒಳಗೊಂಡಿದೆ' ಎಂದರು. ಈ ಗ್ರಂಥದ ನಾಲ್ಕನೆಯ ಸಂಪುಟದ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸುತ್ತಿರುವುದು ತುಂಬ ಸಂತಸದ ಸಂಗತಿಯೆಂದ ಅವರು, ಪ್ರತಿಯೊಬ್ಬರೂ ಈ ಕೃತಿಯನ್ನು ಓದುವ ಮೂಲಕ ಹಿಂದೂಧರ್ಮದ ಶ್ರೇಷ್ಠತೆಯನ್ನು ಅರಿತುಕೊಳ್ಳಬೇಕು ಎಂದರು.

ಅಧ್ಯಕ್ಷ ಭಾಷಣದಲ್ಲಿ ಸ್ವಾಮಿ ರಾಘವೇಶಾನಂದಜಿಯವರು ಪ್ರಸ್ತುತ ಸಂಪುಟದ ಪಕ್ಷಿನೋಟವನ್ನು ನೀಡುತ್ತ, ಪ್ರಸ್ತುತ ಗ್ರಂಥದಲ್ಲಿ ನೀಡಲಾಗಿರುವ ಮಾಹಿತಿ, ವಿಷಯ ನಿರೂಪಣೆ ಇವುಗಳಲ್ಲಿ ಕೆಲವನ್ನು ಉದಾಹರಿಸಿದರು. ಸ್ವಾಮಿ ಹರ್ಷಾನಂದಜಿಯವರು ಕೃತಿರಚನೆ ಮಾಡವ ಸಮಯದಲ್ಲಿ ಮಾಹಿತಿಸಂಗ್ರಹ, ಅವುಗಳ ಸತ್ಯಾಸತ್ಯತೆಗಳ ನಿರ್ಣಯ, ಹಾಗೂ ಬರವಣಿಗೆಯೇ ಮೊದಲಾದ ಕಾರ್ಯಗಳಿಗಾಗಿ ಪಟ್ಟಿರುವ ಅವಿರತ ಶ್ರಮವನ್ನು ಅವರು ಸ್ಮರಿಸಿದರು. ಭಕ್ತರು ಹಾಗೂ ಜನಸಾಮಾನ್ಯರೆಲ್ಲ ಈ ಸಂಪುಟಗಳನ್ನು ಸಮಗ್ರವಾಗಿ ಓದಿ, ಸ್ವಾಮಿ ಹರ್ಷಾನಂದಜಿಯವರ ೪೦ ವರ್ಷಗಳಷ್ಟು ದೀರ್ಘಕಾಲದ ಶ್ರಮವನ್ನು ಸಾರ್ಥಕಗೊಳಿಸಬೇಕೆಂದು ಅವರು ಹಾರೈಸಿದರು.

ಗ್ರಂಥವನ್ನು ಹೊರತರುವಲ್ಲಿ ವಿವಿಧ ರೀತಿಯ ಶ್ರಮವಹಿಸಿ ದುಡಿದ ಎಲ್ಲ ವ್ಯಕ್ತಿಗಳಿಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು. ಕರ್ನಾಟಕದ ಅನೇಕ ಮಂದಿ ನ್ಯಾಯಾಧೀಶರು ಹಾಗೂ ಕಾನೂನು ತಜ್ಞರು ಈ ಕಾರ್ಯಕ್ರಮದಲ್ಲಿ ಹಾಜರಿದ್ದುದು ಒಂದು ವಿಶೇಷ. ಸುಮಾರು ೨೦೦೦ ಮಂದಿ ಭಕ್ತರು, ವಿದ್ವಾಂಸರು ಹಾಗೂ ಇನ್ನಿತರ ಗಣ್ಯ ಅತಿಥಿಗಳು ಈ ಸಮಾರಂಭದಲಿ ಪಾಲ್ಗೊಂಡಿದ್ದರು. ಸಮಾರಂಭದ ನಂತರ ಕೃತಿಯ ಎಲ್ಲ ಸಂಪುಟಗಳ ಬಿರುಸಿನ ಮಾರಾಟ ನಡೆಯಿತು. *

Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.D-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

ಪ್ರವಾಸ 2014

ರೈಲು ಹಾಗೂ ಬಸ್ಸಿನಲ್ಲಿ

ಹೋಟೆಲ್ ರೂಂ ಹಾಗೂ ನಮ್ಮ ಊಟೋಪಚಾರದೊಂದಿಗೆ

Oct 02 Nov 06

ಗುಜರಾತ್ - ರಾಜಾಸ್ಥಾನ ಸ್ಪೆಷಲ್ : 19 ದಿನಗಳು

ಪುಷ್ಕರ, ಅಜ್ಮೀರ್, ಜೈಸಲ್ಮೇರ್, ಬಿಕನೇರ್, ಜೋಧ್‌ಪುರ್, ಜೈಪುರ, ನಾಥದ್ವಾರ, ಕಾಂಕ್ರೋಲಿ, ಏಕಲಿಂಗ್ಜಿ, ಉದಯಪುರ, ಮೌಂಟ್ ಅಬು, ಮಾತೃಗಯಾ, ದ್ವಾರಕ, ಬೇಟ್‌ದ್ವಾರಕ, ನಾಗೇಶಂ, ಮೂಲ ದ್ವಾರಕ, ಪೋರಬಂದರ್, ವಿರಾವಲ್, ಸೋಮನಾಥ್, ಡಾಕೋರ್, ಅಹಮದಾಬಾದ್

Oct 05

ಕಾಶಿ - ನೇಪಾಳ (ಮುಕ್ತಿನಾಥ್) : 16 ದಿನಗಳು

ಕಾಶಿ, ಅಯೋಧ್ಯಾ, ಕಠ್ಮಂಡು, ಪೋಖ್ರಾ, ಮುಕ್ತಿನಾಥ್ (Optional), ಮನೋಕಾಮನ, ಘೋರಖ್‌ಪುರ್

Sep 01, Oct 02

ಶಕ್ತಿಪೀಠಗಳು ಮತ್ತು ಸಿಮ್ಲಾ ಮನಾಲಿ ಸ್ಪೆಷಲ್ : 20 ದಿನಗಳು

ಚಂಡೀಘರ್, ಸಿಮ್ಲಾ, ಕುಫ್ರಿ, ಕುಲು ಮನಾಲಿ, ರೋತಾಂಗ್ ಪಾಸ್ (Optional), ವಶಿಷ್ಠ, ಬೈಜ್‌ನಾಥ್, ಚಾಮುಂಡ, ನೈನಾದೇವಿ, ಖಾಂಗ್ರಾ, ಚಿಂತಪೂರ್ಣಿ, ಜ್ವಾಲಾಮುಖಿ, ಧರ್ಮಶಾಲಾ, ವೈಷ್ಣವೀದೇವಿ, ವಾಘಾ ಬಾರ್ಡರ್ (ಇಂಡೋ-ಪಾಕ್ ಬಾರ್ಡರ್), ಅಮೃತ್‌ಸರ್, ಕುರುಕ್ಷೇತ್ರ, ಶಾಕಂಬರಿ, ಹರಿದ್ವಾರ, ನವದೆಹಲಿ

Oct 25, Nov 08

ಕೋಲ್ಕತ್ತಾ - ಡಾರ್ಜಿಲಿಂಗ್ - ಪೂರಿ : 16 ದಿನಗಳು

ಡಾರ್ಜಿಲಿಂಗ್, ಗ್ಯಾಂಗ್‌ಟಕ್, ಸಿಲಿಗುರಿ, ಕೋಲ್ಕತ್ತಾ, ಪೂರಿ, ಕೊನಾರ್ಕ್, ಚಿಲ್ಕ ಲೇಕ್, ಭುವನೇಶ್ವರ್

Oct 27, Nov 06

ಕಾಶಿ - ಗಯಾ - ಪ್ರಯಾಗ್ : 12 ದಿನಗಳು

ಅಲಹಾಬಾದ್, ಗಯಾ, ಬುದ್ಧಗಯಾ, ಕಾಶಿ, ಸಾರಾನಾಥ್, ಅಯೋಧ್ಯಾ

Oct 27, Nov 17

ದ್ವಾರಕ ಮತ್ತು ಅಷ್ಠ ಜ್ಯೋತಿರ್ಲಿಂಗ : 24 ದಿನಗಳು

ಪುಷ್ಕರ, ನಾಥದ್ವಾರ, ಕಾಂಕ್ರೋಲಿ, ಏಕಲಿಂಗ್ಜಿ, ಉದಯಪುರ, ಮೌಂಟ್ ಅಬು, ಮಾತೃಗಯಾ, ಶಿರಡಿ, ದ್ವಾರಕ, ಬೇಟ್‌ದ್ವಾರಕ, ನಾಗೇಶಂ, ಮೂಲ ದ್ವಾರಕ, ಪೋರಬಂದರ್, ವಿರಾವಲ್, ಸೋಮನಾಥ್, ಡಾಕೋರ್, ಅಹಮದಾಬಾದ್, ಉಜ್ಜೈನಿ, ಓಂಕಾರೇಶ್ವರ, ಪರ್ಲಿ, ಔರಂಗಾಬಾದ್, ಘೃಷ್ಣೇಶ್ವರ, ನಾಸಿಕ್, ತ್ರಿಯಂಬಕ್, ಶಿರಡಿ, ಶನಿಸಿಂಗನಾಪುರ, ಭೀಮಾಶಂಕರ್

ಶ್ರೀ ಹನ್ಸಾ ಟ್ರಾವೆಲ್ಸ್

SHRI HANSAA TRAVELS

RECOGNISED BY DEPARTMENT OF TOURISM, GOVT. OF KARNATAKA

No. 640, 40th Cross (Near Prabha Eye Clinic), 8th Block, Jayanagar, Bangalore - 560 070.

☎ : (080) 26543891 / 26643276 Mobile : (0) 9341415612 / 9341215612

e-mail : hansaatravels@gmail.com web : www.hansaatravels.com

VIVEKA PRABHA (KANNADA MONTHLY)
July 2014 , Vol.15, No.07, No. of pages : 44

Registered With Registrar of News Papers Of India under 72356/2000.postal Regn.No.KA/SK/MYS/480/ 2012-14. LICENCED TO POST W.P.P.AT YADAVAGIRI MYSORE 570 020,VIDE LICENCE NO.SK/WPP/MYS/155/2013-15

INTERNATIONAL-CLASS CONDOS IN THE HEART OF MYSORE

SANKALP



SANKALP Central Park

PHASE I SOLD OUT
PHASE II BOOKINGS OPEN

You are welcome to visit our Model Flat. Phase 2 Construction in progress.

For years, Sankalp Group has been contributing to the rich heritage of Mysore with its unique realty projects. Even more so with the successful launch of Central Park, an International Lifestyle Residential Project. Located in the heart of the city, Yadavagiri, this gated community is developed over 28 acres. Loaded with world-class amenities, this first-of-its-kind, Ground + Seven Floors, project in Mysore offers 6 floor plan variants to choose from. A brand new lifestyle awaits you!

PROJECT AMENITIES:

BEACH POOL | CLUBHOUSE | SENIOR CITIZEN CENTER | GYM | ATM | HERBAL GARDEN | SKATING RINK | AMPHITHEATER

2 BHK
1288 sft

3 BHK - 1656 sft, 1733 sft, 1800 sft

1 sqm = 10.763 sft

SPECIAL OFFER FOR SENIOR CITIZENS AND DEFENCE PERSONNEL

SANKALP CENTRAL PARK THE WINNER OF 2 GLORIOUS AWARDS

Best Project of the Year 2013 by CREDAI Mysore | Best Innovative Design Project 2013 by CREDAI Karnataka

CREDAI MYSORE

CALL: 0821 - 2415477 / 98866 87758

Site Address: Sankalp Central Park Yadavgiri, Mysore I scp.phase2@gmail.com I www.sankalpgroup.com

Printed at mayur graphics,Bangalore